ಬುಧವಾರ, ಜನವರಿ 3, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 3 | ಪುಟ 12
● www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಸುರಕ್ಷಿತ ಚಾರಣಕ್ಕೆ ಯಾವ ತಾಂತ್ರಿಕ ಸವಲತ್ತು ಸೂಕ್ತ?



ಆಳ-ಅಗಲ
ಚಾಲಕನ ಸುರಕ್ಷತೆಯ ಹಕ್ಕು ಕಸಿದುಕೊಳ್ಳುವ 'ನ್ಯಾಯ'

ಜಾರ್ಖಂಡ್ ಮುಖ್ಯಮಂತ್ರಿ ಸೊರೇನ್ ಭವಿಷ್ಯ ಅತಂತ್ರ? 11
ಜಲ ವಿದ್ಯುತ್ ಯೋಜನೆಗೆ 'ರಹದಾರಿ' 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,892 ▼	21,665 ▼	₹65,350 (ಬೆಂಗಳೂರು) ▲	₹76,000 (ಬೆಂಗಳೂರು) ▲	83.32 ▼

16ನೇ ಹಣಕಾಸು ಆಯೋಗದ ಮೇಲೆ ಒತ್ತಡ ಹೇರುವ ಯತ್ನ

ತೆರಿಗೆ ಪಾಲು: ರಾಜ್ಯದ ಸೊಲ್ಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಪಾಲು ನೀಡುತ್ತಿದ್ದರೂ ರಾಜ್ಯಕ್ಕೆ ಸಿಗುತ್ತಿರುವ ತೆರಿಗೆ ಪಾಲಿನ ಮೊತ್ತ ವರ್ಷದಿಂದ ವರ್ಷಕ್ಕೆ ಇಳಿಕೆ ಮಾಡುತ್ತಿರುವುದರ ವಿರುದ್ಧ ಸೊಲ್ಲೆತ್ತಲು ಕರ್ನಾಟಕ ಅಣಿಯಾಗಿದೆ.

2025–26ರಿಂದ ತನ್ನ ಚಟುವಟಿಕೆ ಆರಂಭಿಸಲಿರುವ 16ನೇ ಹಣಕಾಸು ಆಯೋಗದ ಮುಂದೆ ತಮ್ಮ ನ್ಯಾಯದ ಪಾಲನ್ನು ಕೇಳುವ ಸಲುವಾಗಿ ಅಭಿವೃದ್ಧಿ ಹೊಂದಿದ ರಾಜ್ಯಗಳನ್ನು ಒಗ್ಗೂಡಿಸುವತ್ತ ಸರ್ಕಾರ ಹೆಜ್ಜೆ ಇಟ್ಟಿದೆ. ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ಅನ್ಯಾಯ'ಕ್ಕೆ ಒಳಗಾದ ರಾಜ್ಯಗಳ ನ್ಯಾಯಯುತ ಹಕ್ಕು ಪ್ರತಿಪಾದಿಸಲು ಮುಂದಡಿ ಇಟ್ಟಿದ್ದಾರೆ. ಹಣಕಾಸು ಆಯೋಗದ ಮುಂದೆ ಮಂಡಿಸಬೇಕಾದ ವಾದದ ನೆಲೆ ರೂಪಿಸಲು 'ವಿಶೇಷ ಕೋಶ'ವನ್ನು ರಚಿಸಲು ನಿರ್ದೇಶನ ನೀಡಿದ್ದಾರೆ ಎಂದು ಗೊತ್ತಾಗಿದೆ.

15 ನೇ ಹಣಕಾಸು ಆಯೋಗ ರಚನೆಯಾಗುವವರೆಗೆ ರಾಜ್ಯಕ್ಕೆ ಸಮಾಧಾನ ಪ್ರಮಾಣದ ಪಾಲು ಸಿಗುತ್ತಿತ್ತು. ಬಳಿಕ ತೆರಿಗೆ ಪಾಲು, ಕೇಂದ್ರದ ಅನುದಾನ, ಸಹಾಯಧನ ಕುಸಿಯುತ್ತಲೇ ಹೋಯಿತು. '15ನೇ ಹಣಕಾಸು ಆಯೋಗದ ಅವಧಿಯಲ್ಲಿ ಕರ್ನಾಟಕಕ್ಕೆ ಒಂದು ಪ್ರಮುಖ ಮತ್ತು ಗಂಭೀರ ಸವಾಲು ಎದುರಾಯಿತು. ಕೇಂದ್ರ ತೆರಿಗೆಗಳ ಪಾಲು ಕಡಿಮೆಯಾಯಿತು. 14ನೇ ಹಣಕಾಸು ಆಯೋಗದ ಅವಧಿಯಲ್ಲಿ ತೆರಿಗೆಯಲ್ಲಿ ಭಾಗಿಸಬಹುದಾದ ಗುಣಕವು ಶೇ 1.98ರಷ್ಟಿದ್ದರೆ, 2021-26ರ ಅವಧಿಯ 15 ನೇ ಹಣಕಾಸು ಆಯೋಗದ ಅವಧಿಯಲ್ಲಿ ಶೇ 1.5ಕ್ಕೆ ಇಳಿಕೆಯಾಯಿತು. ಎರಡು ಆಯೋಗದ ಶಿಫಾರಸುಗಳ ನಡುವೆ ಕರ್ನಾಟಕವು ಕೇಂದ್ರದ ತೆರಿಗೆ ವರ್ಗಾವಣೆಯ ಪಾಲಿನಲ್ಲಿ ಶೇ 24.5ರಷ್ಟು ಕುಸಿತ ಕಂಡಿತು' ಎಂದು 2023ರ ಫೆಬ್ರುವರಿಯಲ್ಲಿ ವಿಧಾನಸಭೆಯಲ್ಲಿ ಮಂಡಿಸಲಾದ ಆರ್ಥಿಕ ಸಮೀಕ್ಷೆ ಉಲ್ಲೇಖಿಸಿದೆ.

14ನೇ ಹಣಕಾಸು ಆಯೋಗದ ಅವಧಿಯಲ್ಲಿ ಕರ್ನಾಟಕಕ್ಕೆ ಶೇ 4.71ರಷ್ಟು ಪಾಲು ನೀಡಲಾಗಿತ್ತು.

7ನೇ ಪುಟ ನೋಡಿ

ಯಾವ ರಾಜ್ಯಗಳಿಗೆ ಎಷ್ಟು ತೆರಿಗೆ ಪಾಲು*

ರಾಜ್ಯ	ತೆರಿಗೆ ಪಾಲು(ಶೇ)	ಮೊತ್ತ (₹ಕೋಟಿಗಳಲ್ಲಿ)
ಕರ್ನಾಟಕ	3.64	37,252.21
ತಮಿಳುನಾಡು	4.07	41,664.86
ತೆಲಂಗಾಣ	2.10	21,470.84
ಆಂಧ್ರಪ್ರದೇಶ	4.04	41,338.02
ಮಹಾರಾಷ್ಟ್ರ	6.31	64524.88
(ಅಭಿವೃದ್ಧಿ ಹೊಂದಿದ ರಾಜ್ಯಗಳಿಗೆ ಸಿಗುತ್ತಿರುವ ಪಾಲು)		
ಬಿಹಾರ	10.05	1,02,737.26
ಮಧ್ಯಪ್ರದೇಶ	7.85	80,183.67
ರಾಜಸ್ತಾನ	6.02	61,552.47
ಉತ್ತರಪ್ರದೇಶ	17.93	1,83,237.59
ಪಶ್ಚಿಮಬಂಗಾಳ	7.52	76,843

(ಅಭಿವೃದ್ಧಿ ಹೊಂದದ ರಾಜ್ಯಗಳಿಗೆ ಸಿಗುತ್ತಿರುವ ಪಾಲು)
*ಕೇಂದ್ರ ಸರ್ಕಾರ ರಾಜ್ಯಸಭೆಗೆ ನೀಡಿದ ಮಾಹಿತಿ

ಅನುದಾನದ ಲೆಕ್ಕಾಚಾರ* (₹ಕೋಟಿಗಳಲ್ಲಿ)

ಅನುದಾನ	ಎಲ್ಲ ರಾಜ್ಯಗಳಿಗೆ	ಕರ್ನಾಟಕ	ರಾಜ್ಯಕ್ಕೆ (%)
ರಾಜಸ್ವ ಕೊರತೆ ಅನುದಾನ	2,94,514	1,631	0.6
ಸ್ಥಳೀಯ ಸಂಸ್ಥೆಗಳಿಗೆ ಅನುದಾನ	4,36,361	21,877	5.0
ವಲಯ-ನಿರ್ದಿಷ್ಟ ಅನುದಾನ	1,29,987	4,560	3.5
ವಿಪತ್ತು ನಿರ್ವಹಣೆ ಅನುದಾನ	1,22,601	4,369	3.6
ರಾಜ್ಯ-ನಿರ್ದಿಷ್ಟ ಅನುದಾನ	49,599	6,000	12.1
ಒಟ್ಟು ಸರಾಸರಿ	10,33,062	38,437	3.7

*ಕರ್ನಾಟಕ ಸರ್ಕಾರದ ಆರ್ಥಿಕ ಸಮೀಕ್ಷೆ

ವಿಶೇಷ ಕೋಶದಲ್ಲಿ ಯಾರು?


ಸರ್ಕಾರ ರಚಿಸಲಿರುವ ವಿಶೇಷ ಕೋಶದಲ್ಲಿ 14 ನೇ ಹಣಕಾಸು ಆಯೋಗದ ಸದಸ್ಯ ಎಂ.ಗೋವಿಂದ ರಾವ್, ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್. ಶ್ರೀನಿವಾಸ ಮೂರ್ತಿ ಮತ್ತು ನಿಯಾಸ್‌ನ ನರೇಂದ್ರ ಪಾಣಿ ಅವರು ಇರುವ ಸಾಧ್ಯತೆ ಹೆಚ್ಚಿದೆ ಎಂದು ಮೂಲಗಳು ಹೇಳಿವೆ.

'ಇತರ ರಾಜ್ಯಗಳ ಸಹಕಾರ ಪಡೆಯುತ್ತೇವೆ'



'ತೆರಿಗೆ ಪಾಲಿನ ಹಂಚಿಕೆಯಲ್ಲಿ ನಷ್ಟ ಅನುಭವಿಸುತ್ತಿರುವ ರಾಜ್ಯಗಳನ್ನು ಒಟ್ಟಿಗೆ ಸೇರಿಸಿ, ಒಗ್ಗಟ್ಟಿನಿಂದ ಹೋರಾಟ ಮಾಡಲು ತೀರ್ಮಾನಿಸಿದ್ದೇವೆ. ನಷ್ಟಕ್ಕೊಳಗಾದ ರಾಜ್ಯಗಳ ಸಹಕಾರವನ್ನು ಕೇಳುತ್ತೇವೆ. ಮುಖ್ಯವಾಗಿ ಮಹಾರಾಷ್ಟ್ರ, ಕೇರಳ, ತಮಿಳುನಾಡು ಅಲ್ಲದೇ, ಪಶ್ಚಿಮ ಬಂಗಾಳದ ನೆರವನ್ನೂ ಕೇಳುತ್ತೇವೆ. ಈ ರಾಜ್ಯಗಳೂ ತೆರಿಗೆ ಹಂಚಿಕೆಯಿಂದ ನಷ್ಟ ಅನುಭವಿಸಿವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು.

7ನೇ ಪುಟ ನೋಡಿ



ಧಗಧಗಿಸಿದ ಲೋಹದ ಹಕ್ಕಿ

ಜಪಾನ್‌ನ ಹನೆಡಾ ವಿಮಾನನಿಲ್ದಾಣದ ರನ್‌ವೇನಲ್ಲಿ ಮಂಗಳವಾರ ಬೆಂಕಿ ಹೊತ್ತಿಕೊಂಡು ಧಗಧಗಿಸಿ ಉರಿದ ಜಪಾನ್ ಏರ್‌ವೇಸ್‌ನ ವಿಮಾನ –ಎಎಫ್‌ಪಿ ಚಿತ್ರ

10

ಬೆಂಗಳೂರು ವಿ.ವಿ ಕುಲಪತಿ ನೇತೃತ್ವದ ಸಮಿತಿ ಶಿಫಾರಸು

ಆತ್ಮಹತ್ಯೆ ತಡೆಗೆ ಓಪನ್ ಬುಕ್ ಪರೀಕ್ಷೆ

● ರಶ್ಮಿ ಬೇಲೂರು

ಬೆಂಗಳೂರು: ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಯಲು, ಒತ್ತಡ ಕಡಿಮೆ ಮಾಡಲು ಉನ್ನತ ಶಿಕ್ಷಣದಲ್ಲಿ 'ಓಪನ್ ಬುಕ್' ಪರೀಕ್ಷೆ ಪರಿಚಯಿಸಬೇಕು ಎಂದು ತಜ್ಞರ ಸಮಿತಿ ಶಿಫಾರಸು ಮಾಡಿದೆ.

2023ರ ಜುಲೈನಲ್ಲಿ ಪಿಇಎಸ್ ವಿಶ್ವವಿದ್ಯಾನಿಲಯದ ಬಿ.ಟೆಕ್ ವಿದ್ಯಾರ್ಥಿ ಆದಿತ್ಯಪ್ರಭು ಆತ್ಮಹತ್ಯೆ ಮಾಡಿಕೊಂಡ ನಂತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಶೈಕ್ಷಣಿಕ ಒತ್ತಡ ಕುರಿತು ಅಧ್ಯಯನ ಮಾಡಿ, ವರದಿ ನೀಡಲು ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ಎಂ. ಜಯಕರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು.

ನಕಲು ಮಾಡುವಾಗ ಸಿಕ್ಕಿಬಿದ್ದ ಕಾರಣಕ್ಕೆ ಕೆಲ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವುದು ತನಿಖೆಗಳಿಂದ ದೃಢಪಟ್ಟಿದೆ. ಇಂತಹ ಅವಘಡ ತಪ್ಪಿಸಲು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡಬೇಕಿದೆ. ಮುಕ್ತ ವಾತಾವರಣದಲ್ಲಿ ವ್ಯಾಸಂಗ ಮಾಡಲು, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸಲು 'ಓಪನ್ ಬುಕ್' ಪರೀಕ್ಷಾ ವಿಧಾನ ಸಹಕಾರಿಯಾಗಿದೆ. ಹಾಗಾಗಿ, ಉನ್ನತ ಶಿಕ್ಷಣದ ಎಲ್ಲ ಹಂತ, ವಿಭಾಗಗಳಲ್ಲೂ ಇಂತಹ ಸಾಧ್ಯತೆಗಳನ್ನು ಪರಿಶೀಲಿಸಲು ಪ್ರತ್ಯೇಕ ಸಮಿತಿ ರಚಿಸುವಂತೆ ಉನ್ನತ ಶಿಕ್ಷಣ ಇಲಾಖೆಗೆ ಸಲಹೆ ನೀಡಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಈಗಾಗಲೇ ಎಂಜಿನಿಯರಿಂಗ್ ಪರೀಕ್ಷೆಗಳಿಗೆ 'ಓಪನ್ ಬುಕ್' ವ್ಯವಸ್ಥೆಯನ್ನು ಪರಿಚಯಿಸಿದೆ. ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಕೈಪಿಡಿ ಅಥವಾ ಉಲ್ಲೇಖ ಸಾಮಗ್ರಿಯನ್ನು ಒದಗಿಸುತ್ತದೆ.

7ನೇ ಪುಟ ನೋಡಿ

ಲೋಪ ಎತ್ತಿ ಹಿಡಿದ ಸಮಿತಿ

ಆತ್ಮಹತ್ಯೆ ಮಾಡಿಕೊಂಡಿದ್ದ ಬಿ.ಟೆಕ್ ವಿದ್ಯಾರ್ಥಿ ಆದಿತ್ಯಪ್ರಭು ಪ್ರಕರಣದಲ್ಲಿ ಪಿಇಎಸ್ ವಿಶ್ವವಿದ್ಯಾಲಯದ ಲೋಪಗಳನ್ನು ಸಮಿತಿ ಪಟ್ಟಿ ಮಾಡಿದೆ.

ವಿದ್ಯಾರ್ಥಿ ಪರೀಕ್ಷಾ ಕೇಂದ್ರ ಪ್ರವೇಶಿಸುವಾಗ ತಪಾಸಣೆ ನಡೆಸಿಲ್ಲ. ಮೇಲ್ವಿಚಾರಣೆ ಮಾಡದೆ ಬಿಡಲಾಗಿದೆ. ಪರೀಕ್ಷೆ ಮುಗಿಯುವ 10 ನಿಮಿಷ ಮೊದಲು ಆತ ಸಿಕ್ಕಿಬಿದ್ದಿದ್ದಾನೆ. ಯಾವುದೇ ವಿಷಯ ತಜ್ಞರು ವಿದ್ಯಾರ್ಥಿಯ ಮೊಬೈಲ್ ಪರಿಶೀಲಿಸಲಿಲ್ಲ. ಮೊಬೈಲ್ ವಶಕ್ಕೆ ಪಡೆದ ತಕ್ಷಣ ಪರಿಶೀಲನೆ ನಡೆಸದೇ ಅವರ ತಾಯಿಗೆ ಕರೆ ಮಾಡಿದ್ದು ವಿದ್ಯಾರ್ಥಿ ಧೈರ್ಯ ಕಳೆದುಕೊಳ್ಳಲು ಪ್ರಮುಖ ಕಾರಣ. ಪರೀಕ್ಷಾ ಮುಖ್ಯಸ್ಥರು, ಮೇಲ್ವಿಚಾರಕರು ಕಾರ್ಯವಿಧಾನದಲ್ಲಿ ವಿಫಲರಾಗಿದ್ದಾರೆ ಎಂದು ಸಮಿತಿ ಹೇಳಿದೆ.

ಜನವರಿ ತಿಂಗಳ ವಿದ್ಯುತ್ ಬಿಲ್ ತುಸು ಹಗುರ

ಬೆಂಗಳೂರು: ನವೆಂಬರ್ ತಿಂಗಳಲ್ಲಿ ಇಂಧನ ಮತ್ತು ವಿದ್ಯುತ್ ಖರೀದಿ ಹೊಂದಾಣಿಕೆ ವೆಚ್ಚ ಇಳಿಕೆ ಆಗಿರುವ ಕಾರಣ ರಾಜ್ಯದ ಎಲ್ಲ ಎಸ್ಕಾಂಗಳು ಗ್ರಾಹಕರಿಗೆ ಜನವರಿ ತಿಂಗಳಲ್ಲಿ ನೀಡುವ ವಿದ್ಯುತ್ ಬಿಲ್‌ನಲ್ಲಿ ಪ್ರತಿ ಯೂನಿಟ್‌ಗೆ 3 ಪೈಸೆಯಿಂದ 51 ಪೈಸೆವರೆಗೂ ಕಡಿತಗೊಳಿಸಲು ನಿರ್ಧರಿಸಿವೆ. 5

ಐಸಿಯು ಚಿಕಿತ್ಸೆ: ಕೇಂದ್ರ ಸರ್ಕಾರದ ಮಾರ್ಗಸೂಚಿ

ರೋಗಿ, ಬಂಧುಗಳ ಒಪ್ಪಿಗೆ ಅಗತ್ಯ

ನವದೆಹಲಿ (ಪಿಟಿಐ): ರೋಗಿಯ ಸ್ಥಿತಿ ಗಂಭೀರವಾಗಿದ್ದರೂ ಸಂಬಂಧಿಕರು ಅಥವಾ ಆ ರೋಗಿಯ ಒಪ್ಪಿಗೆಯಿಲ್ಲದೆ ಅವರನ್ನು ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಿಸುವಂತಿಲ್ಲ ಎಂದು ಕೇಂದ್ರ ಸರ್ಕಾರದ ಹೊಸ ಮಾರ್ಗಸೂಚಿ ತಿಳಿಸಿದೆ.

ರೋಗಿಯನ್ನು ಯಾವ ಸಂದರ್ಭದಲ್ಲಿ ಐಸಿಯುಗೆ ದಾಖಲಿಸಬಹುದು ಮತ್ತು ದಾಖಲಿಸಬಾರದು ಎಂಬುದರ ಕುರಿತು 24 ತಜ್ಞರ ಅಭಿಪ್ರಾಯ ಆಧರಿಸಿ ಹೊಸ ಮಾರ್ಗಸೂಚಿಯನ್ನು ಸಿದ್ಧಪಡಿಸಲಾಗಿದೆ.



'ಯಾವುದೇ ರೋಗಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಚಿಕಿತ್ಸೆ ಸಾಧ್ಯವಿಲ್ಲ ಅಥವಾ ಲಭ್ಯವಿಲ್ಲ ಎಂಬುದು ಖಾತರಿಯಾದರೆ, ಚಿಕಿತ್ಸೆ ಮುಂದುವರಿಸಿದರೂ ರೋಗಿಯ ಜೀವ ಉಳಿಸುವುದು ಅಸಾಧ್ಯ ಎಂಬುದು ಮನವರಿಕೆಯಾದ ಬಳಿಕ ಐಸಿಯುನಲ್ಲಿ ಚಿಕಿತ್ಸೆ ಮುಂದುವರಿಸುವುದು ನಿರರ್ಥಕ' ಎಂದು ಮಾರ್ಗಸೂಚಿ ತಿಳಿಸಿದೆ.

ಕೃತಕ ಉಸಿರಾಟದ ನೆರವಿನ ಅವಶ್ಯಕತೆ, ತೀವ್ರ ನಿಗಾದ ಅಗತ್ಯ ಅಥವಾ ಆರೋಗ್ಯ ಇನ್ನಷ್ಟು ಹದಗೆಡುವ ಸಾಧ್ಯತೆಯಿರುವ ರೋಗಿಗಳಿಗೆ ಐಸಿಯುನಲ್ಲಿ ಆರೈಕೆಗೆ ಶಿಫಾರಸು ಮಾಡಲಾಗಿದೆ. ಆದರೆ, ರೋಗಿಯ ಸಂಬಂಧಿಕರು ಐಸಿಯು ಚಿಕಿತ್ಸೆ ಬೇಡವೆಂದರೆ ದಾಖಲಿಸುವಂತಿಲ್ಲ ಎಂದಿದೆ.

ಐಸಿಯುಗೆ ದಾಖಲಿಸುವ ಮುನ್ನ ರೋಗಿಯ ರಕ್ತದೊತ್ತಡ, ನಾಡಿ ಮಿಡಿತ, ಉಸಿರಾಟ ಕ್ರಿಯೆ, ಹೃದಯದ ಆರೋಗ್ಯ, ಮೂತ್ರ ವಿಸರ್ಜನೆಯ ಪ್ರಮಾಣ ಮತ್ತು ನರವ್ಯೂಹದ ಸ್ಥಿತಿಗತಿಯನ್ನು ಪರೀಕ್ಷಿಸಬೇಕು ಎಂದು ಮಾರ್ಗಸೂಚಿ ಹೇಳಿದೆ.

ಮಾರ್ಗಸೂಚಿಯಲ್ಲಿ ಏನಿದೆ?

- ಅಂಗಾಂಗ ವೈಫಲ್ಯ ಆಗಿದ್ದರೆ, ಅಂಗಾಂಗಗಳ ಕಾರ್ಯನಿರ್ವಹಣೆಗೆ ಕೃತಕ ಉಪಕರಣಗಳ ಅವಶ್ಯಕತೆ ಇದ್ದರೆ ಮತ್ತು ಆರೋಗ್ಯ ಸ್ಥಿತಿ ಕ್ಷೀಣಿಸುತ್ತಿದ್ದರೆ ರೋಗಿಯನ್ನು ಐಸಿಯುಗೆ ಸೇರಿಸಬಹುದು
- 'ಮರಣ ಇಚ್ಛೆಯ ಉಯಿಲು' ಬರೆದಿಟ್ಟವರನ್ನು ಐಸಿಯುಗೆ ದಾಖಲಿಸುವಂತಿಲ್ಲ
- ಹೃದಯ ಅಥವಾ ಉಸಿರಾಟಕ್ಕೆ ಸಂಬಂಧಿಸಿದಂತೆ ಗಂಭೀರ ಸಮಸ್ಯೆ ಎದುರಿಸುತ್ತಿರುವವರು ಹಾಗೂ ಗಂಭೀರ ಸ್ವರೂಪದ ಶಸ್ತ್ರಚಿಕಿತ್ಸೆಗೆ ಒಳಗಾದ ರೋಗಿಯನ್ನು ಐಸಿಯುಗೆ ದಾಖಲಿಸಬಹುದು.

ಜಮೀನು ನಕ್ಷೆಗೆ ಅರ್ಜಿ ಶುಲ್ಕ ₹1 ಸಾವಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾವಲಂಬಿ ಯೋಜನೆ ಅಡಿ ಜಮೀನು ನಕ್ಷೆಗಾಗಿ (ಸ್ಕೆಚ್) ಸಲ್ಲಿಸುವ ಪ್ರತಿ ಅರ್ಜಿಗೆ ₹1 ಸಾವಿರ ಶುಲ್ಕ ನಿಗದಿ ಮಾಡಲಾಗಿದೆ.

11–ಇ ನಕ್ಷೆ, ಭೂ ಪರಿವರ್ತನೆ ಪೂರ್ವನಕ್ಷೆ, ತತ್ಕಾಲ್ ಪೋಡಿಗೆ ಎರಡು ಎಕರೆವರೆಗೆ ₹2,500 (ನಗರ) ಹಾಗೂ ₹1,500 (ಗ್ರಾಮೀಣ), ಎರಡು ಎಕರೆ ನಂತರ ಪ್ರತಿ ಎಕರೆಗೆ ಕ್ರಮವಾಗಿ ₹1 ಸಾವಿರ ಹಾಗೂ ₹ 400 ನಿಗದಿ ಮಾಡಲಾಗಿದೆ.

ಹದ್ದುಬಸ್ತುಗೆ ₹2 ಸಾವಿರ (ನಗರ) ಹಾಗೂ ₹500 (ಗ್ರಾಮೀಣ), ಎರಡು ಎಕರೆ ನಂತರ ಕ್ರಮವಾಗಿ ಪ್ರತಿ ಎಕರೆಗೆ ₹400 ಹಾಗೂ ₹300 ಶುಲ್ಕ ಪಾವತಿಸಬೇಕಿದೆ. ಈ ಆದೇಶ ಜ. 1ರಿಂದಲೇ ಅನ್ವಯವಾಗಲಿದೆ ಎಂದು ಕಂದಾಯ ಇಲಾಖೆ ಹೇಳಿದೆ.

'ಜಿಲ್ಲಾಸ್ಪತ್ರೆಗಳಲ್ಲಿ 50 ಹಾಸಿಗೆ ಮೀಸಲು'

ಬೆಂಗಳೂರು: 'ಕೇಂದ್ರದಿಂದ ರಾಜ್ಯಕ್ಕೆ 30 ಸಾವಿರ ಕೋವಿಡ್ ಲಸಿಕೆ ಬಂದಿದೆ. 60 ವರ್ಷ ದಾಟಿದವರು ಮತ್ತು ದೀರ್ಘ ಅವಧಿಯಿಂದ ರೋಗಗಳಿಂದ ಬಳಲುತ್ತಿರುವವರು ಕೋವಿಡ್ ಲಸಿಕೆ ತೆಗೆದುಕೊಳ್ಳಬೇಕು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಸಲಹೆ ನೀಡಿದರು. 5

'ರಾಮಲಲ್ಲಾ ಮೂರ್ತಿ: ಅಂತಿಮ ಆಯ್ಕೆ ಆಗಿಲ್ಲ'

ಅಯೋಧ್ಯೆ: 'ಅಯೋಧ್ಯೆಯ ರಾಮ ಮಂದಿರದಲ್ಲಿ ಪ್ರತಿಷ್ಠಾಪಿಸಬೇಕಿರುವ ರಾಮಲಲ್ಲಾ ಮೂರ್ತಿ ಆಯ್ಕೆ ಕುರಿತು ಇನ್ನೂ ಅಂತಿಮ ತೀರ್ಮಾನ ಕೈಗೊಂಡಿಲ್ಲ' ಎಂದು ರಾಮ ಮಂದಿರ ಟ್ರಸ್ಟ್ ಸ್ಪಷ್ಟಪಡಿಸಿದೆ. 11

ಸಂಗಾತಿ ಬದಲು ಮಕ್ಕಳಿಗೆ ಪಿಂಚಣಿ: ಅವಕಾಶ

ನವದೆಹಲಿ: ಕೇಂದ್ರ ಸರ್ಕಾರದ ಮಹಿಳಾ ಉದ್ಯೋಗಿಗಳು ತಮಗೆ ಸಿಗುವ ಪಿಂಚಣಿಗೆ ಪತಿಯ ಬದಲು ಮಕ್ಕಳ ಹೆಸರನ್ನು ನಾಮನಿರ್ದೇಶನ ಮಾಡಲು ಅವಕಾಶ ನೀಡಲಾಗಿದೆ. 11



ಬೀದರ್‌ನ ಸಿಂದೋಲ್ ಪೆಟ್ರೋಲ್ ಬಂಕ್‌ನಲ್ಲಿ ಮಂಗಳವಾರ ಪೆಟ್ರೋಲ್ ಹಾಕಿಸಿಕೊಳ್ಳಲು ಜನ ಮುಗಿಬಿದ್ದಿದ್ದರು

ಪೆಟ್ರೋಲ್, ಡೀಸೆಲ್ ಖರೀದಿಗೆ ನೂಕುನುಗ್ಗಲು

ಟ್ರಕ್ ಚಾಲಕರ ಪ್ರತಿಭಟನೆ

ನವದೆಹಲಿ (ಪಿಟಿಐ): 'ಅಪಘಾತ ನಡೆಸಿ ಪರಾರಿ'ಯಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಾರಿಯಾಗಲಿರುವ ಹೊಸ ಕಾನೂನು ವಿರೋಧಿಸಿ ದೇಶದ ವಿವಿಧ ರಾಜ್ಯಗಳಲ್ಲಿ ಟ್ರಕ್, ಟ್ಯಾಂಕರ್ ಮತ್ತು ವಾಣಿಜ್ಯ ವಾಹನಗಳ ಚಾಲಕರು ನಡೆಸುತ್ತಿರುವ ಪ್ರತಿಭಟನೆಯು ಎರಡನೇ ದಿನವಾದ ಮಂಗಳವಾರ ತೀವ್ರಗೊಂಡಿದೆ. ಮಹಾರಾಷ್ಟ್ರ, ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ, ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರದ ವಿವಿಧೆಡೆ ಹೋರಾಟ ತೀವ್ರ ಸ್ವರೂಪ ಪಡೆದಿದ್ದು, ಸರಕು ಸಾಗಣೆ ಸೇವೆಯು ಅಸ್ತವ್ಯಸ್ತಗೊಂಡಿದೆ.

10ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು



ಸಿ.ಟಿ.ರವಿ, ಶೋಭಾ ಸ್ಪರ್ಧೆ ತಡೆಗೆ 'ಡಿವಿಎಸ್ ದಾಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ತಿಂಗಳ ಹಿಂದೆ ನಿವೃತ್ತಿ ಮಾತುಗಳನ್ನು ಆಡಿದ್ದ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ ಸಂಸದ ಡಿ.ವಿ.ಸದಾನಂದಗೌಡ ಅವರು ಪುನಃ ಸ್ಪರ್ಧಿಸುವ ಬಗ್ಗೆ ಆಸಕ್ತಿ ತೋರಿಸಿರುವುದು ಬಿಜೆಪಿಯಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಪಕ್ಷದ ಪದಾಧಿಕಾರಿಗಳ ಆಯ್ಕೆ ಬಗ್ಗೆ ಸದಾನಂದಗೌಡರು ಅಸಮಾಧಾನ ವ್ಯಕ್ತಪಡಿಸಿದ್ದರು. ಬೆನ್ನಲ್ಲೇ ವಿರೋಧಪಕ್ಷದ ನಾಯಕ ಆರ್.ಅಶೋಕ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕ ಬಸವರಾಜ ಬೊಮ್ಮಾಯಿ ಅವರು ಗೌಡರನ್ನು ಭೇಟಿ ಮಾಡಿದ ಬಳಿಕ ಡಿವಿಎಸ್ ವರಸೆ ಬದಲಾಗಿದೆ.

ಸದಾನಂದಗೌಡರು ಈ ಬಾರಿ ಸ್ಪರ್ಧಿಸುವುದಿಲ್ಲ ಅಥವಾ ಟಿಕೆಟ್ ಕೊಡುವುದಿಲ್ಲ ಎಂಬ ಕಾರಣಕ್ಕೆ ಹಲವರು ಈ ಕ್ಷೇತ್ರದ ಮೇಲೆ ಕಣ್ಣಿಟ್ಟಿದ್ದಾರೆ. ಬಿಜೆಪಿಗೆ ಇದು ಸುರಕ್ಷಿತ ಕ್ಷೇತ್ರ ಎಂಬ ಉದ್ದೇಶದಿಂದ ಮಾಜಿ ಶಾಸಕ ಸಿ.ಟಿ.ರವಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸೇರಿ ಹಲವರು ಆಕಾಂಕ್ಷಿಗಳಾಗಿದ್ದಾರೆ. ಶೋಭಾ ಉತ್ತರ ಕ್ಷೇತ್ರದಿಂದ ಸ್ಪರ್ಧಿಸುವುದಾದರೆ ಸಿ.ಟಿ.ರವಿ ಚಿಕ್ಕಮಗಳೂರು-ಉಡುಪಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಒಂದು ವೇಳೆ ಶೋಭಾ ಸ್ವಕ್ಷೇತ್ರದಲ್ಲಿ ಸ್ಪರ್ಧಿಸಿದರೆ ಉತ್ತರ ಕ್ಷೇತ್ರದಿಂದ ರವಿ ಸ್ಪರ್ಧಿಸುವ ಬಯಕೆ ಹೊಂದಿದ್ದಾರೆ ಎಂದು ಮೂಲಗಳು ಹೇಳಿವೆ.

ಆದರೆ, ಈ ಇಬ್ಬರು ಬೆಂಗಳೂರಿಗೆ ಬಂದು ಸ್ಪರ್ಧಿಸುವುದನ್ನು ತಡೆಯಲು ಬಿಜೆಪಿಯ ಒಂದು ಬಣ ಪ್ರಯತ್ನ ಆರಂಭಿಸಿದೆ. ಈ ಪ್ರಯತ್ನದ ಭಾಗವಾಗಿ ಸದಾನಂದ ಗೌಡರಿಗೆ ಟಿಕೆಟ್ ಆಸೆ ತೋರಿಸಲಾಗಿದೆ. ಹೀಗಾಗಿ ಅವರು ಮತ್ತೆ ಸ್ಪರ್ಧಿಸುವ ಬಗ್ಗೆ ಆಸಕ್ತಿ ತೋರಿಸಿದ್ದಾರೆ. ಒಂದು ವೇಳೆ ಬಿಜೆಪಿ ಟಿಕೆಟ್ ನೀಡದಿದ್ದರೆ ಕಾಂಗ್ರೆಸ್ ಅವರನ್ನು ಬುಟ್ಟಿಗೆ ಹಾಕಿಕೊಳ್ಳಬಹುದು ಎಂಬ ಸಣ್ಣ ಅಳುಕು ಪಕ್ಷದ ಕೆಲವು ನಾಯಕರಲ್ಲಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪೊಲೀಸ್ ಅಧಿಕಾರಿಗಳಿಗೆ ಗೃಹ ಸಚಿವ ಜಿ. ಪರಮೇಶ್ವರ ಸೂಚನೆ

'ಮಾದಕದ್ರವ್ಯ ಮುಕ್ತ ರಾಜ್ಯ ರೂಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕವನ್ನು 'ಮಾದಕದ್ರವ್ಯ ಮುಕ್ತ' ರಾಜ್ಯವಾಗಿ ಮಾಡಬೇಕು ಎಂಬುದು ನನ್ನ ಗುರಿ. ಮುಖ್ಯಮಂತ್ರಿ ಕೂಡಾ ಇದೇ ಆಶಯ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕ್ರಿಯಾ ಯೋಜನೆ ರೂಪಿಸಬೇಕು' ಎಂದು ಪೊಲೀಸ್ ಅಧಿಕಾರಿಗಳಿಗೆ ಗೃಹ ಸಚಿವ ಜಿ. ಪರಮೇಶ್ವರ ಸೂಚನೆ ನೀಡಿದರು.

ಸದಾಶಿವನಗರದಲ್ಲಿರುವ ತಮ್ಮ ಗೃಹ ಕಚೇರಿಯಲ್ಲಿ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್, ಹೆಚ್ಚುವರಿ ಪೊಲೀಸ್ ಕಮಿಷನರ್‌ಗಳಾದ ರಮಣಗುಪ್ತ, ಸತೀಶ್, ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ಸೇರಿದಂತೆ ನಗರದ ಎಲ್ಲ ವಿಭಾಗಗಳ ಡಿಸಿಪಿಗಳ ಜತೆ ಸಚಿವರು ಮಂಗಳವಾರ ಸಭೆ ನಡೆಸಿದರು.


> ಪೊಲೀಸ್ ಇ-ಬೀಟ್ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಬೇಕು. ಹಳೆಯ ಪ್ರಕರಣಗಳ ಮೇಲೆ ನಿಗಾವಹಿಸಬೇಕು. ಆಯಾ ವಿಭಾಗದಲ್ಲಿ ನಡೆಯುವ ಘಟನೆಗಳಿಗೆ ಡಿಸಿಪಿಗಳು ಜವಾಬ್ದಾರರು
>
> **ಜಿ. ಪರಮೇಶ್ವರ,** ಗೃಹ ಸಚಿವ

'ಕೆಲವು ದೇಶಗಳ ಪ್ರಜೆಗಳು ಮಾದಕದ್ರವ್ಯ ಚಟುವಟಿಕೆಯಲ್ಲಿ ಹೆಚ್ಚು ತೊಡಗುತ್ತಿದ್ದಾರೆ. ಹಲವು ವರ್ಷಗಳಿಂದ ನಗರದಲ್ಲಿ ವಾಸಿಸುತ್ತಿರುವ ಹಾಗೂ ನಗರಕ್ಕೆ ಬರುವ ವಿದೇಶಿ ಪ್ರಜೆಗಳ ಮೇಲೆ ಕಣ್ಣಿಡಬೇಕು. ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು' ಎಂದು ಸೂಚನೆ ನೀಡಿದರು.

'ರಾಜ್ಯದಲ್ಲಿ ಗುಂಪುಗಲಭೆ ಕಡಿಮೆಯಾಗಿವೆ. ಅಮಾಯಕ ಮಕ್ಕಳು ಅಪರಾಧ ಪ್ರಕರಣಗಳಲ್ಲಿ ಸಿಲುಕುತ್ತಿದ್ದು, ಈ ಬಗ್ಗೆ ನಿಗಾವಹಿಸಬೇಕು. ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಅರಿವು ಮೂಡಿಸಬೇಕು. ನಗರದಲ್ಲಿ ಸಂಚಾರ ದಟ್ಟಣೆ ಸಮಸ್ಯೆ ಶೇ 50ರಷ್ಟು ನಿಯಂತ್ರಣಕ್ಕೆ ಬಂದಿದೆ. ಇದಕ್ಕೆ ಇನ್ನೂ ಹೆಚ್ಚಿನ ಒತ್ತು ನೀಡಬೇಕು' ಎಂದರು.

'ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ತಮ್ಮ ದೈನಂದಿನ ಅನುಭವಗಳ ಆಧಾರದಲ್ಲಿ ಟಿಪ್ಪಣಿ ತಯಾರಿಸಿ, ಕಮಿಷನರ್‌ಗೆ ಕೊಡಬೇಕು. ಇಲಾಖೆಯಲ್ಲಿ ಪದವೀಧರ ಸಿಬ್ಬಂದಿ ಹೆಚ್ಚಾಗಿ ನೇಮಕ ಆಗಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ಅವರಲ್ಲಿ ಹೊಸ ಚಿಂತನೆಗಳಿರುತ್ತವೆ. ವಿಶ್ಲೇಷಣೆ ಮಾಡಿಕೊಂಡು ಟಿಪ್ಪಣಿ ಅಥವಾ ವರದಿಯನ್ನು ಮೇಲಧಿಕಾರಿಗಳಿಗೆ ಕೊಡಲಿ. ಇದರಿಂದ ಇಲಾಖೆಯಲ್ಲಿ ಬದಲಾವಣೆ ತರಲು ಅನುಕೂಲವಾಗುತ್ತದೆ' ಎಂದು ಹೇಳಿದರು.

ನಂದಕುಮಾರ್ ಗುತ್ತಿಗೆದಾರರ ಸಂಘದ ಅಧ್ಯಕ್ಷ



ಜಿ.ಎಂ. ನಂದಕುಮಾರ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿ ಜಿ.ಎಂ. ನಂದಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷರಾಗಿದ್ದ ಆರ್. ಅಂಬಿಕಾಪತಿ ನವೆಂಬರ್ 27ರಂದು ಹೃದಯಾಘಾತದಿಂದ ಮೃತಪಟ್ಟಿದ್ದರು. ಜ.2ರಂದು ನಡೆದ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರು ಚರ್ಚಿಸಿ, ಪ್ರಧಾನ ಕಾರ್ಯದರ್ಶಿಯಾಗಿದ್ದ ನಂದಕುಮಾರ್ ಅವರನ್ನು ಆಯ್ಕೆ ಮಾಡಿದರು ಎಂದು ಪ್ರಕಟಣೆ ತಿಳಿಸಿದೆ.



ರಾಷ್ಟ್ರೀಯ ಹೆದ್ದಾರಿಯಲ್ಲಿ ಪಾದಯಾತ್ರೆಯಲ್ಲಿ ಸಾಗಿದ ಅತಿಥಿ ಉಪನ್ಯಾಸಕರು

ನೆಲಮಂಗಲ ತಲುಪಿದ ಅತಿಥಿ ಉಪನ್ಯಾಸಕರ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸರ್ಕಾರ ನೀಡಿದ ಭರವಸೆಗಳನ್ನು ತಿರಸ್ಕರಿಸಿ, ಸೇವಾ ಭದ್ರತೆಗೆ ಆಗ್ರಹಿಸಿ 'ಬೆಂಗಳೂರು ಚಲೋ' ಪಾದಯಾತ್ರೆ ಹಮ್ಮಿಕೊಂಡಿರುವ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ಮಂಗಳವಾರ ದಾಬಸ್ ಪೇಟೆ ಪಟ್ಟಣದಿಂದ ಹೊರಟು ನೆಲಮಂಗಲ ತಲುಪಿದರು.

ಸೋಮವಾರ ತುಮಕೂರಿನ ಸಿದ್ದಗಂಗಾ ಮಠದಿಂದ ಆರಂಭವಾದ ಪಾದಯಾತ್ರೆ ರಾಷ್ಟ್ರೀಯ ಹೆದ್ದಾರಿ 48ರ ಮೂಲಕ 20 ಕಿ.ಮೀ. ಸಾಗಿ ರಾತ್ರಿ ದಾಬಸ್ ಪೇಟೆ ತಲುಪಿತು. ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದವರು ರಾತ್ರಿ ಪಟ್ಟಣದ ಬಸವಶ್ರೀ ಕಲ್ಯಾಣ ಮಂಟಪದಲ್ಲಿ ತಂಗಿದ್ದು, ಮಂಗಳವಾರ ಬೆಳಿಗ್ಗೆ ಇಲ್ಲಿಂದ ಬೆಂಗಳೂರಿನತ್ತ ಹೊರಟರು. ರಸ್ತೆಯುದ್ದಕ್ಕೂ ಭಿತ್ತಿಪತ್ರಗಳನ್ನು ಹಿಡಿದು ಸಾಗಿದರು.

'ಅತಿಥಿ ಉಪನ್ಯಾಸಕರನ್ನು ಕಾಯಂ ಮಾಡುವಂತೆ ಕಳೆದ ಸರ್ಕಾರದಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯನವರು, ಅಂದಿನ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದರು. ಈಗ ಸಿದ್ದರಾಮಯ್ಯನವರೇ ಮುಖ್ಯಮಂತ್ರಿ ಆಗಿದ್ದಾರೆ. ಆದರೂ ಕಾಯಂಗೊಳಿಸುತ್ತಿಲ್ಲ' ಎಂದು ಅತಿಥಿ ಉಪನ್ಯಾಸಕರು ಆರೋಪಿಸಿದರು.

'ನಮ್ಮದು ಹಸಿವಿನ ಹೋರಾಟ. ಅತಿಥಿ ಉಪನ್ಯಾಸಕರ ಪರಿಸ್ಥಿತಿ ಅರಿತು ಆದಷ್ಟು ಬೇಗ ಸಮಸ್ಯೆ ಬಗೆಹರಿಸಬೇಕು' ಎಂದು ಆಗ್ರಹಿಸಿದರು.

ಪಾದಯಾತ್ರೆಯಿಂದ ತುಮಕೂರು–ಬೆಂಗಳೂರು ಹೆದ್ದಾರಿಯಲ್ಲಿ ವಾಹನದಟ್ಟಣೆ ಉಂಟಾಯಿತು.

ತಿರುಪತಿ ಹುಂಡಿಯಲ್ಲಿ ₹40 ಕೋಟಿ ಕಾಣಿಕೆ

ತಿರುಪತಿ (ಪಿಟಿಐ): ತಿರುಪತಿಯ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ವೈಕುಂಠದ್ವಾರ ದರ್ಶನದ ಸಂದರ್ಭ (2023ರ ಡಿಸೆಂಬರ್ 23ರಿಂದ ಈ ವರ್ಷದ ಜನವರಿಗೆ 1ರವರೆಗೆ) ಬರೀ ಹತ್ತು ದಿನಗಳಲ್ಲಿ ಭಕ್ತರಿಂದ ದೇವರ ಹುಂಡಿಗೆ ₹40 ಕೋಟಿ ಹಣ ಕಾಣಿಕೆಯಾಗಿ ಬಂದಿದೆ ಎಂದು ತಿರುಮಲ ತಿರುಪತಿ ದೇವಸ್ಥಾನಗಳ (ಟಿಟಿಡಿ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಟಿಟಿಡಿಯು 36 ಲಕ್ಷ ಲಡ್ಡುಗಳನ್ನು ಮಾರಾಟ ಮಾಡಿದೆ. 2 ಲಕ್ಷಕ್ಕೂ ಹೆಚ್ಚು ಭಕ್ತರು ಮುಡಿ ಅರ್ಪಿಸಿದ್ದಾರೆ. ದಾಖಲೆಯ ಸಂಖ್ಯೆಯಲ್ಲಿ 6.47 ಲಕ್ಷ ಭಕ್ತರು ವೈಕುಂಠದ್ವಾರ ದರ್ಶನ ಪಡೆದರು ಎಂದು ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಎ.ವಿ. ಧರ್ಮ ರೆಡ್ಡಿ ತಿಳಿಸಿದ್ದಾರೆ.

ಸಾರ್ವತ್ರಿಕ ಪಿಂಚಣಿ: 6ಕ್ಕೆ ವಿಚಾರ ಸಂಕಿರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 60 ವರ್ಷ ದಾಟಿರುವ ಎಲ್ಲರಿಗೂ ಸಾರ್ವತ್ರಿಕ ಪಿಂಚಣಿ ಜಾರಿಗೊಳಿಸಲು ಆಗ್ರಹಿಸಿ ಅಖಿಲ ಭಾರತ ವಿಮಾ ಪಿಂಚಣಿದಾರರ ಸಂಘ ಹಾಗೂ ವಿವಿಧ ಸಂಘಟನೆಗಳು ಜ.6ರಂದು ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿವೆ.

'ಕೇಂದ್ರ ಸರ್ಕಾರವು ರಾಷ್ಟ್ರೀಯ ವೃದ್ಧಾಪ್ಯ ವೇತನ ಯೋಜನೆಯನ್ನು 2007ರಲ್ಲಿ ಜಾರಿಗೊಳಿಸಿದೆ. ಬಡತನ ರೇಖೆಗಿಂತ ಕೆಳಗಿರುವ, 60 ವರ್ಷ ದಾಟಿರುವ ಹಿರಿಯ ನಾಗರಿಕರಿಗೆ ₹2,000 ನೀಡಲಾಗುತ್ತಿದೆ. 2007ರಿಂದ ಈವರೆಗೆ ಎಲ್ಲ ವಸ್ತುಗಳ ಬೆಲೆ ಗಗನಕ್ಕೇರಿದ್ದರೂ ಈ ಪಿಂಚಣಿ ಮೊತ್ತ ಏರಿಕೆಯಾಗಿಲ್ಲ. ಬಡತನ ರೇಖೆಯ ಕೆಳಗಿನ, ಮೇಲಿನ ಎಂದೆಲ್ಲ ವಿಭಾಗ ಮಾಡದೇ ಎಲ್ಲ ಹಿರಿಯರಿಗೆ ಪಿಂಚಣಿ ಜಾರಿ ಮಾಡಬೇಕು. ಯಾವುದೇ ಪಿಂಚಣಿ ಇಲ್ಲದವರಿಗೆ ತಿಂಗಳಿಗೆ ಕನಿಷ್ಠ ₹ 3,000 ನಿಗದಿ ಮಾಡಬೇಕು' ಎಂಬುದು ಸಂಘಟನೆಗಳ ಆಗ್ರಹವಾಗಿದೆ.

ಎಲ್ಐಸಿ, ಜಿಐಸಿ ನೌಕರರ ಮತ್ತು ಪಿಂಚಣಿದಾರರ ಸಂಘಟನೆಗಳಾದ ಅಖಿಲ ಭಾರತ ವಿಮಾ ಪಿಂಚಣಿದಾರರ ಸಂಘ, ವಿಮಾ ಕಾರ್ಪೊರೇಷನ್ ನೌಕರರ ಸಂಘ, ವಲಯ ಸಾಮಾನ್ಯ ವಿಮಾ ನೌಕರರ ಸಂಘ, ಸಾಮಾನ್ಯ ವಿಮಾ ಪಿಂಚಣಿದಾರರ ಸಂಘಗಳ ಸಹಯೋಗದಲ್ಲಿ ಜ.6ರಂದು ಬೆಳಿಗ್ಗೆ 10ಕ್ಕೆ ಕಬ್ಬನ್ ಪಾರ್ಕ್ ಎನ್‌ಜಿಒ ಸಭಾಂಗಣದಲ್ಲಿ ಈ ಬಗ್ಗೆ ರಾಜ್ಯಮಟ್ಟದ ವಿಚಾರ ಸಂಕಿರಣ ನಡೆಯಲಿದೆ. ಆರ್ಥಿಕ ತಜ್ಞ ಪ್ರಭಾತ್ ಪಟ್ನಾಯಕ್ ಉದ್ಘಾಟಿಸಲಿದ್ದಾರೆ ಎಂದು ಸಂಘಟನೆಗಳ ಪದಾಧಿಕಾರಿಗಳು ತಿಳಿಸಿದ್ದಾರೆ.



ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯ ಅಧ್ಯಕ್ಷ ಟಿ.ಎ.ನಾರಾಯಣಗೌಡ ಸೇರಿದಂತೆ ಬಂಧಿತ ಕಾರ್ಯಕರ್ತರ ಬಿಡುಗಡೆಗೆ ಆಗ್ರಹಿಸಿ 'ಚಾಲುಕ್ಯ ಡಾ.ರಾಜ್ ಕುಮಾರ್ ಪ್ರತಿಮೆ ಪ್ರತಿಷ್ಠಾಪನಾ ಟ್ರಸ್ಟ್'ನ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು– ಪ್ರಜಾವಾಣಿ ಚಿತ್ರ

ಕರವೇ ಕಾರ್ಯಕರ್ತರ ಬಿಡುಗಡೆಗೆ ಆಗ್ರಹ

ಬೆಂಗಳೂರು: ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ಅಧ್ಯಕ್ಷ ಟಿ.ಎ. ನಾರಾಯಣಗೌಡ ಸೇರಿದಂತೆ ಬಂಧಿತ ಕಾರ್ಯಕರ್ತರ ಬಿಡುಗಡೆಗೆ ಆಗ್ರಹಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ 'ಚಾಲುಕ್ಯ ಡಾ.ರಾಜ್ ಕುಮಾರ್ ಪ್ರತಿಮೆ ಪ್ರತಿಷ್ಠಾಪನಾ ಟ್ರಸ್ಟ್' ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬಂಧಿತ ಕರವೇ ಕಾರ್ಯಕರ್ತರ ಬಿಡುಗಡೆ ಮಾಡದಿದ್ದರೆ ರಾಜ್ಯದಾದ್ಯಂತ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. 'ಕಡ್ಡಾಯವಾಗಿ ಕನ್ನಡದಲ್ಲಿ ನಾಮಫಲಕ ಅಳವಡಿಸಿದರೆ ಶಾಂತಿ. ಇಲ್ಲದಿದ್ದರೆ ಕ್ರಾಂತಿ' ಎಂಬ ಭಿತ್ತಿಪತ್ರ ಪ್ರದರ್ಶಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು ಘಟಕದ ಅಧ್ಯಕ್ಷ ಪ್ರಕಾಶ್ ಮೂರ್ತಿ ಮಾತನಾಡಿ, 'ಕನ್ನಡ ಹೋರಾಟಗಾರರಿಂದ ಕನ್ನಡ ಉಳಿದಿದ್ದು, ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ನಾಮಫಲಕಗಳಲ್ಲಿ ಕನ್ನಡ ಭಾಷೆಗೆ ಒತ್ತು ನೀಡಬೇಕೆಂದು ಹೋರಾಟ ಮಾಡಿದವರನ್ನು ನಾಡದ್ರೋಹಿಗಳಂತೆ ಸರ್ಕಾರ ನಡೆಸಿಕೊಳ್ಳುತ್ತಿರುವುದು ಖಂಡನೀಯ' ಎಂದರು.

ಪ್ರತಿಭಟನೆಯಲ್ಲಿ ಸಂಘಟನೆ ಅಧ್ಯಕ್ಷ ವಿ.ಸುರೇಶ್, ಪ್ರಧಾನ ಕಾರ್ಯದರ್ಶಿ ಕೆ.ವಿ.ಮಹೇಶ್, ಪಾರ್ಶ್ವನಾಥ್ ಉಪಸ್ಥಿತರಿದ್ದರು.

ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿಕೆ • 5ರಿಂದ 7ರವರೆಗೆ ಸಾವಯವ ಮತ್ತು ಸಿರಿಧಾನ್ಯ ವಾಣಿಜ್ಯ ಮೇಳ

‘ವರ್ಷದೊಳಗೆ ಸಿರಿಧಾನ್ಯ ರಫ್ತು ಹೆಚ್ಚಳ ಗುರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವರ್ಷದೊಳಗೆ ಸಿರಿಧಾನ್ಯಗಳ ರಫ್ತು ಪ್ರಮಾಣವನ್ನು ಈಗಿರುವುದಕ್ಕಿಂತ ದುಪ್ಪಟ್ಟು ಹೆಚ್ಚಿಸುವ ಗುರಿ ಹೊಂದಲಾಗಿದೆ’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಜ.5 ರಿಂದ 7ರವರೆಗೆ ನಡೆಯಲಿರುವ ಅಂತರರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯ ವಾಣಿಜ್ಯ ಮೇಳಕ್ಕೆ ಪೂರ್ವಭಾವಿಯಾಗಿ ಮಂಗಳವಾರ ಕೃಷಿ ಇಲಾಖೆ ಆಯೋಜಿಸಿದ್ದ ‘ಸಿರಿಧಾನ್ಯ ಮತ್ತು ಅದರ ಮೌಲ್ಯವರ್ಧಿತ ಉತ್ಪನ್ನಗಳ ಜಾಗತಿಕ ಮಾರುಕಟ್ಟೆ ಹಾಗೂ ರಫ್ತುದಾರರ ಸಮಾವೇಶ’ ಉದ್ಘಾಟಿಸಿ ಅವರು ಮಾತನಾಡಿದರು.

‘ರಾಜ್ಯದಿಂದ ಪ್ರತಿ ವರ್ಷ ₹36 ಕೋಟಿ ಮೌಲ್ಯದ (7,764 ಟನ್‌ನಷ್ಟು) ಸಿರಿಧಾನ್ಯ ಮತ್ತು ಅದರ ಮೌಲ್ಯವರ್ಧಿತ ಉತ್ಪನ್ನಗಳು ರಫ್ತಾಗುತ್ತಿವೆ. ಸಿರಿಧಾನ್ಯ ಉತ್ಪಾದನೆ ಮತ್ತು ರಫ್ತು ಪ್ರಮಾಣದಲ್ಲಿ ಕರ್ನಾಟಕವನ್ನು ಮೊದಲ ಸ್ಥಾನಕ್ಕೆ ತರುವುದು ನಮ್ಮ ಗುರಿಯಾಗಿದೆ’ ಎಂದರು.

‘ರಾಜ್ಯದ ಸಿರಿಧಾನ್ಯಗಳು ಮತ್ತು ಅದರ ಮೌಲ್ಯವರ್ಧಿತ ಉತ್ಪನ್ನಗಳು ಅಮೆರಿಕ, ಆಸ್ಟ್ರೇಲಿಯಾ, ಯುಎಇ, ಕೆನಡಾ, ಕತಾರ್, ಥಾಯ್ಲೆಂಡ್, ಸಿಂಗಪುರಕ್ಕೆ ಪ್ರಮುಖವಾಗಿ ರಫ್ತಾಗುತ್ತಿವೆ. ಸಿರಿಧಾನ್ಯಗಳನ್ನು ರಫ್ತು ಮಾಡಲು ಮುಂದಾಗುವವರಿಗೆ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ (ಕೆಪೆಕ್)ದಿಂದ ನೆರವು ನೀಡಲಾಗುವುದು. ರಫ್ತು ಪ್ರಕ್ರಿಯೆಯ ನಿಯಮ–ನಿರ್ಬಂಧಗಳನ್ನು ಸಡಿಲಗೊಳಿಸಲಾಗುವುದು’ ಎಂದು ಭರವಸೆ ನೀಡಿದರು.

ಅಂತರರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯ ಮೇಳ ಆಯೋಜನೆ ಮೂಲಕ ಸಿರಿಧಾನ್ಯಗಳ ರಫ್ತು ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಕೃಷಿ ಇಲಾಖೆ ಕಾರ್ಯದರ್ಶಿ ಅನ್ಬುಕುಮಾರ್, ಆಯುಕ್ತ ವೈ.ಎಸ್.ಪಾಟೀಲ್, ಆಹಾರ ಸಂಸ್ಕರಣೆ ಮತ್ತು ಕೊಯ್ಲು ತಂತ್ರಜ್ಞಾನ ವಿಭಾಗದ ವಿಶೇಷ ಕಾರ್ಯದರ್ಶಿ ರೋಹಿಣಿ ಸಿಂಧೂರಿ, ನಿರ್ದೇಶಕ ಜಿ.ಟಿ. ಪುತ್ರ ಭಾಗವಹಿಸಿದ್ದರು.


ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ (ಎಡದಿಂದ) ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಎಂ.ಎಚ್.ಬಂತನಾಳ್, ಕೃಷಿ ಇಲಾಖೆಯ ಆಹಾರ ಸಂಸ್ಕರಣೆ ಮತ್ತು ಕೊಯ್ಲು ತಂತ್ರಜ್ಞಾನ ವಿಭಾಗದ ವಿಶೇಷ ಕಾರ್ಯದರ್ಶಿ ರೋಹಿಣಿ ಸಿಂಧೂರಿ, ಕೃಷಿ ಸಚಿವ ಎನ್ ಚಲುವರಾಯಸ್ವಾಮಿ, ಕೃಷಿ ಇಲಾಖೆ ಆಯುಕ್ತ ವೈ.ಎಸ್.ಪಾಟೀಲ್, ನಿರ್ದೇಶಕ ಜಿ.ಟಿ. ಪುತ್ರ ಅವರು ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳನ್ನು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

ಜ.5ರಿಂದ ಸಾವಯವ, ಸಿರಿಧಾನ್ಯ ಮೇಳ

ಬೆಂಗಳೂರು: ಸಾವಯವ ಮತ್ತು ಸಿರಿಧಾನ್ಯಗಳ ಉತ್ಪಾದನೆ, ಮಾರುಕಟ್ಟೆ ವಿಸ್ತರಿಸುವ ಹಾಗೂ ರಫ್ತು ಪ್ರಮಾಣ ಹೆಚ್ಚಿಸುವ ಉದ್ದೇಶದೊಂದಿಗೆ ಜ. 5 ರಿಂದ 7ರವರೆಗೆ ನಗರದ ಅರಮನೆ ಮೈದಾನದಲ್ಲಿ ಅಂತರರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯ ವಾಣಿಜ್ಯ ಮೇಳವನ್ನು ಆಯೋಜಿಸಲಾಗಿದೆ ಎಂದು ಕೃಷಿ ಸಚಿವ ಎನ್ ಚಲುವರಾಯ ಸ್ವಾಮಿ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೇಳದಲ್ಲಿ ವಸ್ತು ಪ್ರದರ್ಶನ, ಉತ್ಪಾದಕರು – ಮಾರಾಟಗಾರರ ಸಭೆ, ರೈತರಿಗೆ ಸಿರಿಧಾನ್ಯ ಕೃಷಿ, ಮೌಲ್ಯವರ್ಧನೆ, ಮಾರುಕಟ್ಟೆ ಕುರಿತ ಕಾರ್ಯಾಗಾರವನ್ನು ಆಯೋಜಿಸಲಾಗಿದೆ’ ಎಂದು ವಿವರಿಸಿದರು.

‘ವಸ್ತು ಪ್ರದರ್ಶನದಲ್ಲಿ 250ಕ್ಕೂ ಹೆಚ್ಚು ಮಳಿಗೆಗಳಿರುತ್ತವೆ. ಸಾವಯವ ಮತ್ತು ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟ ಸಂಸ್ಥೆಗಳು, ಮಾರುಕಟ್ಟೆದಾರರು, ರಫ್ತುದಾರರು, ರೈತ ಗುಂಪುಗಳು, ಎಫ್‌ಪಿಒ(ರೈತ ಉತ್ಪಾದಕ ಸಂಸ್ಥೆಗಳು) , ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳು ಮತ್ತು ಸಂಸ್ಥೆಗಳು ಭಾಗವಹಿಸುತ್ತಿವೆ. ನಮ್ಮ ರಾಜ್ಯದ ಜೊತೆಗೆ ಉತ್ತರ ಪ್ರದೇಶ, ಪಂಜಾಬ್, ಆಂಧ್ರಪ್ರದೇಶ, ಮಹಾರಾಷ್ಟ್ರ, ಒಡಿಶಾ, ತಮಿಳುನಾಡು ಮತ್ತು ಮೇಘಾಲಯದ ರಾಜ್ಯಗಳು ಹಾಗೂ ಯುಎಇ, ಜರ್ಮನ್ ದೇಶಗಳ ಸಂಸ್ಥೆಗಳೂ ಭಾಗವಹಿಸುತ್ತಿವೆ’ ಎಂದು ಮಾಹಿತಿ ನೀಡಿದರು.

‘ಕರ್ನಾಟಕದ ಪೆವಿಲಿಯನ್‌ನಲ್ಲಿ ರಾಜ್ಯದ ನವೋದ್ಯಮಿಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಲಿದ್ದಾರೆ. ಸಾವಯವ ರೈತ ಗುಂಪುಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳು ಸೇರಿದಂತೆ ಒಟ್ಟು 100 ಮಳಿಗೆಗಳಿರುತ್ತವೆ. ಉತ್ಪಾದಕರು, ಮಾರುಕಟ್ಟೆದಾರರ ಸಮಾಲೋಚನಾ ಸಭೆಗಳನ್ನು ಆಯೋಜಿಸಲಾಗಿದೆ’ ಎಂದರು.

‘ಸಿರಿಧಾನ್ಯ ಕೃಷಿಗಾಗಿ ನೀಡುತ್ತಿದ್ದ ಹೆಕ್ಟೇರ್‌ಗೆ ₹10 ಸಾವಿರ ಪ್ರೋತ್ಸಾಹಧನವನ್ನು ಮುಂದುವರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಮೊತ್ತ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

76 ಹುದ್ದೆ: ನಿಯೋಜನೆ ಮೇರೆಗೆ ಭರ್ತಿ

ಬೆಂಗಳೂರು: ರಾಜ್ಯದಲ್ಲಿರುವ 19 ವೀಕ್ಷಣಾಲಯ ಮತ್ತು ‘ಪ್ಲೇಸ್ ಆಫ್ ಸೇಫ್ಟಿ’ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಲು 76 ಹುದ್ದೆಗಳನ್ನು ಪೊಲೀಸ್ ಇಲಾಖೆಯಿಂದ ನಿಯೋಜನೆ ಮೂಲಕ ಭರ್ತಿ ಮಾಡಿಕೊಳ್ಳಲು ಸರ್ಕಾರ ಆದೇಶಿಸಿದೆ. ಪ್ರತಿಸಂಸ್ಥೆಗೆ 4 ಪೊಲೀಸ್ ಸಿಬ್ಬಂದಿಯಂತೆ ಒಟ್ಟು 76 ಹುದ್ದೆಗಳ ಅಗತ್ಯವಿದೆ. ಈಗಾಗಲೇ ಮಂಜೂರಾಗಿರುವ 47 ಹುದ್ದೆಗಳೊಂದಿಗೆ ಹೆಚ್ಚುವರಿ 29 ಭದ್ರತಾ ಸಿಬ್ಬಂದಿ ಹುದ್ದೆಗಳನ್ನು ಆರ್ಥಿಕ ಇಲಾಖೆ ಸಹಮತಿಯೊಂದಿಗೆ ಸೃಜಿಸಲಾಗಿದೆ. ಇವುಗಳನ್ನು ಪೊಲೀಸ್ ಇಲಾಖೆಯಿಂದ ಭರ್ತಿ ಮಾಡುವಂತೆ ಆದೇಶಿಸಿದೆ.

‘5 ವರ್ಷ ಸಿದ್ದರಾಮಯ್ಯ ಸಿಎಂ’


ಬೆಂಗಳೂರು: ‘ಎರಡೂವರೆ ವರ್ಷ ಮಾತ್ರ ಸಿದ್ದರಾಮಯ್ಯ ಮುಖ್ಯಮಂತ್ರಿ ಎಂದು ಒಪ್ಪಂದವೇನಾದರೂ ಆಗಿದೆಯೇ? ಅಂತಹ ಒಪ್ಪಂದದ ಬಗ್ಗೆ ಶಾಸಕಾಂಗ ಸಭೆಯಲ್ಲಿ ಹೈಕಮಾಂಡ್ ನಮಗೆ ಏನೂ ಹೇಳಿಲ್ಲ’ ಎಂದು ಮುಖ್ಯಮಂತ್ರಿಯ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸ್ಥಾನ ಬದಲಾವಣೆ ಬಗ್ಗೆ ಯಾವುದೇ ಒಪ್ಪಂದ ಆಗಿಲ್ಲ. ಹೀಗಾಗಿ ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ. ಇದು ನನ್ನ ವೈಯಕ್ತಿಕ ಅಭಿಪ್ರಾಯ’ ಎಂದರು.

‘ಸಿದ್ದರಾಮಯ್ಯ ಜನಪ್ರಿಯ ನಾಯಕ. ಒಳ್ಳೆಯ ಆಡಳಿತ ನೀಡುತ್ತಿದ್ದಾರೆ. ಬಡವರ ಪರ ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಶೇ 90ರಷ್ಟು ಶಾಸಕರಿಗೆ ಅವರ ಮೇಲೆ ವಿಶ್ವಾಸ ಇದೆ’ ಎಂದರು.

‘ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ 2013ರ ಅವಧಿಗೂ ಈಗಿನದಕ್ಕೂ ಯಾವುದೇ ವ್ಯತ್ಯಾಸ ಇಲ್ಲ. ಆಗ ಹೇಗೆ ಕೆಲಸ ಮಾಡುತ್ತಿದ್ದರೊ ಈಗಲೂ ಅದೇ ರೀತಿ ಕೆಲಸ ಮಾಡುತ್ತಿದ್ದಾರೆ. ಆಗ ಅವರಿಗೆ 66 ವಯಸ್ಸು. ಈಗ 76. ಅಷ್ಟೆ ವ್ಯತ್ಯಾಸ. ವಯಸ್ಸಿನ ಕಾರಣಕ್ಕೆ ಚಟುವಟಿಕೆ ಸ್ವಲ್ಪ ಕಡಿಮೆ ಆಗಿರಬಹುದು. ಆದರೆ, ನೆನಪಿನ ಶಕ್ತಿ ಹಾಗೆಯೇ ಇದೆ’ ಎಂದರು.

‘ಮುಖ್ಯಮಂತ್ರಿ ಗಂಜಿ ಕೇಂದ್ರ ತೆರೆದಿದ್ದಾರೆ’ ಎಂಬ ಎಚ್.ಡಿ. ಕುಮಾರಸ್ವಾಮಿ ಟೀಕೆಗೆ ಪ್ರತಿಕ್ರಿಯಿಸಿದ ರಾಯರಡ್ಡಿ, ‘ಮುಖ್ಯಮಂತ್ರಿಯಾಗಿದ್ದ ಅವರು ಬೇಜವಾಬ್ದಾರಿಯಿಂದ ಮಾತನಾಡಬಾರದು. ನಾನು ವೇತನ, ಭತ್ಯೆ, ಮನೆ ಏನನ್ನೂ ತೆಗೆದುಕೊಳ್ಳುವುದಿಲ್ಲ. ಶಾಸಕನಾಗಿ ಈವರೆಗೂ ಸಂಬಳ ಪಡೆದಿಲ್ಲ. ಹೀಗಿರುವಾಗ ನನಗೆ ಕೊಟ್ಟಿರುವ ಆರ್ಥಿಕ ಸಲಹೆಗಾರ ಹುದ್ದೆ ಗಂಜಿ ಕೇಂದ್ರ ಹೇಗೆ ಆಗಲಿದೆ’ ಎಂದರು.



ಉಪನ್ಯಾಸ

‘ಕರ್ಣಾಟ ಭಾರತ ಕಥಾಮಂಜರಿ’ಯನ್ನು ರಚಿಸಿರುವ ಕುಮಾರವ್ಯಾಸ ಕವಿಯ ಮೇರು ವ್ಯಕ್ತಿತ್ವ, ಆತನ ಕಾಲಘಟ್ಟ, ಕವಿಯ ಕಾಣ್ಕೆ ಕುರಿತು ನಗರದ ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಕೃಷ್ಣಮೂರ್ತಿ ಹನೂರು ಮಾತನಾಡಿದರು. ನ್ಯೂಯಾರ್ಕ್‌ನ ಸ್ಟೋನಿ ಬ್ರೂಕ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎಸ್.ಎನ್. ಶ್ರೀಧರ್ ಉಪಸ್ಥಿತರಿದ್ದರು. –ಪ್ರಜಾವಾಣಿ ಚಿತ್ರ

ಬಿಬಿಎಂಪಿ: ಬಜೆಟ್ ಸಿದ್ಧತೆ ಪ್ರಾರಂಭ

ವಲಯವಾರು ಆಯ–ವ್ಯಯ ಮಾಡಲು ಮತ್ತೆ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ 2024–25ನೇ ಸಾಲಿನ ಬಜೆಟ್ ಸಿದ್ಧತೆ ಪ್ರಾರಂಭಿಸಿದ್ದು, ವಿಭಾಗವಾರು ಪ್ರಗತಿ ಹಾಗೂ ಯೋಜನೆಗಳ ಸಮಾಲೋಚನೆ ಸಭೆ ನಡೆಯುತ್ತಿವೆ.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಎಲ್ಲ ವಿಭಾಗಗಳ ವಿಶೇಷ ಆಯುಕ್ತರು ಸೇರಿದಂತೆ ವಲಯಗಳ ಆಯುಕ್ತರೊಂದಿಗೆ ಈಗಾಗಲೇ ಸಭೆ ನಡೆಸಿದ್ದಾರೆ. ಬಜೆಟ್ ಸಿದ್ಧತೆ ಹಾಗೂ ಈ ಆರ್ಥಿಕ ವರ್ಷದಲ್ಲಿನ ವೆಚ್ಚ ಹಾಗೂ ಯೋಜನೆಗಳ ಸ್ಥಿತಿ ಹಾಗೂ ಮಾಹಿತಿ ನೀಡಲು ಸೂಚಿಸಿದ್ದಾರೆ.

ಬಿಬಿಎಂಪಿಯ ಎಲ್ಲ ವಿಭಾಗಗಳ ಮುಖ್ಯಸ್ಥರು ಹಾಗೂ ಕಾರ್ಯಪಾಲಕ ಎಂಜಿನಿಯರ್‌ಗಳು ಬಜೆಟ್ ಸಿದ್ಧತೆ ಹಾಗೂ ಮಾಹಿತಿ ಒದಗಿಸುವ ಕಾರ್ಯ ಆರಂಭಿಸಿದ್ದು, ಜ.15ರೊಳಗೆ ವಿವರ ನೀಡಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

‘ವಲಯವಾರು ಬಜೆಟ್ ಮಂಡನೆಗೆ ಅವಕಾಶ ಕಲ್ಪಿಸಲಾಗುವುದು’ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಿಂದಿನ ವರ್ಷ ಹೇಳಿದ್ದರು. ಆದರೆ ಅದಕ್ಕೆ ಅವಕಾಶವಿಲ್ಲದೆ ವಿಧಾನಸಭೆ ಚುನಾವಣೆಯ ಸಂದರ್ಭವಾದ್ದರಿಂದ ಎಂದಿನಂತೆ ಬಜೆಟ್ ಮಂಡಿಸಲಾಗಿತ್ತು. ಆದರೆ ಈ ಬಾರಿ ವಲಯವಾರು ಬಜೆಟ್‌ಗೆ ಮತ್ತೆ ಚಿಂತನೆ ಆರಂಭವಾಗಿದೆ.


‘ವಲಯಗಳಿಗೆ ಸೀಮಿತವಾಗಿ ಆಯುಕ್ತರನ್ನು ನೇಮಿಸಿರುವುದರಿಂದ ಅಲ್ಲಿನ ಕಾಮಗಾರಿಗಳಿಗೆ ಅವರು ಜವಾಬ್ದಾರರಾಗಿರುತ್ತಾರೆ. ಅವರಿಂದಲೇ ಕಾಮಗಾರಿಗಳು, ಯೋಜನೆಗಳ ಮಾಹಿತಿ ಪಡೆದುಕೊಂಡು ಅದಕ್ಕೆ ಹಣಕಾಸು ಒದಗಿಸುವ ಉದ್ದೇಶ ಹೊಂದಲಾಗಿದೆ. ಈಗಾಗಲೇ, ಗುತ್ತಿಗೆದಾರರಿಗೆ ವಲಯವಾರು ಮುಖ್ಯ ಎಂಜಿನಿಯರ್‌ಗಳಿಂದ ಬಿಲ್ ಪಾವತಿ ಮಾಡಲಾಗುತ್ತಿದೆ. ಹೀಗಾಗಿ ಬಜೆಟ್ ಅನ್ನು ವಲಯವಾರು ಮಂಡಿಸುವ ಯೋಜನೆ ಹೊಂದಲಾಗಿದೆ’ ಎಂದು ತಿಳಿದು ಬಂದಿದೆ.

‘ನಗರಯೋಜನೆ, ಬೃಹತ್ ನೀರುಗಾಲುವೆ, ಯೋಜನೆ, ಘನತ್ಯಾಜ್ಯ, ಕೆರೆಗಳು, ರಸ್ತೆ ಮೂಲಸೌಕರ್ಯದಂತಹ ಪ್ರಮುಖ– ಬೃಹತ್ ಯೋಜನೆಗಳನ್ನು ನಿರ್ವಹಿಸುವ ವಿಭಾಗಗಳ ಆಯ–ವ್ಯಯ ಪ್ರತ್ಯೇಕವಾಗಿರುತ್ತದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

‘ಕಳೆದ ಬಾರಿ ಡಿಸೆಂಬರ್‌ನಲ್ಲೇ ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಲಾಗಿತ್ತು. ಈ ಬಾರಿ ಅಂತಹ ಪ್ರಕ್ರಿಯೆ ನಡೆದಿಲ್ಲ. ಇರುವ ಕೆಲವೇ ಕೆಲವು ವಾರ್ಡ್ ಸಮಿತಿಗಳ ಬಗ್ಗೆ ಅಧಿಕಾರಿಗಳು ತಾತ್ಸಾರ ಭಾವನೆ ಹೊಂದಿದ್ದು ಅವರ ಅಭಿಪ್ರಾಯಗಳಿಗೆ ಮಾನ್ಯತೆಯನ್ನೂ ನೀಡುತ್ತಿಲ್ಲ. ಹೀಗಾಗಿ ಈ ಬಾರಿಯೂ ಪ್ರಮುಖ ಅಧಿಕಾರಿಗಳು ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಯೋಚನೆಗಳಷ್ಟೇ ಬಜೆಟ್‌ನಲ್ಲಿ ಇರಲಿವೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಹಿರಿಯ ಎಂಜಿನಿಯರ್‌ರೊಬ್ಬರು ತಿಳಿಸಿದರು.

‘ಆಸ್ತಿ ತೆರಿಗೆ ಸೇರಿದಂತೆ ಪಾಲಿಕೆಗೆ ಸಂದಾಯವಾಗಬೇಕಿರುವ ಎಲ್ಲ ರೀತಿಯ ಶುಲ್ಕ, ತೆರಿಗೆಗಳನ್ನು ಕಟ್ಟುನಿಟ್ಟಾಗಿ ಸಂಗ್ರಹಿಸಲು ನಿರ್ಧರಿಸಿರುವುದರಿಂದ ವರಮಾನ ಹೆಚ್ಚಾಗಲಿದೆ. ಹೀಗಾಗಿ ಪಾಲಿಕೆ ಅನುದಾನದಲ್ಲೇ ವೈಟ್ ಟಾಪಿಂಗ್, ಮೇಲ್ಸೇತುವೆ ಸೇರಿದಂತೆ ಬೃಹತ್ ಯೋಜನೆಗಳನ್ನು ಕೈಗೊಳ್ಳುವ ಪ್ರಸ್ತಾಪವೂ ಈ ಬಾರಿ ಬಜೆಟ್‌ನಲ್ಲಿ ಇರಲಿದೆ’ ಎನ್ನಲಾಗಿದೆ.

2022–23ನೇ ಸಾಲಿನ ಬಜೆಟ್ ಅನ್ನು ಕಳೆದ ವರ್ಷ ಮಾರ್ಚ್ 31ರಂದು ರಾತ್ರಿ 11.30ಕ್ಕೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮೂಲಕ ‘ಗುಪ್ತ’ವಾಗಿ ಬಜೆಟ್ ಮಂಡಿಸಲಾಗಿತ್ತು. ಕಳೆದ ವರ್ಷ ಮಾರ್ಚ್ 2ರಂದು ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ₹11,163 ಕೋಟಿ ಗಾತ್ರದ ಆಯ–ವ್ಯಯವನ್ನು (2023–24) ಹಣಕಾಸು ವಿಭಾಗದ ಅಂದಿನ ವಿಶೇಷ ಆಯುಕ್ತ ಜಯರಾಂ ರಾಯಪುರ ಮಂಡಿಸಿದ್ದರು.



‘ರಾಜ್ಯ ಬಜೆಟ್ ನಂತರ ಮಂಡನೆ’

‘ಕಳೆದ ವರ್ಷ ವಲಯವಾರು ಬಜೆಟ್ ಸಾಧ್ಯವಾಗಲಿಲ್ಲ. ಈ ಬಾರಿ ವಲಯವಾರು ಬಜೆಟ್ ಮಾಡಲು ಪ್ರಯತ್ನಿಸಲಾಗುತ್ತಿದೆ. ನಿರ್ವಹಣೆ ಹಾಗೂ ವಾರ್ಡ್ ಮಟ್ಟದ ಕಾಮಗಾರಿಗಳ ಯೋಜನೆಗಳ ವಲಯ ಬಜೆಟ್ ಮಂಡಿಸಲು ಸಿದ್ಧತೆ ಮಾಡಿಕೊಳ್ಳಲು ಸೂಚಿಸಲಾಗಿದೆ. ರಾಜ್ಯ ಸರ್ಕಾರದ ಬಜೆಟ್ ನಂತರದ ಒಂದು ವಾರದಲ್ಲಿ ಬಿಬಿಎಂಪಿ ಬಜೆಟ್ ಮಂಡನೆಯಾಗಲಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಬಾಹ್ಯಾಕಾಶ ಸಂಶೋಧನೆಗೆ ಒತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜ್ಞಾನ, ತಂತ್ರಜ್ಞಾನ ಮತ್ತು ಬಾಹ್ಯಾಕಾಶ ಸಂಶೋಧನೆಗಳಿಗೆ ಕೇಂದ್ರ ಸರ್ಕಾರ ಹೆಚ್ಚಿನ ಅನುದಾನ ಒದಗಿಸುತ್ತಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಸಾಧನೆಗೆ ವಿಶ್ವವೇ ಬೆರಗಾಗಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಹೇಳಿದರು.

‘ರಾಮನ್ ರೀಸರ್ಚ್ ಇನ್‌ಸ್ಟಿಟ್ಯೂಟ್’ನ ಅಮೃತ ಮಹೋತ್ಸವದ ಸಮಾರೋಪದಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆ ವೇಗ ಪಡೆದಿದೆ. ಚಂದ್ರಯಾನದಂತಹ ಕಾರ್ಯಕ್ರಮಗಳು ಯಶಸ್ವಿಯಾಗಿವೆ. 2047ರ ಭಾರತ ವಿಶ್ವದ ಅತ್ಯಂತ ಬಲಿಷ್ಠ ದೇಶವಾಗಲಿದೆ ಎಂದರು.

‘1948ರಲ್ಲಿ ಸ್ಥಾಪನೆಯಾಗಿದ್ದ ರಾಮನ್ ಇನ್‌ಸ್ಟಿಟ್ಯೂಟ್ ದೇಶದ ಹೆಮ್ಮೆಯ ಸಂಸ್ಥೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗಿದೆ. ಚಂದ್ರಯಾನ, ಆದಿತ್ಯ ಎಲ್–1 ಸೇರಿದಂತೆ ಭಾರತದ ಬಾಹ್ಯಾಕಾಶ ಯೋಜನೆಗಳಲ್ಲಿ ಸಂಸ್ಥೆಯ ವಿಜ್ಞಾನಿಗಳು ಭಾಗಿಯಾಗಿದ್ದಾರೆ. ವಿಜ್ಞಾನ ಕ್ಷೇತ್ರಕ್ಕೆ ಅಪರಿಮಿತ ಕೊಡುಗೆ ನೀಡಿದ್ದಾರೆ’ ಎಂದು ಬಣ್ಣಿಸಿದರು.

‘ದೇಶದ ಸಾಮೂಹಿಕ ಬೆಳವಣಿಗೆಗೆ ವಿಜ್ಞಾನಿಗಳು ಮತ್ತು ವೈಜ್ಞಾನಿಕ ಸಂಸ್ಥೆಗಳು ಒಗ್ಗೂಡಿ ಕೆಲಸ ಮಾಡಬೇಕು. ಸಿ.ವಿ.ರಾಮನ್ ಅವರ ದೂರದೃಷ್ಟಿ ಅಳವಡಿಸಿಕೊಳ್ಳಬೇಕು’ ಎಂದೂ ಸಲಹೆ ನೀಡಿದರು.

ಹೋಮಿ ಭಾಭಾ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಕುಲಪತಿ ಅನಿಲ್ ಕಾಕೋಡ್ಕರ್, ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್‌ಕುಮಾರ್ ಉಪಸ್ಥಿತರಿದ್ದರು.


ರಾಮನ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಮಂಗಳವಾರ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ವಿಜ್ಞಾನಿ ಸಿ.ವಿ. ರಾಮನ್ ಅವರ ಸಮಾಧಿ ಸ್ಥಳದಲ್ಲಿ ಗಿಡ ನೆಟ್ಟರು. ಅನಿಲ್ ಕಾಕೋಡ್ಕರ್, ಎ.ಎಸ್.ಕಿರಣ್ ಕುಮಾರ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಮಾಲ್ ಆಫ್ ಏಷ್ಯಾ ಪ್ರಕರಣ ಮಧ್ಯಂತರ ಆದೇಶ ವಿಸ್ತರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಮಾಲ್ ಆಫ್ ಏಷ್ಯಾದ ಬಳಿ ಸಂಚಾರ ದಟ್ಟಣೆ ಮತ್ತು ಮಾಲಿನ್ಯ ಸಮಸ್ಯೆಯನ್ನು ಸೌಹಾರ್ದ ರೀತಿಯಲ್ಲಿ ಬಗೆಹರಿಸಲು ನಗರ ಪೊಲೀಸ್ ಆಯುಕ್ತರ ಜೊತೆ ಎರಡು ಬಾರಿ ಚರ್ಚಿಸಲಾಗಿದೆ‘ ಎಂದು ಫಿನಿಕ್ಸ್ ಮಾಲ್ ಆಫ್ ಏಷ್ಯಾ ಪರ ವಕೀಲರು ಹೈಕೋರ್ಟ್‌ಗೆ ತಿಳಿಸಿದ್ದಾರೆ.

‘ಮಾಲ್ ಆಫ್ ಏಷ್ಯಾಗೆ ಸಾರ್ವಜನಿಕರ ಪ್ರವೇಶಕ್ಕೆ 2023ರ ಡಿಸೆಂಬರ್ 31ರಿಂದ 2024ರ ಜನವರಿ 15ರವರೆಗೆ ಅವಕಾಶ ಕಲ್ಪಿಸಬಾರದು‘ ಎಂದು ನಗರ ಪೊಲೀಸ್ ಆಯುಕ್ತರು ಹೊರಡಿಸಿದ್ದ ಆದೇಶ ಪ್ರಶ್ನಿಸಿ, ‘ಮಾಲ್ ಆಫ್ ಏಷ್ಯಾ’ದ ಪ್ರತಿನಿಧಿಯಾಗಿ ‘ಸ್ಪಾರ್ಕಲ್ ಒನ್ ಮಾಲ್ ಡೆವಲಪರ್ಸ್ ಲಿಮಿಟೆಡ್‘ ಕಂಪನಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಿರಿಯ ವಕಿಲ ಧ್ಯಾನ್ ಚಿನ್ನಪ್ಪ, ‘ಅರ್ಜಿದಾರರು ನಗರ ಪೊಲೀಸ್ ಆಯಕ್ತರೊಂದಿಗೆ ಎರಡು ಬಾರಿ ಸಭೆ ನಡೆಸಿ ಸಮಾಲೋಚಿಸಿದ್ದಾರೆ. ಮಾಲ್ ಆಫ್ ಏಷ್ಯಾದ ಬಳಿ ಸಂಚಾರ ದಟ್ಟಣೆ, ವಾಹನ ನಿಲುಗಡೆ ಸೇರಿ ಇತರೆ ಸಮಸ್ಯೆಗಳ ನಿವಾರಣೆ ಕುರಿತು ಚರ್ಚಿಸಲಾಗಿದೆ. ನಗರ ಪೊಲೀಸ್ ಆಯುಕ್ತರು ಮಂಗಳವಾರ (ಜ.2) ಮಾಲ್‌ಗೆ ಭೇಟಿ ನೀಡಿದ್ದಾರೆ‘ ಎಂದು ವಿವರಿಸಿದರು.

ಇದನ್ನು ಪರಿಗಣಿಸಿದ ಪೀಠ ವಿಚಾರಣೆಯನ್ನು ಇದೇ 5ಕ್ಕೆ ಮುಂದೂಡಿತು. ‘ಮುಂದಿನ ಆದೇಶದವರೆಗೆ ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಜರುಗಿಸಬಾರದು‘ ಎಂದು ನಗರ ಪೊಲೀಸ್ ಇಲಾಖೆಗೆ ಸೂಚಿಸಿ 2023ರ ಡಿಸೆಂಬರ್ 31ರಂದು ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಇದೇ 5ರವರೆಗೆ ವಿಸ್ತರಿಸಿತು.

ಪುಸ್ತಕ ರಾತ್ರಿ ಕಾರ್ಯಕ್ರಮದಲ್ಲಿ ಆರು ಕೃತಿಗಳ ಬಿಡುಗಡೆ

‘ಸಾಹಿತ್ಯ– ವನ್ಯಜೀವಿ ಲೋಕಕ್ಕೆ ಬೆಸುಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಲೋಕಕ್ಕೂ ಪ್ರಾಣಿ, ಪಕ್ಷಿಗಳ ಲೋಕಕ್ಕೂ ಬಹಳ ಹಿಂದಿನಿಂದಲೂ ಬೆಸುಗೆ ಇದೆ ಎಂದು ಸಾಹಿತಿ ಲಕ್ಷ್ಮೀಶ ತೋಳ್ಪಾಡಿ ತಿಳಿಸಿದರು.

ನಗರದಲ್ಲಿ ವೀರಲೋಕ ಪ್ರಕಾಶನ ಸಂಸ್ಥೆಯ ‘ಪುಸ್ತಕ ರಾತ್ರಿ’ ಕಾರ್ಯಕ್ರಮದಲ್ಲಿ ಆರು ಕೃತಿಗಳ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕಾದಂಬರಿಕಾರ ಕುಂ.ವೀರಭದ್ರಪ್ಪ ಮಾತನಾಡಿ, ‘ಕನ್ನಡಕ್ಕೆ ಎರಡೂವರೆ ಸಾವಿರ ವರ್ಷಗಳ ಇತಿಹಾಸ ಇದೆ. ಕನ್ನಡ ಭಾಷೆ ಮತ್ತು ಅದರ ಬಲ ಎಂದಿಗೂ ಕುಂಠಿತವಾಗುವುದಿಲ್ಲ. ಆ ಬಗೆಯ ಯಾವುದೇ ಆತಂಕಗಳಿಲ್ಲ’ ಎಂದು ಹೇಳಿದರು.

ಪತ್ರಕರ್ತ ಗೌರೀಶ್ ಅಕ್ಕಿ, ಕೃತಿಕಾರರಾದ ಶೋಭರಾವ್, ಮಳವಳ್ಳಿ ಪ್ರಸನ್ನ, ವಿವೇಕಾನಂದ ಕಾಮತ್, ಬೇಲೂರು ರಾಮಮೂರ್ತಿ, ಡಾ.ಲೀಲಾ ಅಪ್ಪಾಜಿ ಮತ್ತು ಪ್ರೀತಿನಿ ಗೌಡ, ವೀರಲೋಕದ ಮುಖ್ಯಸ್ಥ ವೀರಕಪುತ್ರ ಶ್ರೀನಿವಾಸ ಭಾಗವಹಿಸಿದ್ದರು.


ಅರುಂಧತಿ ವಸಿಷ್ಠ ಹಾಗೂ ಎಚ್. ಸಿ. ಭಾರ್ಗವ್ ಅವರಿಂದ ಗೀತಗಾಯನ, ರಾಘವೇಂದ್ರ ಆಚಾರ್ ಅವರಿಂದ ಹಾಸ್ಯ ರಾತ್ರಿ ಕಾರ್ಯಕ್ರಮಗಳು ನಡೆದವು.


ಆರು ಕೃತಿಗಳನ್ನು ಸಾಹಿತಿ ಲಕ್ಷ್ಮೀಶ ತೋಳ್ಪಾಡಿ, ಕಾದಂಬರಿಕಾರ ಕುಂ.ವೀರಭದ್ರಪ್ಪ ಬಿಡುಗಡೆ ಮಾಡಿದರು. ‘ವೀರಲೋಕ‘ದ ಮುಖ್ಯಸ್ಥ ವೀರಕಪುತ್ರ ಶ್ರೀನಿವಾಸ, ಕೃತಿಕಾರರಾದ ಪ್ರೀತಿನಿ ಗೌಡ, ಡಾ.ಲೀಲಾ ಅಪ್ಪಾಜಿ, ಮಳವಳ್ಳಿ ಪ್ರಸನ್ನ, ಬೇಲೂರು ರಾಮಮೂರ್ತಿ, ಪತ್ರಕರ್ತ ಗೌರೀಶ್ ಅಕ್ಕಿ, ಕೃತಿಕಾರರಾದ ಶೋಭಾರಾವ್, ವಿವೇಕಾನಂದ ಕಾಮತ್ ಭಾಗವಹಿಸಿದ್ದರು

ಕೃತಿ ಪರಿಚಯ

ಪ್ರಕಾಶನ: ವೀರಲೋಕ

- **ಕೃತಿ:** ದಡ ಸೇರದ ದೋಣಿಗಳು
  ಲೇಖಕರು: ಬೇಲೂರು ರಾಮಮೂರ್ತಿ
  ದರ: ₹ 275
- **ಕೃತಿ:** ಹಕ್ಕಿ ಅಟೆಂಡೆನ್ಸ್
  ಲೇಖಕರು: ಡಾ.ಲೀಲಾ ಅಪ್ಪಾಜಿ
  ದರ: ₹ 595
- **ಕೃತಿ:** ಮಲ್ಲಿಮಲ್ಲಿಗಿ
  ಲೇಖಕರು: ಎಂ.ಎಲ್. ಪ್ರಸನ್ನ
  ದರ: ₹ 210
- **ಕೃತಿ:** ಮಲೆನಾಡ ಅಜ್ಜಿ
  ಲೇಖಕರು: ಶೋಭಾ ರಾವ್
  ದರ: ₹ 175
- **ಕೃತಿ:** ಆರೋಹಣ
  ಲೇಖಕರು: ವಿವೇಕಾನಂದ ಕಾಮತ್
  ದರ: ₹ 190
- **ಕೃತಿ:** ನಿಷಿತೆ
  ಲೇಖಕರು: ಪ್ರೀತಿನಿ ಗೌಡ
  ದರ: ₹ 250



ಉದ್ಯೋಗ ವಾಣಿ

ಗ್ರಾಮಲೆಕ್ಕಿಗ ಜಟ್ಟಪ್ಪ ಲೋಕಾಯುಕ್ತ ಬಲೆಗೆ


ಜಟ್ಟಪ್ಪ

ಬೆಂಗಳೂರು: ಪೌತಿ ಖಾತೆ ಮಾಡಿ ಕೊಡಲು ₹2 ಲಕ್ಷಕ್ಕೆ ಬೇಡಿಕೆಯಿಟ್ಟಿದ್ದ ಕೋನಪ್ಪನ ಅಗ್ರಹಾರ ಪಂಚಾಯ್ತಿ ಗ್ರಾಮ ಲೆಕ್ಕಿಗ ಜಟ್ಟಪ್ಪ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಆರ್‌ಬಿಆರ್ ಲೇಔಟ್‌ನ ಜುನ್ನಸಂದ್ರದ ಎಚ್.ಎಂ.ಪ್ರಕಾಶ್ ಎಂಬುವವರು ನೀಡಿದ ದೂರಿನ ಮೇರೆಗೆ ದಾಳಿ ನಡೆಸಿದ ಲೋಕಾಯುಕ್ತ ಜಟ್ಟಪ್ಪ ಅವರನ್ನು ಬಂಧಿಸಿದ್ದಾರೆ.

ದೂರದಾರರ ಮೃತ ಸೋದರನ ಪುತ್ರಿ ಹೆಸರಲ್ಲಿ ಜಮೀನಿನ ಪೌತಿ ಖಾತೆ ಮಾಡಿಕೊಡಲು ₹2 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದು, ಈಗಾಗಲೇ ₹10 ಸಾವಿರ ಪಡೆದಿದ್ದರು. ₹70 ಸಾವಿರ ಕೊಡುವಂತೆ ಒತ್ತಾಯಿಸಿದ್ದರು ಎಂದು ಮೂಲಗಳು ತಿಳಿಸಿವೆ. ಆರೋಪಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

‘ಲೋಕಾಯುಕ್ತ ಅಧಿಕಾರಿ’ ಸೋಗಿನಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಕರೆ ಮಾಡುತ್ತಿದ್ದ ಆರೋಪಿ

ಹಣ ಸುಲಿಗೆಗೆ ‘ಗ್ಯಾಂಗ್’ ಪ್ರೇರಣೆ

ಪ್ರಜಾವಾಣಿ ವಾರ್ತೆ


ಶ್ರೀನಾಥ್ ರೆಡ್ಡಿ

ಬೆಂಗಳೂರು: ‘ಲೋಕಾಯುಕ್ತ ಅಧಿಕಾರಿ’ ಎಂದು ಹೇಳಿಕೊಂಡು ಸರ್ಕಾರಿ ಇಲಾಖೆಗಳ ಅಧಿಕಾರಿಗಳಿಗೆ ಕರೆ ಮಾಡಿ ಹಣ ವಸೂಲಿ ಮಾಡುತ್ತಿದ್ದ ಆರೋಪಿಯನ್ನು ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಶ್ರೀಧರ್ ರೆಡ್ಡಿ (31) ಬಂಧಿತ ಆರೋಪಿ. ಬೆದರಿಸಿ ಹಣ ಸುಲಿಗೆಗೆ ಯತ್ನಿಸಿದ ಸಂಬಂಧ ಸರ್ಕಾರಿ ಅಧಿಕಾರಿ ರಾಮದಾಸ್ ಎಂಬುವವರು ವಿಧಾನ ಸೌಧ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ, ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

3 ರಾಜ್ಯಗಳಲ್ಲಿ 36 ಪ್ರಕರಣ ದಾಖಲು

‘ಆರೋಪಿ, 60 ಮಂದಿ ಸರ್ಕಾರಿ ಅಧಿಕಾರಿಗಳಿಗೆ ವಂಚಿಸಿದ್ದಾನೆ. ಆರೋಪಿಗೆ ಕ್ರಿಮಿನಲ್ ಹಿನ್ನೆಲೆಯಿದೆ. ಈತನ ವಿರುದ್ಧ ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಒಟ್ಟು 36 ಪ್ರಕರಣಗಳು ದಾಖಲಾಗಿವೆ’ ಎಂದು ಪೊಲೀಸರು ತಿಳಿಸಿದ್ದಾರೆ.

ವಿಮಾನದಲ್ಲೇ ಹಾರಾಟ: ‘ಶ್ರೀಧರ್ ರೆಡ್ಡಿ ಇದುವರೆಗೂ ₹ 3 ಕೋಟಿ ಅಧಿಕ ಹಣ ವಸೂಲಿ ಮಾಡಿದ್ದಾನೆ. ಈ ಹಣದಲ್ಲಿ ಮೋಜು ಮಸ್ತಿ ಮಾಡುತ್ತಿದ್ದ. ಗೋವಾದ ಕ್ಯಾಸಿನೊದಲ್ಲಿ ಜೂಜಾಟದಲ್ಲಿ ಹಣ ಹೂಡಿಕೆ ಮಾಡಿದ್ದಾನೆ. ಜತೆಗೆ ಕೆಲ ಪ್ರವಾಸಿ ಸ್ಥಳಗಳಿಗೆ ವಿಮಾನದಲ್ಲೇ ಸಂಚರಿಸಿ ಹಣ ವ್ಯಯಿಸಿದ್ದಾನೆ’ ಎಂದು ಪೊಲೀಸರು ಹೇಳಿದ್ದಾರೆ.

ಆರೋಪಿ, 2019ರಿಂದ ಲೋಕಾಯುಕ್ತ ಅಧಿಕಾರಿಗಳ ಸೋಗಿನಲ್ಲಿ ಸುಮಾರು 60ಕ್ಕೂ ಹೆಚ್ಚು ಸರ್ಕಾರಿ ಅಧಿಕಾರಿಗಳಿಗೆ ಕರೆ ಮಾಡಿ ಹಣ ವಸೂಲಿ ಮಾಡಿದ್ದಾನೆ ಎಂಬುದು ತನಿಖೆಯಿಂದ ಗೊತ್ತಾಗಿದೆ.

‘ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶದ ಸರ್ಕಾರಿ ಅಧಿಕಾರಿಗಳಿಂದ ಹಣ ಸುಲಿಗೆ ಮಾಡಿದ್ದಾನೆ. ಟಾಲಿವುಡ್ ನಟ ಸೂರ್ಯ ನಟನೆಯ ‘ಗ್ಯಾಂಗ್’ ಸಿನಿಮಾದಿಂದ ಪ್ರೇರಣೆಗೊಂಡು, ಲೋಕಾಯುಕ್ತ ಅಧಿಕಾರಿಗಳ ಸೋಗಿನಲ್ಲಿ ಅಧಿಕಾರಿಗಳಿಗೆ ಕರೆ ಮಾಡಿ ಬೆದರಿಸಿ ಲಕ್ಷಾಂತರ ರೂಪಾಯಿ ಸುಲಿಗೆ ಮಾಡುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಎಸ್ಸೆಸ್ಸೆಲ್ಸಿವರೆಗೆ ಓದಿದ್ದ ಶ್ರೀಧರ್ ರೆಡ್ಡಿ, ವಿವಾಹಿತನಾಗಿದ್ದು ಮಕ್ಕಳು ಇದ್ದಾರೆ. ಬಾಗೇಪಲ್ಲಿಯಲ್ಲಿ ಕುಟುಂಬ ಸಮೇತ ವಾಸವಾಗಿದ್ದ. ಊರಿನಲ್ಲೇ ಕೆಲಸ ಮಾಡಿಕೊಂಡಿದ್ದ. ಜತೆಗೆ, ಮನೆಗಳಲ್ಲಿ ಚಿನ್ನಾಭರಣ ಕಳವು ಕೃತ್ಯಗಳಲ್ಲಿ ಭಾಗಿಯಾಗಿ ಜೈಲು ಸೇರಿದ್ದ. 2019ರಲ್ಲಿ ‘ಗ್ಯಾಂಗ್’ ಸಿನಿಮಾ ವೀಕ್ಷಿಸಿದ್ದ ಆರೋಪಿ, ಸಿನಿಮಾದಲ್ಲಿ ನಾಯಕ ಭ್ರಷ್ಟ ಅಧಿಕಾರಿಗಳ ಮನೆ, ಕಚೇರಿಗಳ ಮೇಲೆ ಆದಾಯ ತೆರಿಗೆ, ಲೋಕಾಯುಕ್ತ ಅಧಿಕಾರಿಗಳ ಸೋಗಿನಲ್ಲಿ ದಾಳಿ ನಡೆಸಿ ಕೋಟ್ಯಂತರ ರೂಪಾಯಿ ಲೂಟಿ ಮಾಡುವ ಮಾದರಿಯಲ್ಲಿ ಭ್ರಷ್ಟ ಅಧಿಕಾರಿಗಳಿಗೆ ಕರೆ ಮಾಡಿ ಹಣ ವಸೂಲಿ ಮಾಡಲು ಸಂಚು ರೂಪಿಸಿದ್ದ. ಬಾಗೇಪಲ್ಲಿಯಿಂದಲೇ ಮೊದಲು ಸುಲಿಗೆ ಆರಂಭಿಸಿದ್ದ. ಬೆದರಿದ ಅಧಿಕಾರಿಗಳು ಲಕ್ಷಾಂತರ ರೂಪಾಯಿ ನೀಡಿದ್ದರು’ ಎಂದು ಪೊಲೀಸರು ಹೇಳಿದರು.

‘ಸರ್ಕಾರಿ ಅಧಿಕಾರಿಗಳ ಮೊಬೈಲ್ ಸಂಖ್ಯೆ ಪಡೆದು, ಕರೆ ಮಾಡಿ ಲೋಕಾಯುಕ್ತ ಇನ್‌ಸ್ಪೆಕ್ಟರ್ ಚಂದ್ರಶೇಖರ್ ಎಂದು ಪರಿಚಯಿಸಿಕೊಳ್ಳುತ್ತಿದ್ದ. ನಿಮ್ಮ ವಿರುದ್ಧ ಲೋಕಾಯುಕ್ತಕ್ಕೆ ದೂರುಗಳು ಬಂದಿವೆ. ಈ ಬಗ್ಗೆ ಎಡಿಜಿಪಿ ಮಾತನಾಡುತ್ತಾರೆ ಎಂದು ಹೇಳಿ ಬೆದರಿಕೆ ಹಾಕುತ್ತಿದ್ದ. ಈ ದೂರನ್ನು ವಿಚಾರಣೆ ನಡೆಸದೇ ಮುಕ್ತಾಯಗೊಳಿಸಲು ಹಣ ನೀಡಬೇಕಾಗುತ್ತದೆ. ಕೇಳಿದಷ್ಟು ಹಣ ನೀಡಿದರೆ, ಟೆಕ್ನಿಕಲ್ ತಂಡದಿಂದ ವಿಚಾರಣೆ ನಡೆಸಿ ‘ಬಿ’ ವರದಿ ಹಾಕಲಾಗುವುದೆಂದು ಹೇಳುತ್ತಿದ್ದ’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಎಂಎಲ್‌ಸಿ ಹರಿಪ್ರಸಾದ್ ಹೆಸರಿನಲ್ಲಿ ನಕಲಿ ಪಾಸ್: ಆರೋಪಿ ಬಂಧನ

ಬೆಂಗಳೂರು: ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರ ಹೆಸರಿನಲ್ಲಿ ನಕಲಿ ಪಾಸ್ ಸೃಷ್ಟಿಸಿ, ಕಾರಿಗೆ ಹಾಕಿಕೊಂಡು ಸಂಚರಿಸುತ್ತಿದ್ದ ಆರೋಪಿಯನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಯನಗರದ ನಿವಾಸಿ, ಹಣ್ಣಿನ ವ್ಯಾಪಾರಿ ಸಿಬ್ಗತ್ ಉಲ್ಲಾ ಬೋಖರಿ ಬಂಧಿತ ಆರೋಪಿ.

‘ನಕಲಿ ಪಾಸ್ ಸೃಷ್ಟಿಸಿ, ವ್ಯಕ್ತಿಯೊಬ್ಬ ಓಡಾಟ ನಡೆಸುತ್ತಿರುವ ಕುರಿತು ಬಿ.ಕೆ.ಹರಿಪ್ರಸಾದ್ ಅವರ ಆಪ್ತ ಸಹಾಯಕ ಎಸ್.ಬಿ.ಅವಿನಾಶ್ ಅವರು ಡಿ.29ರಂದು ದೂರು ನೀಡಿದ್ದರು. ದೂರು ಆಧರಿಸಿ, ಆರೋಪಿಯನ್ನು ಬಂಧಿಸಲಾಯಿತು. ಆರೋಪಿ ಓಡಾಟ ನಡೆಸುತ್ತಿದ್ದ ಇನ್ನೊವಾ ಕ್ರಿಸ್ಟಾ ಕಾರನ್ನು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.



‘ಟೋಲ್‌ಗಳಲ್ಲಿ ಸುಂಕ ಪಾವತಿಯಿಂದ ತಪ್ಪಿಸಿಕೊಳ್ಳಲು ಎಂಎಲ್‌ಸಿ ಹೆಸರಿನಲ್ಲಿ ನಕಲಿ ಪಾಸ್ ಸೃಷ್ಟಿಸಿಕೊಂಡು ಸಂಚರಿಸುತ್ತಿದ್ದ’ ಎಂದು ಹೇಳಿದರು.

‘ಪಾಸ್‌ನಲ್ಲಿ ವಾಹನದ ನೋಂದಣಿ ಸಂಖ್ಯೆ, ಬಿ.ಕೆ. ಹರಿಪ್ರಸಾದ್ ಅವರ ಹೆಸರು ಹಾಕಿಕೊಂಡು ಪಾಸ್ ತಯಾರಿಸಿದ್ದ. ವಿಧಾನ ಪರಿಷತ್ ಕಾರ್ಯದರ್ಶಿ ಅವರ ಸಹಿಯನ್ನು ನಕಲು ಮಾಡಲಾಗಿತ್ತು’ ಎಂದು ಪೊಲೀಸರು ಹೇಳಿದರು.

ದರೋಡೆಗೆ ಹೊಂಚು: 6 ಮಂದಿ ಸೆರೆ

ಬೆಂಗಳೂರು: ರಸ್ತೆಗಳಲ್ಲಿ ತೆರಳುವ ಸಾರ್ವಜನಿಕರನ್ನು ಅಡ್ಡಗಟ್ಟಿ ಬೆಲೆಬಾಳುವ ವಸ್ತುಗಳನ್ನು ದೋಚಲು ಹೊಂಚು ಹಾಕುತ್ತಿದ್ದ ಆರು ಮಂದಿ ಆರೋಪಿಗಳನ್ನು ಸಿಸಿಬಿ ಬಂಧಿಸಿದ್ದಾರೆ.

ನಿತಿನ್, ಯತೀಂದ್ರ, ಚಂದನ್, ಲೋಕೇಶ್, ಪ್ರಕಾಶ್, ಮುನಿಯಪ್ಪ ಬಂಧಿತ ಆರೋಪಿಗಳು.

ಬಂಧಿತರಿಂದ ಮಾರಕಾಸ್ತ್ರ ಹಾಗೂ ಮೂರು ದ್ವಿಚಕ್ರ ವಾಹನ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

‘ಗೋವಿಂದರಾಜಪುರ ಪೊಲೀಸ್ ಠಾಣೆ ವ್ಯಾಪ್ತಿಯ ವೀರಣ್ಣಪಾಳ್ಯದ ಹಿಂದೂ ರುದ್ರಭೂಮಿ ಕಡೆಗೆ ತೆರಳುವ ರಸ್ತೆಯಲ್ಲಿ ಬರುವ ಸಾರ್ವಜನಿಕರನ್ನು ಅಡ್ಡಗಟ್ಟಿ ಮಾರಕಾಸ್ತ್ರ ತೋರಿಸಿ ಬೆದರಿಸಿ ಹಣ ಹಾಗೂ ಚಿನ್ನಾಭರಣ ದರೋಡೆ ನಡೆಸಲು ಹೊಂಚು ಹಾಕುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಸ್ಥಳಕ್ಕೆ ತೆರಳಿ ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

ಆರೋಪಿಗಳ ಪೈಕಿ ಒಬ್ಬ, ಕೆ.ಜಿ. ಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2018ರಲ್ಲಿ ನಡೆದಿದ್ದ ಡಕಾಯಿತಿ ಪ್ರಕರಣದಲ್ಲಿ ಪಾಲ್ಗೊಂಡಿದ್ದ ಎಂದು ಪೊಲೀಸರು ಹೇಳಿದರು.

ಹಳಿಗೆ ಜಿಗಿದ ಮಹಿಳೆ: ಮೆಟ್ರೊ ಸಂಚಾರಕ್ಕೆ ಅಡಚಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರ ಮೆಟ್ರೊ ನಿಲ್ದಾಣದಲ್ಲಿ ಮೊಬೈಲ್ ಎತ್ತಿಕೊಳ್ಳಲು ಹಳಿಗೆ ಜಿಗಿದ ಮಹಿಳೆಯೊಬ್ಬರನ್ನು ಭದ್ರತಾ ಸಿಬ್ಬಂದಿ ರಕ್ಷಿಸಿದ್ದಾರೆ.

ವಿದ್ಯುತ್ ಸರಬರಾಜು ಸ್ಥಗಿತಗೊಳಿಸಿದ್ದರಿಂದ ನಮ್ಮ ಮೆಟ್ರೊ ಸಂಚಾರಕ್ಕೆ ಕೆಲವು ನಿಮಿಷ ಅಡಚಣೆಯಾಯಿತು.

ಇಂದಿರಾನಗರದ ನಿಲ್ದಾಣದ ಒಂದನೇ ಪ್ಲಾಟ್‌ಫಾರ್ಮ್‌ಗೆ ಸೋಮವಾರ ಸಂಜೆ 6.40ಕ್ಕೆ ಬಂದಿದ್ದ ಮಹಿಳೆಯೊಬ್ಬರ ಮೊಬೈಲ್ ಕೈತಪ್ಪಿ, ಹಳಿ ಮೇಲೆ ಬಿತ್ತು. ಅದನ್ನು ತೆಗೆದುಕೊಳ್ಳಲು ಕೆಳಗೆ ಜಿಗಿದರು. ಇದನ್ನು ಕಂಡ ಭದ್ರತಾ ಸಿಬ್ಬಂದಿ ಕೂಡಲೇ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಿದರು. ಸಹಪ್ರಯಾಣಿಕರ ಸಹಾಯದಿಂದ ಮಹಿಳೆಯನ್ನು ಮೇಲಕ್ಕೆತ್ತಲಾಯಿತು.

ಮೆಟ್ರೊ ಸ್ಥಗಿತ: ಒಮ್ಮೆಲೇ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದರಿಂದ ನೇರಳೆ ಮಾರ್ಗದಲ್ಲಿ ಸಂಚಾರದಲ್ಲಿ ಇದ್ದ ಮೆಟ್ರೊಗಳು ಅಲ್ಲಲ್ಲೇ ನಿಲುಗಡೆಗೊಂಡು ಗೊಂದಲ ಉಂಟಾಯಿತು. ಎಲ್ಲ ಸಿಗ್ನಲಿಂಗ್‌ಗಳನ್ನು ಮರುಹೊಂದಾಣಿಕೆ ಮಾಡಿ, ವಿದ್ಯುತ್ ಸಂಪರ್ಕ ನೀಡಿ, ಮೆಟ್ರೊ ರೈಲು ಪುನರ್‌ಸಂಚಾರ ಆರಂಭಿಸಲು 15 ನಿಮಿಷ ಬೇಕಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

ಮಹಿಳೆ ನಾಪತ್ತೆ: ‘750 ವೋಲ್ಟ್ ವಿದ್ಯುತ್ ಹರಿಯುವ ಹಳಿಗಳಲ್ಲಿ ಮೆಟ್ರೊ ರೈಲು ಸಂಚರಿಸುತ್ತದೆ. ಮಹಿಳೆ ಕೆಳಗೆ ಹಾರಿರುವುದು ವಿಚಿತ್ರ ಘಟನೆಯಾಗಿದೆ. ನಮ್ಮ ಸಿಬ್ಬಂದಿ ತುರ್ತು ಟ್ರಿಪ್ಪರ್ ಒತ್ತಿ ವಿದ್ಯುತ್ ಕಡಿತಗೊಳಿಸಿ ಮಹಿಳೆಯ ಜೀವ ಉಳಿಸಿದರು.

ಈ ಸಂದರ್ಭದಲ್ಲಿ ಗೊಂದಲ ಉಂಟಾಗಿದ್ದರಿಂದ ಜನ ಸೇರಿದ್ದರು. ಅವರ ನಡುವೆ ಮಹಿಳೆ ನುಸುಳಿಕೊಂಡು ಪರಾರಿಯಾಗಿದ್ದಾರೆ. ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಮಹಿಳೆಯ ಚಲನವಲನ ದಾಖಲಾಗಿದೆ. ಮೆಟ್ರೊ ನಿಲ್ದಾಣಕ್ಕೆ ಮಹಿಳೆ ಬಂದಾಗ ಸಿಕ್ಕಿಬೀಳಲಿದ್ದಾರೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿ ಹೇಳಿದರು.

₹8.40 ಲಕ್ಷದ ಮಾದಕವಸ್ತು ಜಪ್ತಿ

ಹೊಸ ವರ್ಷಾಚರಣೆ ವೇಳೆ ಮಾದಕ ವಸ್ತು ಪೂರೈಕೆ: ಪೆಡ್ಲರ್ ಬಂಧನ

ಪ್ರಜಾವಾಣಿ ವಾರ್ತೆ


ಭರತ್

ಬೆಂಗಳೂರು: ಹೊಸ ವರ್ಷಾಚರಣೆ ವೇಳೆ ಗ್ರಾಹಕರಿಗೆ ಮಾದಕ ವಸ್ತುಗಳನ್ನು ಪೂರೈಸುತ್ತಿದ್ದ ಡ್ರಗ್ಸ್ ಪೆಡ್ಲರ್‌ನನ್ನು ಕೇಂದ್ರ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ದೊಮ್ಮಲೂರು ನಿವಾಸಿ ಭರತ್ ಬಂಧಿತ ಆರೋಪಿ. ‘ಬಂಧಿತ ಆರೋಪಿಯಿಂದ ₹8.40 ಲಕ್ಷ ಮೌಲ್ಯದ ಎಂಡಿಎಂಎ ಕ್ರಿಸ್ಟಲ್, ಮಾದಕ ವಸ್ತುಗಳಿದ್ದ ಮಾತ್ರೆ, ಗಾಂಜಾ ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

‘ಹೊಸ ವರ್ಷದ ಪಾರ್ಟಿಗಳಿಗೆ ಮಾದಕ ವಸ್ತುಗಳನ್ನು ಪೂರೈಸುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ವಿಶೇಷ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು’ ಎಂದು ತಿಳಿಸಿದರು.

‘ಹಲಸೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾದಕ ಪದಾರ್ಥಗಳ ಮಾರಾಟದಲ್ಲಿ ತೊಡಗಿದ್ದಾಗ ಆರೋಪಿಯನ್ನು ಬಂಧಿಸಲಾಗಿದೆ. ಅಕ್ರಮವಾಗಿ ಹಣ ಸಂಪಾದಿಸುವ ಉದ್ದೇಶದಿಂದ ನಿಷೇಧಿತ ಮಾದಕ ಪಿಲ್ಸ್‌ಗಳು ಮತ್ತು ಗಾಂಜಾವನ್ನು ಸ್ಥಳೀಯ ಡ್ರಗ್ಸ್ ಪೆಡ್ಲರ್‌ಗಳಿಂದ ಖರೀದಿಸಿ, ಪರಿಚಯಸ್ಥ ಗ್ರಾಹಕರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ’ ಎಂದು ತಿಳಿಸಿದರು. ಆರೋಪಿಯ ವಿರುದ್ಧ ಹಲಸೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

21ನೇ ಮಹಡಿಯಿಂದ ಜಿಗಿದು ಟೆಕಿ ಆತ್ಮಹತ್ಯೆ

ಅಪರಾಧ ಸುದ್ದಿ

ಬೆಂಗಳೂರು: ಬೆಳ್ಳಂದೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಟೆಕಿಯೊಬ್ಬರು ಅಪಾರ್ಟ್‌ಮೆಂಟ್‌ನ 21ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಧಾರವಾಡದ ಸಾರಂಗ್ ಕುಲಕರ್ಣಿ(27) ಆತ್ಮಹತ್ಯೆ ಮಾಡಿಕೊಂಡವರು.

‘ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸಾರಂಗ್, ಸರ್ಜಾಪುರ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್‌ನ 21ನೇ ಮಹಡಿಯ ಫ್ಲ್ಯಾಟ್‌ನಲ್ಲಿ ಒಬ್ಬರೇ ನೆಲೆಸಿದ್ದರು. ಇವರ ಪೋಷಕರು ಜೆ.ಪಿ.ನಗರದಲ್ಲಿ ವಾಸವಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ವೈಯಕ್ತಿಕ ಕಾರಣಕ್ಕೆ ಎರಡು ತಿಂಗಳ ಹಿಂದೆ ಕೆಲಸ ತೊರೆದಿದ್ದ ಸಾರಂಗ್ ಕುಲಕರ್ಣಿ, ಬೇರೆ ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ. ಮನೆಯಲ್ಲಿ ಒಬ್ಬರೇ ಇರುತ್ತಿದ್ದರು. ಮಂಗಳವಾರ ಬೆಳಿಗ್ಗೆ 8 ಗಂಟೆ ಸುಮಾರಿಗೆ ತಾನು ವಾಸವಾಗಿದ್ದ ಅಪಾರ್ಟ್‌ಮೆಂಟ್‌ನಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು. ‘ತಾನು ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯವಾಗುತ್ತಿಲ್ಲ’ ಎಂದು ಪೋಷಕರ ಬಳಿ ಪದೇಪದೇ ಹೇಳಿಕೊಳ್ಳುತ್ತಿದ್ದರು ಎಂಬುದು ಗೊತ್ತಾಗಿದೆ. ಹೀಗಾಗಿ ಮಾನಸಿಕ ಖಿನ್ನತೆಗೊಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯಿದೆ’ ಎಂದು ಪೊಲೀಸರು ಶಂಕಿಸಿದ್ದಾರೆ. ಬೆಳ್ಳಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ರೇಸ್

ಕುಶಾಖ್ ಗೆಲ್ಲುವ ನಿರೀಕ್ಷೆ

ಚಾಮುಂಡಿ ಮಿಲಿಯನ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಖುಶಾಖ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಡೀಮ್ಡ್ ಟು ಫೈರ್ 7, ಕ್ಯಾಲಿಫೋರ್ನಿಯಾ ಗೋಲ್ಡ್ 12, ನ್ಯಾಚುರಲ್ ಸ್ಪೀಡ್ 4
2ನೇ ರೇಸ್: ಕಾಪರ್ ಸನ್‌ರೈಸ್ 1, ಡಿ ಥರ್ಟೀನ್ ಟ್ವೆಲ್ವ್ 12, ಆಕರ್ 4
3ನೇ ರೇಸ್: ಐ ಕ್ಯಾನ್ 3, ಸೆನ್ಸೆಷನಲ್ ಟೈಟಲ್ 11, ವರ್ದಾನ್ 12
4ನೇ ರೇಸ್: ಜನೈರೊ 13, ನ್ಯಾಚುರಲ್ ಟೊರ್ನಾಡೊ 7, ಇಗ್ನೊರೆನ್ಸ್ ಈಸ್ ಬ್ಲಿಸ್ 1
5ನೇ ರೇಸ್: ಖುಶಾಖ್ 4, ಓಯಸಿಸ್ 1
6ನೇ ರೇಸ್: ಬ್ರೇವ್ ಟ್ರೂಪರ್ 4, ಟಾಮ್ ಕ್ರೂಸರ್ 11, ವೈಲ್ಡ್ ಸ್ವೆಲ್ 3
7ನೇ ರೇಸ್: ಸ್ವಾಗತಮ್ 4, ಕೋಡ್ ಆಫ್ ಹಾನರ್ 9, ಲಕ್ಕಿ ಪಾಯಿಂಟ್ 8

ಉತ್ತಮ ಬೆಟ್: ಬ್ರೇವ್ ಟ್ರೂಪರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	5,6,7

1.13 ಲಕ್ಷ ಚಾಲಕರ ವಿರುದ್ಧ ಪ್ರಕರಣ

ಬೆಂಗಳೂರು: ದೋಷಪೂರಿತ ನೋಂದಣಿ ಫಲಕ ಹಾಗೂ ನೋಂದಣಿ ಫಲಕವಿಲ್ಲದೆ ವಾಹನ ಚಾಲನೆ ಮಾಡುತ್ತಿದ್ದ ಬೈಕ್ ಸವಾರರು ಹಾಗೂ ವಾಹನ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ನಗರ ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ನೋಂದಣಿ ಫಲಕವಿಲ್ಲದೆ ವಾಹನ ಚಾಲನೆ ಮಾಡುತ್ತಿದ್ದ 1,535 ಮಂದಿ ಹಾಗೂ ದೋಷಪೂರಿತ ನೋಂದಣಿ ಫಲಕ ಅಳವಡಿಸಿಕೊಂಡು ಚಾಲನೆ ಮಾಡುತ್ತಿದ್ದ 1,13,517 ಮಂದಿಯನ್ನು ಪತ್ತೆ ಮಾಡಿ, ಪ್ರಕರಣ ದಾಖಲು ಮಾಡಲಾಗಿದೆ. ಅದರಲ್ಲಿ 22 ಮಂದಿಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ನೋಂದಣಿ ಫಲಕಗಳನ್ನು ಉದ್ದೇಶಪೂರ್ವಕವಾಗಿ ಮರೆಮಾಚಿ ಸಂಚಾರ ನಿಯಮ ಉಲ್ಲಂಘಿಸುತ್ತಿರುವ ಚಾಲಕರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಲಾಗಿದೆ.

ತಿಂಗಳ ಬಳಿಕ ದೂರು

ಬೆಳಗಾವಿ: ಮಹಿಳೆ ಎಳೆದಾಡಿ ಬಟ್ಟೆ ಹರಿದು ಥಳಿತ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೈಲಹೊಂಗಲ ತಾಲ್ಲೂಕಿನ ತಿಗಡಿ ಗ್ರಾಮದಲ್ಲಿ ಜಮೀನು ವಿವಾದಕ್ಕೆ ಸಂಬಂಧಪಟ್ಟಂತೆ ಮಹಿಳೆಯೊಬ್ಬರನ್ನು ಎಳೆದಾಡಿ ಬಟ್ಟೆ ಹರಿದು, ಥಳಿಸಿದ ಪ್ರಕರಣ ತಿಂಗಳ ಬಳಿಕ ಹೊರಬಿದ್ದಿದೆ. ಈ ಸಂಬಂಧ ಆರು ಮಹಿಳೆಯರೂ ಸೇರಿ 20 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ತಿಗಡಿ ಗ್ರಾಮದಲ್ಲಿ ಮಹಿಳೆಯ ಮಾವ ತಮ್ಮ ಆರು ಎಕರೆ ಜಮೀನನ್ನು ಬಣವಿ ಕಟ್ಟಲು ಇತರರಿಗೆ ನೀಡಿದ್ದರು. ಆ ಜಾಗವನ್ನು ಕೆಲವರು ಅತಿಕ್ರಮಣ ಮಾಡಿದ್ದಾರೆ ಎಂದು ಮಹಿಳೆ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಈ ಪ್ರಕರಣ ಬೈಲಹೊಂಗಲ ನ್ಯಾಯಾಲಯ ಹಾಗೂ ತಾಲ್ಲೂಕು ಪಂಚಾಯಿತಿಯಲ್ಲಿದೆ.

ಆರೋಪಿಗಳಲ್ಲಿ ಕೆಲವರು ತಮ್ಮ ಜಮೀನಿಗೆ ನೀರು ಬಳಸಲು ಅಳವಡಿಸಿರುವ ಪೈಪ್‌ಲೈನ್ ಮಹಿಳೆಗೆ ಸೇರಿದ ಜಮೀನಿಗೆ ಹೊಂದಿಕೊಂಡಿದೆ. ಇದರಿಂದ ಜಮೀನಿಗೆ ಹೆಚ್ಚು ನೀರು ನುಗ್ಗಿ ಬೆಳೆ ಹಾಳಾಗುತ್ತಿತ್ತು. ಲೋಕೋಪಯೋಗಿ ಇಲಾಖೆಗೆ ದೂರು ನೀಡಿದ್ದರಿಂದ ಪೈಪ್‌ಲೈನ್ ತೆರವುಗೊಳಿಸಲಾಗಿತ್ತು.


‘2023ರ ನವೆಂಬರ್ 21ರಂದು ಇದೇ ವಿಚಾರಕ್ಕೆ ಆರೋಪಿಗಳು ನನ್ನ ವಿರುದ್ಧ ಜಗಳ ಮಾಡಿದರು. 20 ಜನ ಸೇರಿ ನನ್ನ ಮೇಲೆ ಹಲ್ಲೆ ಮಾಡಿದರು. ಉಟ್ಟಿದ್ದ ಬಟ್ಟೆ ಎಳೆದಾಡಿ ಹರಿದರು. ಪ್ರಾಣ ಬೆದರಿಕೆ ಒಡ್ಡಿದರು’ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

‘ಮತ್ತೊಂದು ಸ್ಥಳದಲ್ಲಿ ಇನ್ನೊಬ್ಬ ಆರೋಪಿ ಹಲ್ಲೆ ಮಾಡಿ, ಅವಾಚ್ಯ ಪದಗಳಿಂದ ನಿಂದಿಸಿದ. ಕೆಲ ಕಾಗದಗಳ ಮೇಲೆ ಸಹಿ ಕೂಡ ಪಡೆದ. ಹಣ, ಮೊಬೈಲ್‌ಗಳನ್ನು ಕಿತ್ತುಕೊಂಡ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ತಿಂಗಳ ಬಳಿಕ ಎಫ್‌ಐಆರ್: ಘಟನೆ 2023ರ ನವೆಂಬರ್ 21ರಂದು ನಡೆದಿದ್ದರೂ ಡಿಸೆಂಬರ್ 30ರಂದು ಬೈಲಹೊಂಗಲ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಆದರೆ, ಈವರೆಗೆ ಯಾರನ್ನೂ ಬಂಧಿಸಿಲ್ಲ. ಪ್ರಕರಣವು ಈಗ ಜಿಲ್ಲಾ ಮಹಿಳಾ ಪೊಲೀಸ್ ಠಾಣೆಗೆ ವರ್ಗಾವಣೆಯಾಗಿದೆ.

‘ತಿಗಡಿ ಗ್ರಾಮದಲ್ಲಿ ಆಸ್ತಿ ವಿವಾದಕ್ಕಾಗಿ ಜಗಳ ನಡೆದಿದೆ. ಮಹಿಳೆ ತಡವಾಗಿ ದೂರು ನೀಡಿದ್ದಾರೆ. 20 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ತನಿಖೆ ಮುಂದುವರಿದಿದೆ’ ಎಂದು ಜಿಲ್ಲಾ ಮಹಿಳಾ ಪೊಲೀಸ್ ಠಾಣೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕೊಲೆ ಪ್ರಕರಣ: ಆರೋಪಿ ಬಂಧನ



ಬೆಂಗಳೂರು: ಹೊಸ ವರ್ಷದ ರಾತ್ರಿ ಮನೆಗೆ ತೆರಳುತ್ತಿದ್ದ ವಿಜಯ್ ಕುಮಾರ್ ಎಂಬುವವರನ್ನು ಕೊಲೆ ಮಾಡಿದ್ದ ಆರೋಪಿಯನ್ನು ಹನುಮಂತನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕಿನ ವಿಷ್ಣು ಬಂಧಿತ.

ಆರೋಪಿ, ಡಿ.31ರಂದು ರಾತ್ರಿ ವಿಜಯ್ ಕುಮಾರ್ ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

‘ಆಟೊ ಚಾಲಕನಾಗಿರುವ ಆರೋಪಿ ವಿಷ್ಣು ಹಾಗೂ ವಿಜಯ್ ಸ್ನೇಹಿತರಾಗಿದ್ದು, ನಾಲ್ಕು ತಿಂಗಳ ಹಿಂದೆ ಇಬ್ಬರ ನಡುವೆ ವೈಯಕ್ತಿಕ ವಿಚಾರಕ್ಕೆ ಜಗಳವಾಗಿತ್ತು. ಕೆಲವು ದಿನಗಳ ಹಿಂದೆ ಪರಸ್ಪರ ಎದುರಾದಾಗ ವಿಷ್ಣುಗೆ ವಿಜಯ್, ಕೊಲೆ ಬೆದರಿಕೆ ಹಾಕಿದ್ದ. ಅದಕ್ಕೆ ಪ್ರತಿಯಾಗಿ ವಿಷ್ಣು ಸಹ ಕೊಲೆ ಬೆದರಿಕೆ ಹಾಕಿದ್ದ’ ಎಂದು ಪೊಲೀಸರು ಹೇಳಿದರು.

‘ವಿಜಯ್ ಮತ್ತು ಸ್ನೇಹಿತರು ಡಿ.31ರಂದು ರಾತ್ರಿ ಹೊಸ ವರ್ಷಾಚರಣೆ ಮಾಡಿ ಶ್ರೀನಿವಾಸನಗರದಲ್ಲಿನ ಮನೆಗೆ ನಡೆದುಕೊಂಡು ಹೋಗುತ್ತಿದ್ದರು. ಮಾರ್ಗ ಮಧ್ಯೆ ಎದುರಾದ ವಿಷ್ಣು, ವಿಜಯ್‌ಗೆ ನಿಂದಿಸಿ ಜಗಳವಾಡಿದ್ದ. ನಂತರ ಜಗಳ ವಿಕೋಪಕ್ಕೆ ತಿರುಗಿ ಪರಸ್ಪರ ಕೈ ಮಿಲಾಯಿಸಿದ್ದರು. ಈ ಹಂತದಲ್ಲಿ ವಿಷ್ಣು, ವಿಜಯ್‌ನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

ಜಾತಿ ಗಣತಿ ವರದಿ ಬಹಿರಂಗ ಪಿಐಎಲ್ ವಜಾ ಕೋರಿ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿದ್ದ ಎಚ್.ಕಾಂತರಾಜ ತಮ್ಮ ಅವಧಿಯಲ್ಲಿ ನಡೆಸಿರುವ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ವರದಿ (ಜಾತಿ ಗಣತಿ) ಬಹಿರಂಗಗೊಳಿಸಬೇಕು ಎಂದು ಕೋರಿ ‘ಮುಖ್ಯಮಂತ್ರಿ’ ಚಂದ್ರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ವಜಾಗೊಳಿಸಬೇಕು’ ಎಂದು ಕೋರಿ ವಕೀಲರೊಬ್ಬರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಈ ಕುರಿತಂತೆ ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿ ಓದನಹಳ್ಳಿಯ ವಕೀಲ ಓ.ಕೆ.ರಘು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು, ‘ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು’ ಎಂದು ರಘು ಪರ ವಕೀಲ ಅಭಿಷೇಕ್ ಕುಮಾರ್ ಅವರು, ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠಕ್ಕೆ ಮಂಗಳವಾರ ಮನವಿ ಮಾಡಿದರು.

‘ಎಂಟು ವರ್ಷಗಳ ಹಿಂದೆ ತಯಾರಿಸಲಾಗಿರುವ ಈ ವರದಿ ಹಲವು ಕಾರಣಗಳಿಂದಾಗಿ ಇನ್ನೂ ಬಹಿರಂಗವಾಗಿಲ್ಲ. ಆಯೋಗದ ಬಳಿ ಮೂಲ ವರದಿಯೇ ಇಲ್ಲ. ಒಂದೆಡೆ ಮೂಲ ವರದಿ ಕಳುವಾಗಿದೆ ಎಂದು ಹೇಳಲಾಗುತ್ತಿದ್ದರೆ, ಮತ್ತೊಂದೆಡೆ, ಆಯೋಗದ ಸದಸ್ಯ ಕಾರ್ಯದರ್ಶಿ ಈ ವರದಿಗೆ ಸಹಿ ಮಾಡಿಲ್ಲ ಎಂಬ ಅಂಶವನ್ನೂ ಕೋರ್ಟ್ ಗಮನಿಸಬೇಕಿದೆ. ವರದಿಯಲ್ಲಿರುವ ಪ್ರಮುಖ ಅಂಶಗಳೆಲ್ಲವೂ ಮಾಧ್ಯಮಗಳಲ್ಲಿ ಸೋರಿಕೆಯಾಗಿದೆ ಎಂದು ಪ್ರತಿಪಾದಿಸಲಾಗುತ್ತಿದೆ. ಈ ಕುರಿತಂತೆ ಮಾಹಿತಿ ಹಕ್ಕು ಕಾಯ್ದೆ ಅಡಿ ಕೋರಲಾದ ಅರ್ಜಿಗೆ ಉತ್ತರಿಸಿರುವ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು, ಮಾಹಿತಿಯು ಗೋಪ್ಯ ಸ್ವರೂಪದ್ದಾಗಿದೆ ಎಂಬ ಉತ್ತರ ನೀಡಿದ್ದು ಇವೆಲ್ಲವೂ ಸಾಕಷ್ಟು ಊಹಾಪೋಹಗಳಿಗೆ ಎಡೆಮಾಡಿಕೊಟ್ಟಿದೆ. ಆದ್ದರಿಂದ, ‘ಮುಖ್ಯಮಂತ್ರಿ’ ಚಂದ್ರು ಮತ್ತಿತರು ಸಲ್ಲಿಸಿರುವ ಅರ್ಜಿಯನ್ನು ಯಾವೆಲ್ಲಾ ಕಾರಣಗಳಿಗೆ ವಜಾಗೊಳಿಸಬಹುದು ಎಂಬುದನ್ನು ಆಲಿಸಲು ಅರ್ಜಿದಾರರ ವಾದವನ್ನೂ ಮನ್ನಿಸಬೇಕು’ ಎಂದು ಅಭಿಷೇಕ್ ಕೋರಿದರು.

ಇದಕ್ಕೆ ನ್ಯಾಯಪೀಠವು, ‘ಮುಖ್ಯಮಂತ್ರಿ’ ಚಂದ್ರು ಸಲ್ಲಿಸಿರುವ ಅರ್ಜಿಯಲ್ಲಿ ಮಧ್ಯಂತರ ಆದೇಶ ನೀಡಲಾಗಿಲ್ಲ. ಹೀಗಾಗಿ, ನಿಮ್ಮ ಮಧ್ಯಂತರ ಅರ್ಜಿ ಸೇರ್ಪಡೆ ವಿಚಾರವನ್ನು ಮೂಲ ಅರ್ಜಿಯ ಮುಂದಿನ ವಿಚಾರಣೆಯಲ್ಲಿ ಪರಿಶೀಲಿಸೋಣ’ ಎಂದು ಪ್ರತಿಕ್ರಿಯಿಸಿತು.

ಅಮೃತ ಮಹೋತ್ಸವ ನಾಳೆಯಿಂದ

ಬೆಂಗಳೂರು: ಯೂತ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾದ ವತಿಯಿಂದ ಇದೇ 4 ಮತ್ತು 5ರಂದು ‘ಭಾರತೀಯ ಸಂಸ್ಕೃತಿ ಸಮ್ಮೇಳನ ಹಾಗೂ ಯೂತ್ ಹಾಸ್ಟೆಲ್‌ನ ಅಮೃತ ಮಹೋತ್ಸವ’ವನ್ನು ನಾಗರಬಾವಿಯಲ್ಲಿರುವ ತೆರಿಗೆ ಭವನದಲ್ಲಿ ಆಯೋಜಿಸಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಕಾರ್ಯಾಧ್ಯಕ್ಷ ಪ್ರಸನ್ನ ಎನ್.ಎಸ್., ‘ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಾಣಿಜ್ಯ ತೆರಿಗೆ ಇಲಾಖೆ ಹೆಚ್ಚುವರಿ ಆಯುಕ್ತ ಬಿ.ವಿ. ಮುರಳಿ ಕೃಷ್ಣ ಚಾಲನೆ ನೀಡಲಿದ್ದಾರೆ. ಅಸೋಸಿಯೇಷನ್ ಅಧ್ಯಕ್ಷ ಡಾ.ಎಲ್.ಕೆ. ರಾಜೀವ್, ರಾಷ್ಟ್ರೀಯ ಕಾರ್ಯಾಧ್ಯಕ್ಷ ಅನು ಮುತ್ತುಕುಮಾರ್ ಭಾಗವಹಿಸಲಿದ್ದಾರೆ’ ಎಂದು ತಿಳಿಸಿದರು. 5ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಬಿಹಾರ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರು ಅಮೃತ ಮಹೋತ್ಸವದ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಲಿದ್ದಾರೆ. ಇದೇ ಸಂದರ್ಭದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಿದ್ದಾರೆ ಎಂದು ಹೇಳಿದರು.

ಅರ್ಜಿ ಆಹ್ವಾನ

ಬೆಂಗಳೂರು: ನಗರದ ಕೃಷಿಕ್ ಸರ್ವೋದಯ ಫೌಂಡೇಷನ್‌ನಿಂದ ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ ಹಾಗೂ ಎಸ್‌ಬಿಐ ಬ್ಯಾಂಕ್‌ನ ಪ್ರೊಬೇಷನರಿ ಆಫೀಸರ್ಸ್ ಮತ್ತು ಕ್ಲರಿಕಲ್ ಹುದ್ದೆಗಳಿಗಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗಾಗಿ ಅರ್ಜಿ ಆಹ್ವಾನಿಸಿದೆ.

ಆಸಕ್ತರು ಜ.15ರೊಳಗೆ ನೋಂದಾಯಿಸಬಹುದು. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 7625000990 ಅಥವಾ ಇಮೇಲ್: ksfbangalore@gmail.com ಸಂಪರ್ಕಿಸಿ.

ಹಮಾಸ್ ಉಪ ಮುಖ್ಯಸ್ಥನ ಹತ್ಯೆ

ಗಾಜಾ ಪಟ್ಟಿ (ಪ್ಯಾಲೆಸ್ಟೀನ್) (ಎಎಫ್‌ಪಿ): ಲೆಬನಾನ್ ರಾಜಧಾನಿ ಬೈರುತ್‌ನ ದಕ್ಷಿಣ ಉಪನಗರದಲ್ಲಿ ಹಮಾಸ್ ಬಂಡುಕೋರರ ಉಪ ಮುಖ್ಯಸ್ಥ ಸಲೇಹ್ ಅಲ್ ಅರುರಿಯನ್ನು ಇಸ್ರೇಲ್ ಸೇನೆ ಹತ್ಯೆ ಮಾಡಿದೆ ಎಂದು ಹಮಾಸ್ ಟಿ.ವಿ ವಾಹಿನಿ ಮಂಗಳವಾರ ವರದಿ ಮಾಡಿದೆ.

ಹಮಾಸ್‌ನ ಮಿತ್ರ ಸಂಘಟನೆ ಹಿಜ್ಬುಲ್ಲಾದ ಬಿಗಿ ಹಿಡಿತವಿರುವ ಲೆಬನಾನ್ ರಾಜಧಾನಿಯ ದಕ್ಷಿಣ ಉಪನಗರಗಳ ಮೇಲೆ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ ಸಲೇಹ್ ಮತ್ತು ಅವರ ಅಂಗರಕ್ಷಕರು ಹತರಾಗಿದ್ದಾರೆ ಎಂದು ಉನ್ನತಮಟ್ಟದ ಭದ್ರತಾ ಅಧಿಕಾರಿಗಳು ತಿಳಿಸಿದ್ದಾರೆ.

ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯ ತಾಯಿ ಅಜೀಜಾ ದೂರು

ಗ್ರಾಮಸ್ಥರಿಗೆ 7 ತಾಸು ಠಾಣೆಯಲ್ಲಿ ದಿಗ್ಬಂಧನ

ಪ್ರಜಾವಾಣಿ ವಾರ್ತೆ

ಕುಣಿಗಲ್ (ತುಮಕೂರು): ರಸ್ತೆಬದಿ ನಿಂತಿದ್ದ ವ್ಯಕ್ತಿಗೆ ತಾಕಿದ ತಮ್ಮ ಕಾರನ್ನು ತಡೆದು ನಿಲ್ಲಿಸಿದ ಗ್ರಾಮಸ್ಥರ ವಿರುದ್ಧ ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್.ಮಹಮ್ಮದ್ ಸುಜೀತಾ ಅವರ ತಾಯಿ ಅಜೀಜಾ ಅವರು ಕೊಲೆ ಯತ್ನ ಪ್ರಕರಣ ದಾಖಲಿಸಿದ್ದಾರೆ.

ಘಟನೆ ನಂತರ ದೂರು ನೀಡಲು ಪೊಲೀಸ್ ಠಾಣೆಗೆ ತೆರಳಿದ ಗ್ರಾಮಸ್ಥರನ್ನು ಏಳು ತಾಸು ಠಾಣೆಯಲ್ಲಿಯೇ ಕೂರಿಸಲಾಗಿತ್ತು. ಬೆಂಗಳೂರಿಗೆ ತೆರಳಿ ಅಜೀಜಾ ಅವರಿಂದ ಮಾಹಿತಿ ಪಡೆದು ಪೊಲೀಸರು ಬಂದ ನಂತರ ಗ್ರಾಮಸ್ಥರನ್ನು ಬಿಟ್ಟು ಕಳಿಸಲಾಗಿತ್ತು. ಆದರೆ, ಮಂಗಳವಾರ ನಾಲ್ವರು ಗ್ರಾಮಸ್ಥರನ್ನು ಬಂಧಿಸಲಾಗಿದೆ.

ಕಾರಿನ ಕನ್ನಡಿ ತಾಗಿದ್ದೇ ಕಾರಣ: ಅಜೀಜಾ ಹಾಗೂ ಇತರರು ಹಾಸನದಿಂದ ಸೋಮವಾರ ಕಾರಿನಲ್ಲಿ ಕುಣಿಗಲ್ ಮೂಲಕ ಬೆಂಗಳೂರಿಗೆ ಹೊರಟಿದ್ದರು. ಕಾರಿನ ಕನ್ನಡಿ ತಾಕಿ ರಸ್ತೆಬದಿ ನಿಂತಿದ್ದ ಕುಮಾರ್ ಎಂಬುವರು ರಸ್ತೆಗೆ ಬಿದ್ದಿದ್ದಾರೆ. ಅಪಘಾತದ ನಂತರ ಕಾರು ನಿಲ್ಲಿಸದೆ ಹೊರಟವರನ್ನು ತಡೆದ ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡಿದ್ದರು.

ಆಗ ಅಜೀಜಾ ಹಾಗೂ ಗ್ರಾಮಸ್ಥರ ಮಧ್ಯೆ ಮಾತಿನ ಚಕಮಕಿ ನಡೆದಿತ್ತು. ಗ್ರಾಮದ ಹಿರಿಯರೊಬ್ಬರು ಕೈಯಲ್ಲಿ ಹಿಡಿದಿದ್ದ ಕೊಡೆ ಅಜೀಜಾ ಅವರಿಗೆ ತಗುಲಿ ತರಚಿದ ಗಾಯವಾಗಿತ್ತು. ಕುಣಿಗಲ್ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಅವರು ಬೆಂಗಳೂರಿಗೆ ತೆರಳಿದ್ದರು.

ಘಟನೆ ನಂತರ ದೂರು ನೀಡಲು ತೆರಳಿದ ಗ್ರಾಮಸ್ಥರನ್ನು ಠಾಣೆಯಲ್ಲಿ ಕೂರಿಸಿದ ಪೊಲೀಸರು ಮಾಹಿತಿ ಪಡೆದುಕೊಂಡು ಬರಲು ಬೆಂಗಳೂರಿಗೆ ತೆರಳಿದ್ದರು. ಅಜೀಜಾ ಅವರಿಂದ ಮಾಹಿತಿ ಪಡೆದು ವಾಪಸ್ ಬರುವವರೆಗೂ (ಮಧ್ಯಾಹ್ನ 3ರಿಂದ ರಾತ್ರಿ 10 ಗಂಟೆ ವರೆಗೆ) ಗ್ರಾಮಸ್ಥರನ್ನು ಠಾಣೆಯಲ್ಲೇ ಕೂರಿಸಿಕೊಳ್ಳಲಾಗಿತ್ತು.

‘ಬಿದನಗೆರೆ ಹತ್ತಿರ ವಾಹನವೊಂದು ವ್ಯಕ್ತಿಗೆ ಡಿಕ್ಕಿ ಹೊಡೆದು ಹೋಗಿತ್ತು. ನಾವು ಕಾರು ನಿಲ್ಲಿಸಿ ವಿಚಾರಿಸಿದೆವು. ಸ್ಥಳಕ್ಕೆ ಬಂದ ಹತ್ತು ಜನರ ಗುಂಪು ನಮ್ಮನ್ನು ಸುತ್ತುವರೆದು ಗಲಾಟೆ ಮಾಡಿತು. ನಾವೇ ಅಪಘಾತ ಮಾಡಿದ್ದೇವೆ ಎಂದು ನಿಂದಿಸಿ ಹಣಕ್ಕೆ ಬೇಡಿಕೆ ಇಟ್ಟರು. ನಮ್ಮ ಮೇಲೆ ಹಲ್ಲೆಗೆ ಯತ್ನಿಸಿ, ಕೊಲ್ಲುವ ಬೆದರಿಕೆ ಹಾಕಿದರು. ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಅಜೀಜಾ ಅವರು ಕುಣಿಗಲ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಈ ದೂರಿನ ಮೇರೆಗೆ ನಾಗರಾಜ್, ಕುಮಾರ್ ಸೇರಿದಂತೆ ಒಂಬತ್ತು ಗ್ರಾಮಸ್ಥರ ವಿರುದ್ಧ ಐಪಿಸಿ 307 (ಕೊಲೆ ಯತ್ನ) ಹಾಗೂ ಇತರ ಕಾಲಂ ಅಡಿ ಪ್ರಕರಣ ದಾಖಲಾಗಿದೆ. ಇದಕ್ಕೆ ಪ್ರತಿಯಾಗಿ ಗ್ರಾಮಸ್ಥರು ಅಜೀಜಾ ಅವರ ವಿರುದ್ಧ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಮನವೊಲಿಕೆ ವಿಫಲ


ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರ ತಾಯಿ ಅಜೀಜಾ ಮತ್ತು ಇತರರು ಪ್ರಯಾಣಿಸುತ್ತಿದ್ದ ಕಾರು

ಈ ಮಧ್ಯೆ ಹಿರಿಯ ಪೊಲೀಸ್ ಅಧಿಕಾರಿಗಳು ಹಾಸನ ಎಸ್.ಪಿ ಸುಜೀತಾ ಜತೆಗೆ ಮಾತುಕತೆ ನಡೆಸಿದ್ದರು. ‘ಸಣ್ಣ ವಿಷಯವನ್ನು ದೊಡ್ಡದು ಮಾಡುವುದು ಬೇಡ’ ಎಂದು ಸಲಹೆ ನೀಡಿದ್ದರು. ಅವರು ಪಟ್ಟು ಹಿಡಿದಿದ್ದರಿಂದ ದೂರು ದಾಖಲಿಸಿಕೊಳ್ಳಲಾಯಿತು ಎಂದು ಮೂಲಗಳು ತಿಳಿಸಿವೆ.

‘ಅತಿವೇಗ ಹಾಗೂ ಅಜಾಗರೂಕತೆಯಿಂದ ಬಂದ ಕಾರು ಡಿಕ್ಕಿ ಹೊಡೆದಿದೆ. ಇದರಿಂದ ಕುಮಾರ್ ಎಂಬುವರ ತಲೆಗೆ ಗಾಯವಾಗಿದೆ. ಘಟನೆ ನಂತರ ಕಾರು ನಿಲ್ಲಿಸದೆ ಪರಾರಿಯಾಗಲು ಯತ್ನಿಸಿದ್ದು, ತಡೆದು ನಿಲ್ಲಿಸಿ ವಿಚಾರಿಸಲಾಯಿತು. ನಮ್ಮನ್ನು ಬೈದು ಕಾರಿನಲ್ಲಿ ತೆರಳಿದರು. ಚಾಲಕ ಮತ್ತು ಕಾರಿನಲ್ಲಿದ್ದವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಗ್ರಾಮಸ್ಥರು ದೂರಿನಲ್ಲಿ ತಿಳಿಸಿದ್ದಾರೆ.

‘ಅಪಘಾತ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಪೊಲೀಸರು, ಗ್ರಾಮಸ್ಥರ ವಿರುದ್ಧ ದರ್ಪ ತೋರುತ್ತಿದ್ದಾರೆ. ಅಪಘಾತ ಮಾಡಿ, ಅವರೇ ದೂರು ನೀಡಿದ್ದಾರೆ. ಇದರಿಂದ ಅಮಾಯಕರು ಸಂಕಷ್ಟಕ್ಕೆ ಸಿಲುಕಿದ್ದಾರೆ’ ಎಂದು ಬಿದನಗೆರೆ ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಇಂದು

ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಬಹುಮಾನ ವಿತರಣಾ ಸಮಾರಂಭ: ಉದ್ಘಾಟನೆ: ಆರ್. ಶ್ರೀಕಾಂತ್, ಅತಿಥಿ: ನಿರ್ಮಲಾ ಡಿ.ಆರ್., ಅಧ್ಯಕ್ಷತೆ: ಎನ್.ಪಿ. ಕಾರ್ತಿಕ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಸ್ವತಂತ್ರ ಪದವಿ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 11

ಸಾವಿತ್ರಿಬಾಯಿ ಫುಲೆ ಜಯಂತಿ: ಆಶೀರ್ವಚನ: ಭಿಕ್ಕುಣಿ ಬುದ್ಧಮ್ಮ, ಉದ್ಘಾಟನೆ: ಎಂ. ವೆಂಕಟಸ್ವಾಮಿ, ಅಧ್ಯಕ್ಷತೆ: ಬಿ.ಟಿ. ಲಲಿತಾನಾಯಕ್, ಮುಖ್ಯಭಾಷಣಕಾರರು: ಎಂ. ಸುಮಿತ್ರ, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ನಾಗಸೇನಾ ವಿದ್ಯಾಲಯ ಸಭಾಂಗಣ, ಸದಾಶಿವನಗರ, ಬೆಳಿಗ್ಗೆ 11.30

ಪಿಇಎಸ್ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ: ಉದ್ಘಾಟನೆ: ಎಂ.ಆರ್. ದೊರೆಸ್ವಾಮಿ, ಅತಿಥಿಗಳು: ಜವಹರ್ ದೊರೆಸ್ವಾಮಿ, ಆನಂದ ರಂಗನಾಥನ್, ರಮ್ಯಾ ವಿಶ್ವನಾಥ್, ರಾಮನ್, ಲಕ್ಷ್ಮಣನ್, ಸನ್ಮಾನ: ಜೆ. ಸೂರ್ಯಪ್ರಸಾದ್, ಶ್ರೇಯಸ್ ಹೊಸೂರು, ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಆರ್.ಆರ್. ಆವರಣ, ಬಿಎಸ್‌ಕೆ 3ನೇ ಹಂತ, ಸಂಜೆ 4.50

ಸಂಸ್ಥಾಪನಾ ದಿನಾಚರಣೆ, ಪ್ರತಿಭಾ ಪುರಸ್ಕಾರ: ಉದ್ಘಾಟನೆ: ವಿ. ಗೋಪಾಲಗೌಡ, ಅತಿಥಿಗಳು: ತುಷಾರ್ ಗಿರಿನಾಥ್, ವಿ. ಮನೋಹರ್, ಅನುರಾಧ ಭಟ್, ಆಯೋಜನೆ: ಬೃಹತ್ ಬೆಂಗಳೂರು ಪಾಲಿಕೆ ನೌಕರರ ಸಹಕಾರ ಸಂಘ ನಿಯಮಿತ, ಸ್ಥಳ: ಸರ್ ಪುಟ್ಟಣ್ಣಚೆಟ್ಟಿ ಪುರಭವನ, ಜೆ.ಸಿ. ರಸ್ತೆ, ಸಂಜೆ 5.30

ಸಾವಿತ್ರಿಬಾಯಿ ಫುಲೆ ಜಯಂತಿ: ಉದ್ಘಾಟನೆ: ಲೀಲಾ ಸಂಪಿಗೆ, ಅಧ್ಯಕ್ಷತೆ: ಡಿ. ಶಿವಶಂಕರ್, ಅತಿಥಿಗಳು: ಜಾವೇದ ನಸೀಮ, ಲಕ್ಷ್ಮಿದೇವಿ, ಮಾನಸ ಸಿದ್ಧಲಿಂಗಯ್ಯ, ಅಭಿನಂದಿತರು: ಮೆಹನಾಜ್ ಎಂ.ಐ., ಹೇಮಲತ, ಎನ್. ಸುಮಿತ್ರಾ ದೇವಿ, ಅಮೃತ, ಮಹೇಶ್ ಕುಮಾರ್ ಕೆ.ಪಿ., ಕೆ. ಮಹದೇವಯ್ಯ, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ಎಸ್.ಸಿ., ಎಸ್.ಟಿ ನೌಕರರ ಸಮನ್ವಯ ಸಮಿತಿ, ಸ್ಥಳ: ಕರ್ನಾಟಕ ಸಚಿವಾಲಯ ಕ್ಲಬ್, ಕಬ್ಬನ್ ಉದ್ಯಾನ, ಸಂಜೆ 5.45

ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನ, ಧನುರ್ಮಾಸದ ಇಷ್ಟಲಿಂಗ ಮಹಾಶಿವಪೂಜೆಯ ಉದ್ಘಾಟನೆ: ಸಾನ್ನಿಧ್ಯ: ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಸ್ವಾಮೀಜಿ, ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಶಿವರಾಜ ತಂಗಡಗಿ, ಅತಿಥಿಗಳು: ಎಂ. ಕೃಷ್ಣಪ್ಪ, ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಆಯೋಜನೆ: ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ಕಾರ್ಡ್ ರಸ್ತೆ, ವಿಜಯನಗರ, ಸಂಜೆ 6

ಕುಮಾರವ್ಯಾಸ ರಚಿಸಿದ ‘ಕರ್ನಾಟ ಭಾರತ ಕಥಾಮಂಜರಿ’ ವಿಶೇಷ ಉಪನ್ಯಾಸ: ಭಾಷಣಕಾರರು: ಎಸ್.ಎನ್. ಶ್ರೀಧರ್, ಕೃಷ್ಣಮೂರ್ತಿ ಹನೂರು, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು, ಸಂಜೆ 6.30ರಿಂದ

ಪ್ರವಚನ ವಾಹಿನಿ: ‘ಕುಮಾರವ್ಯಾಸ ಭಾರತ’ ಕುರಿತು ಉಪನ್ಯಾಸ: ಕೆ. ಲಕ್ಷ್ಮೀನಾರಾಯಣ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in



ವಿಜಯಪುರದ ಜ್ಞಾನಯೋಗಾಶ್ರಮದಲ್ಲಿ ಮಂಗಳವಾರ ನಡೆದ ಸಿದ್ದೇಶ್ವರ ಶ್ರೀಗಳಿಗೆ ನುಡಿನಮನ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಕನೇರಿಯ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ, ಜ್ಞಾನಯೋಗಾಶ್ರಮದ ಅಧ್ಯಕ್ಷ ಬಸವಲಿಂಗ ಸ್ವಾಮೀಜಿ, ಸಿರಿಗೆರೆ ಬೃಹನ್ಮಠದ ಪೀಠಾಧ್ಯಕ್ಷರಾದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಚಿವರಾದ ಶಿವಾನಂದ ಪಾಟೀಲ, ಎಂ.ಬಿ.ಪಾಟೀಲ, ಎಚ್.ಕೆ.ಪಾಟೀಲ, ಸಂಸದ ಪಿ.ಸಿ.ಗದ್ದಿಗೌಡ, ಶಾಸಕರಾದ ಜಿ.ಟಿ. ಪಾಟೀಲ, ಅಶೋಕ ಮನಗೂಳಿ, ವಿ.ಎಸ್.ನಾಡಗೌಡ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಜ್ಞಾನಯೋಗಾಶ್ರಮದ ಸಿದ್ದೇಶ್ವರ ಶ್ರೀಗಳಿಗೆ ಗುರುನಮನ

'ಸಾವಿರ ಎಕರೆಯಲ್ಲಿ ಅರಣ್ಯ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಜ್ಞಾನಯೋಗಾಶ್ರಮದ ಸಿದ್ದೇಶ್ವರ ಶ್ರೀಗಳ ಸ್ಮರಣೆ ಹಿನ್ನೆಲೆಯಲ್ಲಿ ವಿಜಯಪುರ ಜಿಲ್ಲೆಯಲ್ಲಿ ಒಂದು ಸಾವಿರ ಎಕರೆ ಪ್ರದೇಶದಲ್ಲಿ ಅರಣ್ಯ ಬೆಳೆಸಲು ಸಚಿವರು, ಮಠಾಧೀಶರು ಕೋರಿದ್ದು, ಈ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಲ್ಲಿನ ಜ್ಞಾನಯೋಗಾಶ್ರಮ ದಲ್ಲಿ ಮಂಗಳವಾರ ನಡೆದ ಸಿದ್ದೇಶ್ವರ ಶ್ರೀಗಳ ಪ್ರಥಮ ವರ್ಷದ ನುಡಿನಮನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಬಸವಾದಿ ಶರಣರು ಜಾತಿ, ವರ್ಗ, ಧರ್ಮ ರಹಿತ ಸಮ ಸಮಾಜದ ಕನಸು ಕಂಡಿದ್ದರು. ನಮ್ಮ ಸಂವಿಧಾನವೂ ಇದನ್ನೇ ಹೇಳುತ್ತದೆ. ಸಿದ್ದೇಶ್ವರ ಶ್ರೀಗಳ ಆಶಯವೂ ಅದೇ ಆಗಿತ್ತು ಎಂಬುದು ಅವರ ಅಂತಿಮ ಅಭಿವಂದನಾ ಪತ್ರದಲ್ಲಿ (ವಿಲ್) ದಾಖಲಾಗಿದೆ' ಎಂದರು.

'ದಾರ್ಶನಿಕರಾಗಿದ್ದ ಸಿದ್ದೇಶ್ವರ ಶ್ರೀಗಳು ಮನುಷ್ಯ ಹೇಗಿರಬೇಕು, ಹೇಗೆ ಬಾಳಬೇಕು ಎಂಬುದನ್ನು ತಮ್ಮ ಪ್ರವಚನಗಳಲ್ಲಿ ತಿಳಿಸಿದರು. ಸಂತರಲ್ಲಿ ಇವರಷ್ಟು ಸರಳ ವ್ಯಕ್ತಿತ್ವ ನಾನು ಇನ್ನೊಬ್ಬರನ್ನು ನೋಡಿಲ್ಲ. ಅವರಲ್ಲಿ ಯಾವುದೇ ಆಡಂಬರ ಇರಲಿಲ್ಲ, ಅಹಂ ಇರಲಿಲ್ಲ' ಎಂದರು.

ಶ್ರೀಗಳ ಪ್ರವಚನದ ಸಾರವನ್ನು ಒಳಗೊಂಡಂತೆ ಹೊರತರಲಾದ 20 ಪುಸ್ತಕಗಳನ್ನು ಸಿದ್ದರಾಮಯ್ಯ ಅವರು ಬಿಡುಗಡೆ ಮಾಡಿದರು. ಪ್ರಧಾನಿ ನರೇಂದ್ರ ಮೋದಿ ಅವರು ಕಳುಹಿಸಿದ ಗುರುನಮನ ಸಂದೇಶವನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಾಚಿಸಿದರು.

ಬಾಬಾ ರಾಮದೇವ್ ಅವರು ಹರಿದ್ವಾರದಿಂದ ಗುರುನಮನ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ್ದು, ನೇರ ಪ್ರಸಾರ ಮಾಡಲಾಯಿತು.

ಗುರುನಮನದ ನಿಮಿತ್ತ ಜಿಲ್ಲೆ ಸೇರಿ ರಾಜ್ಯ, ಹೊರರಾಜ್ಯದಿಂದ ಅಪಾರ ಭಕ್ತರು, ಮಠಾಧೀಶರು ಜ್ಞಾನಯೋಗಾಶ್ರಮಕ್ಕೆ ಭೇಟಿ ನೀಡಿದರು.

'ಬಿಜೆಪಿ ನಾಯಕರಿಗೆ ನೈತಿಕತೆ ಇದೆಯೇ?'

ಸತ್ತವರ ಹೆಸರಲ್ಲಿ ಹಣ ತಿಂದವರಿಗೆ ರಾಜೀನಾಮೆ ಕೇಳುವ ಹಕ್ಕಿಲ್ಲ: ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಕೋವಿಡ್ ವೇಳೆ ಸತ್ತವರ ಹೆಸರಲ್ಲಿ ₹ 40 ಸಾವಿರ ಕೋಟಿಯಷ್ಟು ಭ್ರಷ್ಟಾಚಾರ ಮಾಡಿರುವ ಬಿಜೆಪಿಯವರಿಗೆ ಚೆಕ್ ಬೌನ್ಸ್ ಪ್ರಕರಣದ ನೆಪದಲ್ಲಿ ನನ್ನ ರಾಜೀನಾಮೆ ಕೇಳುವ ನೈತಿಕತೆ ಇದೆಯೇ' ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಪ್ರಶ್ನಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋವಿಡ್ ಸಂದರ್ಭದಲ್ಲಿನ ಭ್ರಷ್ಟಾಚಾರದ ಬಗ್ಗೆ ಸ್ವತಃ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪ ಮಾಡಿದ್ದಾರೆ. ಇದರಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಕುಟುಂಬದ ಹೆಸರು ಕೇಳಿ ಬಂದಿದೆ. ಹಾಗಿದ್ದರೂ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ನನ್ನ ರಾಜೀನಾಮೆ ಕೇಳುವುದು ಹಾಸ್ಯಾಸ್ಪದ' ಎಂದು ಹೇಳಿದರು.



ಮಧು ಬಂಗಾರಪ್ಪ

'ಚೆಕ್ ಮೂಲಕ ಲಂಚ ಪಡೆದು, ಸಹಿ ಮಾಡಿ ಅಪ್ಪನನ್ನು ಜೈಲಿಗೆ ಕಳುಹಿಸುವ ಕೆಲಸವನ್ನು ನಾನು ಮಾಡಿಲ್ಲ' ಎಂದು ಯಾರ ಹೆಸರು ಹೇಳದೇ ಕಿಡಿಕಾರಿದ ಮಧು ಬಂಗಾರಪ್ಪ, 'ದಮ್ಮು, ತಾಕತ್ತು ಇದ್ದರೆ ಯತ್ನಾಳ ಅವರ ಆರೋಪಗಳಿಗೆ ವಿಜಯೇಂದ್ರ ಉತ್ತರಿಸಲಿ' ಎಂದು ಒತ್ತಾಯಿಸಿದರು.

'ಚೆಕ್ ಬೌನ್ಸ್ ವಿಚಾರ ಖಾಸಗಿ ಸಂಗತಿ. ಅಪ್ಪ (ಬಂಗಾರಪ್ಪ) ಬದುಕಿದ್ದಾಗಲೇ ಈ ವಹಿವಾಟು ನಡೆದಿತ್ತು. ಈಗ ನ್ಯಾಯಾಲಯದ ಮೂಲಕ ಪರಿಹರಿಸಿಕೊಂಡಿದ್ದೇವೆ' ಎಂದರು.

'ಗ್ರಾಮ ಪಂಚಾಯಿತಿ ಚುನಾವಣೆ ಗೆಲ್ಲಲು ಯೋಗ್ಯತೆ ಇಲ್ಲದ ಎನ್. ರವಿಕುಮಾರ್ ನನ್ನ ರಾಜೀನಾಮೆ ಕೇಳುತ್ತಾರೆ' ಎಂದು ವ್ಯಂಗ್ಯವಾಡಿದ ಮಧು, 'ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಂಗಾರಪ್ಪ ಬಡಾವಣೆ ಹೆಸರಲ್ಲಿ ಭೂ ಹಗರಣ ನಡೆದಿದ್ದು, ಅದರಲ್ಲಿ ಆರ್. ಅಶೋಕ ಅವರ ಪಾತ್ರವಿದೆ ಎಂದು ಹೇಳಲಾಗುತ್ತಿದೆ. ಅವರು ನನ್ನ ವಿರುದ್ಧ ಮಾತಾಡುತ್ತಿದ್ದಾರೆ. ಸಮಯ ಬಂದಾಗ ಅಲ್ಲಿ ನಡೆದಿರುವ ಎಲ್ಲ ಅವ್ಯವಹಾರಗಳ ಸಂಗತಿಯನ್ನು ಜನರ ಮುಂದಿಡಲಾಗುವುದು' ಎಂದು ಹೇಳಿದರು.

'ಮಧು ಬಂಗಾರಪ್ಪ ಪ್ರಕರಣದಿಂದ ಜನರ ಗಮನ ಬೇರೆಡೆ ಸೆಳೆಯಲು ನನ್ನ ತಮ್ಮನ ಮೇಲೆ ಕೇಸು ದಾಖಲಿಸಲಾಗಿದೆ' ಎಂದು ಸಂಸದ ಪ್ರತಾಪಸಿಂಹ ಮಂಗಳವಾರ ಟ್ವೀಟ್ ಮಾಡಿದ್ದಾರೆ. ಪ್ರತಾಪಸಿಂಹ ಅವರ ತಮ್ಮ ಮರಗಳ್ಳ. ಅವನೊಂದಿಗೆ ನನ್ನ ಹೋಲಿಕೆ ತಮಾಷೆಯ ಸಂಗತಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಆಯನೂರು ಮಂಜುನಾಥ್, ವಿಧಾನ ಪರಿಷತ್ ಮಾಜಿ ಸದಸ್ಯ ಆರ್.ಪ್ರಸನ್ನಕುಮಾರ್, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಸ್. ಸುಂದರೇಶ, ಉಪಾಧ್ಯಕ್ಷ ಎಸ್.ಪಿ.ದಿನೇಶ್, ಕಾಂಗ್ರೆಸ್ ಪ್ರಚಾರ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷ ಎನ್.ರಮೇಶ್, ಮಾಜಿ ಮೇಯರ್ ಮರಿಯಪ್ಪ, ವಿಜಯಕುಮಾರ್ ಉಪಸ್ಥಿತರಿದ್ದರು.

ಶಿಕ್ಷೆ ಅಮಾನತು

ಬೆಂಗಳೂರು: ಚೆಕ್ ಬೌನ್ಸ್ ಪ್ರಕರಣದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯ ಆದೇಶವನ್ನು 56ನೇ ಸೆಷನ್ಸ್ ನ್ಯಾಯಾಲಯ ಅಮಾನತಿನಲ್ಲಿ ಇರಿಸಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಧು ಬಂಗಾರಪ್ಪ ಸಲ್ಲಿಸಿದ್ದ ಮೇಲ್ಮನವಿಯನ್ನು ಬೆಂಗಳೂರು ನಗರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ವಿಚಾರಣೆ ನಡೆಸಿತು.

'ದೂರುದಾರರಿಗೆ ಪಾವತಿಸಬೇಕಾದ ಮೊತ್ತದಲ್ಲಿ ಶೇ 20ರಷ್ಟು ಮೊತ್ತವನ್ನು ಠೇವಣಿಯಾಗಿ ಇರಿಸಬೇಕು. ₹50 ಸಾವಿರ ಬಾಂಡ್, ಒಬ್ಬರ ಭದ್ರತೆ ಒದಗಿಸಬೇಕು. ಒಂದು ತಿಂಗಳ ಒಳಗೆ ಈ ಷರತ್ತು ಪಾಲಿಸಬೇಕು' ಎಂದು ಆದೇಶದಲ್ಲಿ ವಿವರಿಸಲಾಗಿದೆ.

'2 ಲಕ್ಷ ಎಕರೆ ಅರಣ್ಯ ಒತ್ತುವರಿ ತೆರವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಸುಮಾರು ಎರಡು ಲಕ್ಷ ಎಕರೆ ಅರಣ್ಯ ಭೂಮಿ ಒತ್ತುವರಿಯಾಗಿದ್ದು, ದೊಡ್ಡ ಪ್ರಮಾಣದ ಒತ್ತುವರಿಗಳನ್ನು ಮೊದಲು ತೆರವುಗೊಳಿಸುವಂತೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಇಲಾಖೆಯ ಅಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಅರಣ್ಯ ಸಂರಕ್ಷಣಾ ಕಾಯ್ದೆ ಜಾರಿಗೂ ಮೊದಲು ಅರಣ್ಯ ಭೂಮಿ ಒತ್ತುವರಿ ಮಾಡಿ ನಿಗದಿತ ಕಾಲಮಿತಿಯೊಳಗೆ ಅರ್ಜಿ ಸಲ್ಲಿಸಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕಿದೆ' ಎಂದರು.

'ಸುಮಾರು 13,155 ಪ್ರಕರಣಗಳಲ್ಲಿ 31,864 ಎಕರೆ ಭೂಮಿ ಇದ್ದು, ಈ ಪೈಕಿ ಸುಮಾರು 7 ಸಾವಿರ ಪ್ರಕರಣಗಳಲ್ಲಿ ಹಕ್ಕುಪತ್ರ ನೀಡಲು ಕ್ರಮ ವಹಿಸಲಾಗುತ್ತಿದೆ. ಬಾಕಿ ಇರುವ ಪ್ರಕರಣ ಗಳನ್ನು ಆದಷ್ಟು ಶೀಘ್ರ ವಿಲೇವಾರಿ ಮಾಡುವಂತೆ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

'ಬೆಂಗಳೂರು ನಗರದ ಸುತ್ತಮುತ್ತ ಮತ್ತು ಪಟ್ಟಣ, ನಗರ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ಬೆಲೆಬಾಳುವ ಅರಣ್ಯ ಭೂಮಿಯ ಒತ್ತುವರಿ ತೆರವಿಗೆ ಮೊದಲ ಆದ್ಯತೆ ನೀಡಬೇಕಿದೆ. ಕೊತ್ತನೂರಿನಲ್ಲಿ ₹ 400 ಕೋಟಿ ಮೌಲ್ಯದ ಅರಣ್ಯ ಭೂಮಿಯನ್ನು ಕಂದಾಯ ಭೂಮಿ ಎಂದು ಪರಿವರ್ತಿಸಿದ್ದ ಉಪ ವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ' ಎಂದರು.

'ಅರಣ್ಯ ಸಂರಕ್ಷಣಾ ಕಾಯ್ದೆ ಜಾರಿಗೂ ಮೊದಲು ಮೂರು ಎಕರೆಗಿಂತ ಕಡಿಮೆ ಭೂಮಿ ಒತ್ತುವರಿ ಮಾಡಿ ಮನೆ ಕಟ್ಟಿರುವ ಮತ್ತು ಉಳುಮೆ ಮಾಡುತ್ತಿರುವ ಬಡ ರೈತರಿಗೆ ಕಿರುಕುಳ ನೀಡದಂತೆ ಸೂಚಿಸಿದ್ದೇನೆ. ಅರಣ್ಯ ಒತ್ತುವರಿ ಕುರಿತಂತೆ ವಲಯವಾರು, ವಿಭಾಗವಾರು, ವೃತ್ತವಾರು ಮಾಹಿತಿ ಕೈಸೇರಿದ ಬಳಿಕ ಕ್ರಮ ವಹಿಸಲಾಗುವುದು' ಎಂದು ಖಂಡ್ರೆ ತಿಳಿಸಿದರು.

ಗ್ಯಾರಂಟಿ ಪ್ರಶ್ನಿಸಿದ್ದ ಅರ್ಜಿ: ವಿಚಾರಣೆ 12 ವಾರ ಮುಂದಕ್ಕೆ

ಬೆಂಗಳೂರು: 'ರಾಜಕೀಯ ಪಕ್ಷಗಳು ಚುನಾವಣೆ ಸಮಯದಲ್ಲಿ ಮತದಾರರಿಗೆ ನೀಡುತ್ತಿರುವ ಉಚಿತ ಗ್ಯಾರಂಟಿ ಆಮಿಷಗಳಿಗೆ ನಿರ್ಬಂಧ ವಿಧಿಸಬೇಕು' ಎಂದು ಕೋರಲಾದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ 12 ವಾರಗಳ ಕಾಲ ಮುಂದೂಡಿದೆ.

ಈ ಸಂಬಂಧ ಬ್ರಿಗೇಡಿಯರ್ ರವಿ ಮುನಿಸ್ವಾಮಿ ಹಾಗೂ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ನ್ಯಾಯಪೀಠವು, 'ಈ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮದೇ ಆದ ಅಭಿಪ್ರಾಯ ಮತ್ತು ಮಿತಿ ಇರಬಹುದು. ಆದರೆ, ಸದ್ಯ ಇಂತಹುದೇ ಪ್ರಕರಣವು ಸುಪ್ರೀಂ ಕೋರ್ಟ್ ಮುಂದಿದೆ. ನಾವು ಈಗ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಲು ಆದೇಶಿಸುವುದಿಲ್ಲ. ಸುಪ್ರೀಂ-ಕೋರ್ಟ್‌ನಲ್ಲಿ ಏನಾಗುತ್ತದೋ ನೋಡೋಣ. ಅಲ್ಲಿಯವರೆಗೆ ಕಾಯಿರಿ' ಎಂದು ಮೌಖಿಕವಾಗಿ ತಿಳಿಸಿ ವಿಚಾರಣೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ರಾಜಕೀಯ ಪಕ್ಷಗಳು ಹೇಗಾದರೂ ಮಾಡಿ ಅಧಿಕಾರ ಹಿಡಿಯಲೇಬೇಕೆಂಬ ಉಮೇದಿನಲ್ಲಿ ಮತದಾರರಿಗೆ ಆಮಿಷ ಒಡ್ಡುತ್ತಿವೆ. ಪ್ರಲೋಭನೆವೊಡ್ಡಿ ಮತ ಯಾಚಿಸುವುದು ಸಂವಿಧಾನ ಬಾಹಿರ ಹಾಗೂ ಜನಪ್ರತಿನಿಧಿಗಳ ಕಾಯ್ದೆಯ ಸ್ಪಷ್ಟ ಉಲ್ಲಂಘನೆ. ಈ ನಿಟ್ಟಿನಲ್ಲಿ ಸೂಕ್ತ ಮಾರ್ಗಸೂಚಿ ರೂಪಿಸಲು ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಡಿಸಿಸಿ ಬ್ಯಾಂಕ್: 8 ವಾರಗಳ ಗಡುವು

ಬೆಂಗಳೂರು: 'ಮೈಸೂರು, ಚಾಮರಾಜನಗರ ಮತ್ತು ದಾವಣಗೆರೆ ಜಿಲ್ಲಾ ಸಹಕಾರ ಬ್ಯಾಂಕಿನ ಆಡಳಿತ ಮಂಡಳಿಗೆ ಎಂಟು ವಾರಗಳಲ್ಲಿ ಚುನಾವಣೆ ನಡೆಸಿ' ಎಂದು ಹೈಕೋರ್ಟ್, ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಆದೇಶಿಸಿದೆ.

ಈ ಸಂಬಂಧ ತೀರ್ಪನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠ ಪ್ರಕಟಿಸಿದ್ದು, ಡಿಸಿಸಿ ಬ್ಯಾಂಕುಗಳ ಸಲ್ಲಿಸಿದ್ದ ಮೇಲ್ಮನವಿ ಮಾನ್ಯ ಮಾಡಿದೆ.

'ಸಂಬಂಧಿತ ಎಲ್ಲ ಮಧ್ಯಂತರ ಆದೇಶಗಳೂ ವಿಸರ್ಜನೆಗೊಂಡಿವೆ. ಸಂಬಂಧಿಸಿದ ಪ್ರಾಧಿಕಾರಗಳು ಕೂಡಲೇ ಕಾನೂನು ಕ್ರಮಕ್ಕೆ ಮುಂದಾಗಬೇಕು. ಆಡಳಿತಾಧಿಕಾರಿಗಳು ತಕ್ಷಣವೇ ಕಾರ್ಯಭಾರ ವಹಿಸಿಕೊಳ್ಳಬೇಕು' ಎಂದು ನಿರ್ದೇಶಿಸಿದೆ.

'120 ದಿನಗಳಲ್ಲಿ ಚುನಾವಣೆ ನಡೆಸಲು ಆದೇಶಿಸಿರುವ ಏಕಸದಸ್ಯ ಪೀಠದ ಆದೇಶವನ್ನು ಮಾರ್ಪಾಡು ಮಾಡಬೇಕು' ಎಂದು ಕೋರಿ ಡಿಸಿಸಿ ಬ್ಯಾಂಕ್‌ಗಳು ಮೇಲ್ಮನವಿ ಸಲ್ಲಿಸಿದ್ದವು.

ಜನವರಿ ತಿಂಗಳ ವಿದ್ಯುತ್ ಬಿಲ್ ತುಸು ಹಗುರ

ಬೆಂಗಳೂರು: ನವೆಂಬರ್ ತಿಂಗಳಲ್ಲಿ ಇಂಧನ ಮತ್ತು ವಿದ್ಯುತ್ ಖರೀದಿ ಹೊಂದಾಣಿಕೆ ವೆಚ್ಚ (ಎಫ್‌ಪಿಪಿಸಿಎ) ಇಳಿಕೆ ಆಗಿರುವ ಕಾರಣ ರಾಜ್ಯದ ಎಲ್ಲ ಎಸ್ಕಾಂಗಳು(ವಿದ್ಯುತ್ ಸರಬರಾಜು ಕಂಪನಿ) ಗ್ರಾಹಕರಿಗೆ ಜನವರಿ ತಿಂಗಳಲ್ಲಿ ನೀಡುವ ವಿದ್ಯುತ್ ಬಿಲ್‌ನಲ್ಲಿ ಪ್ರತಿ ಯೂನಿಟ್‌ಗೆ 3 ಪೈಸೆಯಿಂದ 51 ಪೈಸೆವರೆಗೂ ಕಡಿತಗೊಳಿಸಲು ನಿರ್ಧರಿಸಿವೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ(ಬೆಸ್ಕಾಂ) ಪ್ರತಿ ಯೂನಿಟ್‌ಗೆ 37 ಪೈಸೆಯನ್ನು ಕಡಿತಗೊಳಿಸುವುದಾಗಿ ತಿಳಿಸಿದೆ. ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ (ಜೆಸ್ಕಾಂ), ಪ್ರತಿ ಯೂನಿಟ್‌ಗೆ 51 ಪೈಸೆ, ಹೆಸ್ಕಾಂ ವ್ಯಾಪ್ತಿಯಲ್ಲಿ 3 ಪೈಸೆ, ಸೆಸ್ಕ್ 39 ಪೈಸೆ, ಮೆಸ್ಕಾಂ ವ್ಯಾಪ್ತಿಯಲ್ಲಿ 31 ಪೈಸೆ ಕಡಿತಗೊಳಿಸುವುದಾಗಿ ಆಯಾ ಕಂಪನಿಗಳು ತಿಳಿಸಿವೆ.

ಡಿಸೆಂಬರ್ ತಿಂಗಳಲ್ಲಿ ಗ್ರಾಹಕರು ಬಳಸಿದ ಗೃಹ ಬಳಕೆ, ವಾಣಿಜ್ಯ ಸೇರಿದಂತೆ ಎಲ್ಲ ವಿಧದ ವಿದ್ಯುತ್ ಶುಲ್ಕದ ಮೇಲೆ ಪ್ರತಿ ಯೂನಿಟ್‌ಗೆ ಮೇಲೆ ತಿಳಿಸಿರುವಷ್ಟು ಹಣ ವನ್ನು ಆಯಾ ಕಂಪನಿಗಳು ಕಡಿತಗೊಳಿಸುತ್ತವೆ. 'ಗೃಹ ಜ್ಯೋತಿ' ಯೋಜನೆಯಡಿ ಉಚಿತವಾಗಿ 200 ಯೂನಿಟ್ ಬಳಸುವ ಗ್ರಾಹಕರಿಗೆ ಇದರಿಂದ ಪ್ರಯೋಜನವಾಗುವುದಿಲ್ಲ. 200 ಯೂನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಸುವ ಗೃಹ ಹಾಗೂ ವಾಣಿಜ್ಯ ಬಳಕೆದಾರರಿಗೆ ಸ್ವಲ್ಪ ಅನುಕೂಲವಾಗಲಿದೆ.

ಜಿಲ್ಲಾಸ್ಪತ್ರೆಗಳಲ್ಲಿ 50 ಹಾಸಿಗೆ ಮೀಸಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರದಿಂದ ರಾಜ್ಯಕ್ಕೆ 30 ಸಾವಿರ ಕೋವಿಡ್ ಲಸಿಕೆ ಬಂದಿದೆ. 60 ವರ್ಷ ದಾಟಿದವರು, ದೀರ್ಘ ಅವಧಿಯಿಂದ ರೋಗಗಳಿಂದ ಬಳಲುತ್ತಿರುವವರು ಕೋವಿಡ್ ಲಸಿಕೆ ತೆಗೆದುಕೊಳ್ಳಬೇಕು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಸಲಹೆ ನೀಡಿದರು.

ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಮತ್ತು ಇಲಾಖೆಯ ವ್ಯಾಪ್ತಿಯ ಆಸ್ಪತ್ರೆಗಳ ಮುಖ್ಯಸ್ಥರ ಜೊತೆ ಮಂಗಳವಾರ ಸಭೆ ನಡೆಸಿದ ಅವರು ಬಳಿಕ, ಮಾತನಾಡಿ 'ಜಿಲ್ಲಾಸ್ಪತ್ರೆಗಳಲ್ಲಿ ಬುಧವಾರದಿಂದ ಕೋವಿಡ್ ಲಸಿಕೆ ಲಭ್ಯ ಇರಲಿದೆ' ಎಂದರು.

'ಕೋವಿಡ್‌ನ ಜೆಎನ್-1 ಸೋಂಕು ಮುಂದೆ ಇನ್ನಷ್ಟು ಹರಡಬಹುದು. ಆರೋಗ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇಲ್ಲ ಎಂದು ತಜ್ಞರು ಹೇಳಿದ್ದಾರೆ. ಆದರೂ ಮುನ್ನೆಚ್ಚರಿಕೆ ಕುರಿತು ಜಾಗೃತಿ ಮೂಡಿಸಲು ಸಲಹೆ ಮಾಡಿದ್ದಾರೆ' ಎಂದರು.

'ಪ್ರತಿ ಜಿಲ್ಲಾ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳಿಗೆ 50 ಹಾಸಿಗೆಗಳನ್ನು ಮೀಸಲಿಡಲು ಸೂಚಿಸಲಾಗಿದೆ. ವೈದ್ಯಕೀಯ ಕಾಲೇಜುಗಳಲ್ಲಿ 18,141, ಸರ್ಕಾರಿ ಆಸ್ಪತ್ರೆಗಳಲ್ಲಿ 10 ಸಾವಿರ, ಇತರ ಆಸ್ಪತ್ರೆಗಳಲ್ಲಿ 11,500 ಹಾಸಿಗೆಗಳು ಲಭ್ಯ ಇವೆ. ರಾಜ್ಯದಲ್ಲಿ ಕೋವಿಡ್ ಲಕ್ಷಣಗಳಿದ್ದ 10 ಮಂದಿ ಇತ್ತೀಚೆಗೆ ಮೃತಪಟ್ಟಿದ್ದು, ಈ ಪೈಕಿ 9 ಮಂದಿ ಬೇರೆ ಬೇರೆ ಕಾಯಿಲೆಗಳಿಂದ ಬಳಲುತ್ತಿದ್ದರು. ಮಂಗಳೂರಿನ ವ್ಯಕ್ತಿ ಯೊಬ್ಬರು ಮದ್ಯ ವ್ಯಸನಿಯೂ ಆಗಿದ್ದರು' ಎಂದು ತಿಳಿಸಿದರು.

'99 ವೈದ್ಯ ಕಾಲೇಜು, 10 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ದೇಶಕರ ಜೊತೆ ಚರ್ಚಿಸಲಾಗಿದೆ. ಎಲ್ಲ ಸರ್ಕಾರಿ ಕಾಲೇಜುಗಳಲ್ಲೂ ಪ್ರತ್ಯೇಕವಾದ ಆಕ್ಸಿಜನ್ ಬೆಡ್ ಮತ್ತು ಐಸಿಯು ವ್ಯವಸ್ಥೆ ಮಾಡಲಾಗಿದೆ' ಎಂದು ತಿಳಿಸಿದರು.

148 ಪ್ರಕರಣ ಪತ್ತೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 148 ಕೋವಿಡ್ ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ. ಒಬ್ಬರು ಮೃತ ಪಟ್ಟಿದ್ದಾರೆ. ಒಟ್ಟು 1,144 ಸಕ್ರಿಯ ಪ್ರಕರಣಗಳಿವೆ.

24 ಗಂಟೆಗಳ ಅವಧಿಯಲ್ಲಿ 7,305 ಪರೀಕ್ಷೆ ನಡೆಸಲಾಗಿತ್ತು. ಶೇ 2.02ರಷ್ಟು ಮಂದಿಯಲ್ಲಿ ಸೋಂಕು ಇರುವುದು ದೃಢಪಟ್ಟಿದೆ. 1,144 ಸಕ್ರಿಯ ಪ್ರಕರಣಗಳಲ್ಲಿ 1,089 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ.

55 ಮಂದಿ ಆಸ್ಪತ್ರೆಗೆ ದಾಖಲಾಗಿದ್ದು, ಅದರಲ್ಲಿ 23 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಂಕಿತರಲ್ಲಿ 248 ಮಂದಿ ಚೇತರಿಸಿಕೊಂಡಿದ್ದಾರೆ.

ನಿಧನ ವಾರ್ತೆ


ಜಯ ನರಸಿಂಹರಾಜು



ಬೆಂಗಳೂರು: ನಿವೃತ್ತ ಐಎಫ್‌ಎಸ್ ಅಧಿಕಾರಿ, ಬಸವೇಶ್ವರ ನಗರ ಹೌಸಿಂಗ್ ಬೋರ್ಡ್ ನಿವಾಸಿ ಜಯನರಸಿಂಹ ರಾಜು (63) ಅನಾರೋಗ್ಯದಿಂದ ಮಂಗಳವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ತೀರ್ಥಹಳ್ಳಿ ತಾಲ್ಲೂಕಿನ ತೂದೂರಿನವರಾದ ಅವರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕರ್ತವ್ಯಕ್ಕೆ ಸೇರಿ, ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ (ಎಪಿಸಿಸಿಎಫ್) ನಿವೃತ್ತರಾಗಿದ್ದರು. ಕೊಡಗು, ಚಿತ್ರದುರ್ಗ, ಬೆಂಗಳೂರು ಸಹಿತ ವಿವಿಧೆಡೆ ಕಾರ್ಯ ನಿರ್ವಹಿಸಿದ್ದರು.

ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಪುತ್ರಿಯರು ಅಮೆರಿಕದಿಂದ ಬಂದ ನಂತರ ಗುರುವಾರ ಬೆಳಿಗ್ಗೆ ಬೆಂಗಳೂರಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.



ಚಾರಣದ ಹಾದಿ ಸಲೀಸಾಗಬೇಕೆ?

ಚಾರಣ ಸುರಕ್ಷಿತವಾಗಿರಬೇಕು ಎಂದರೆ ಯಾವ ತಾಂತ್ರಿಕ ಸವಲತ್ತುಗಳನ್ನು ಬಳಸಬಾರದು ಮತ್ತು ಯಾವುದನ್ನು ಬಳಸಬೇಕು ಎಂಬುದೂ ಈಗ ಮುಖ್ಯವಾಗುತ್ತಿದೆ. ಅಂತಹ ತಾಂತ್ರಿಕ ಸವಲತ್ತುಗಳಲ್ಲಿ ಗೂಗಲ್ ಮ್ಯಾಪ್ ಮತ್ತು ಲೊಕೇಷನ್ ಸರ್ವಿಸ್ ಪ್ರಮುಖವಾದವು.

ಜಯಸಿಂಹ ಆರ್.

ಇದು ಚಾರಣದ ಋತು. ಜನಪ್ರಿಯ ಚಾರಣತಾಣಗಳಿಗೆ ಹೋಗುವುದು ಒಂದೆಡೆ ಮತ್ತು ಜನಪ್ರಿಯವಲ್ಲದ, ಆದರೆ ರೋಚಕವಾದ ತಾಣಗಳಿಗೆ ಹೋಗುವುದು ಇನ್ನೊಂದೆಡೆ. ಮೊಬೈಲ್ ಫೋಟೊಗ್ರಫಿ, ರೀಲ್ಸ್, ಸ್ನ್ಯಾಪ್ಸ್ ಮತ್ತು ವ್ಲಾಗ್ಗಿಂಗ್‌ನ ಈಗಿನ ಯುಗದಲ್ಲಿ ಚಾರಣದ ಜನಪ್ರಿಯತೆಯೂ ಹೆಚ್ಚುತ್ತಿದೆ.

ಚಾರಣಕ್ಕೆ ಹೋಗುವುದೆಂದು ಬೆಳಿಗ್ಗೆ ನಿರ್ಧಾರ ಮಾಡುವುದು, ತಕ್ಷಣವೇ ಹೊರಟುಬಿಡುವುದು; ಸಂಜೆ ವೇಳೆಗೆ ವಾಪಸ್ ಬರುವುದು... ಹೀಗೆ ನಗರದ ಸುತ್ತಮುತ್ತ ಇರುವ ಬೆಟ್ಟಗುಡ್ಡಗಳಿಗೆ ಒಂದೇ ದಿನದಲ್ಲಿ ಚಾರಣಕ್ಕೆ ಹೋಗಿಬರುವುದು ಈಗಿನ ಟ್ರೆಂಡ್. ಹೊಸ ತಂತ್ರಜ್ಞಾನ ಚಾರಣದ ಹಾದಿಯನ್ನು ಸುಗಮಗೊಳಿಸಿದೆ. ಆದರೆ ಅದರ ಅರಿವಿರಬೇಕಷ್ಟೆ.

ಕಳೆದ ವಾರವಷ್ಟೇ ಬೆಂಗಳೂರಿನ ಯುವಕನೊಬ್ಬ ಸಾವನದುರ್ಗ ಬೆಟ್ಟದ ಚಾರಣದ ವೇಳೆ ಕಾಣೆಯಾಗಿದ್ದ. ಆತನ ಹುಡುಕಾಟಕ್ಕೆ ಪೊಲೀಸರು, ಅರಣ್ಯ ಇಲಾಖೆ ಸಿಬ್ಬಂದಿ, ವಿಪತ್ತು ನಿರ್ವಹಣಾ ಪಡೆಯ ಸಿಬ್ಬಂದಿ ಮತ್ತು ಸ್ಥಳೀಯರು ಹಗಲೂ ರಾತ್ರಿ ಶ್ರಮಪಟ್ಟಿದ್ದರು. ಆದರೆ ಆತ ಪತ್ತೆಯಾಗಿದ್ದು ಮಾತ್ರ ಶವವಾಗಿ. ಅದೂ ಐದು ದಿನಗಳ ನಂತರ. ಡ್ರೋನ್, ಥರ್ಮಲ್ ಡ್ರೋನ್ ಮೂಲಕ ಹುಡುಕಾಟ ನಡೆಸಿದರೂ ಆತನ ಸುಳಿವು ದೊರಕಿರಲಿಲ್ಲ. ಆತನ ಐಫೋನ್ ಮತ್ತು ವಾಚ್‌ನ ಕಡೆಯ ಲೊಕೇಷನ್ ವಿವರ ಬಳಸಿಕೊಂಡು ಹುಡುಕಾಟ ನಡೆಸುವ ಯತ್ನವೂ ಫಲ ನೀಡಲಿಲ್ಲ. ಆತನ ಫೋನ್‌ನ ಕಡೆಯ ಲೊಕೇಷನ್ ವಿವರ ದೊರಕಿದ್ದಿದ್ದರೆ, ಆತನನ್ನು ಇನ್ನಷ್ಟು ಬೇಗ ಪತ್ತೆ ಮಾಡಬಹುದಿತ್ತು. ಆತ ಗಾಯಗೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದಿದ್ದರೆ ಜೀವಉಳಿಸುವ ಯತ್ನವನ್ನೂ ನಡೆಸಬಹುದಿತ್ತು. ಚಾರಣಕ್ಕೂ ತಂತ್ರಜ್ಞಾನಕ್ಕೂ ಸಂಬಂಧ ಇರುವುದು ಇಲ್ಲಿಯೇ.

ಚಾರಣವು ಸಣ್ಣದಿರಲಿ ಅಥವಾ ದೊಡ್ಡದಿರಲಿ ಅದಕ್ಕೆ ಸಿದ್ಧತೆ ಬೇಕೇಬೇಕಾಗುತ್ತದೆ. ಆದರೆ ದಿಢೀರ್ ಚಾರಣದ ವೇಳೆ ಅಂತಹ ಯಾವುದೇ ಸಿದ್ಧತೆಗಳು ಇರುವುದಿಲ್ಲ. ಹೀಗೆ ದಿಢೀರ್ ಎಂದು ಚಾರಣಕ್ಕೆ ಹೊರಡುವವರಲ್ಲಿ ಬಹುತೇಕ ಮಂದಿ ತಮ್ಮ ಮಾರ್ಗದರ್ಶಕನಾಗಿ ಬಳಸಿಕೊಳ್ಳುವುದು ಗೂಗಲ್ ಮ್ಯಾಪ್ ಅನ್ನು. ಇದೇ ದೊಡ್ಡ ಹಿನ್ನಡೆ. ಯಾವ ಅನುಭವಿ ಚಾರಣಿಗನೂ ಗೂಗಲ್ ಮ್ಯಾಪ್ ಅನ್ನು ಚಾರಣಕ್ಕೆ ಬಳಸಿಕೊಳ್ಳುವುದಿಲ್ಲ. ಏಕೆಂದರೆ ಗೂಗಲ್ ಮ್ಯಾಪ್ ರಸ್ತೆ ಸಂಚಾರಕ್ಕೆ ಹೇಳಿ ಮಾಡಿಸಿದಂಥ ತಂತ್ರಜ್ಞಾನ. ಅದು ಚಾರಣಕ್ಕೆ ಸೂಕ್ತವಲ್ಲ.

ಐಫೋನ್ ಲೊಕೇಷನ್ ಶೇರಿಂಗ್

ಐಫೋನ್‌ಗಳಲ್ಲೂ ಅತ್ಯಂತ ನಿಖರವಾದ ಲೊಕೇಷನ್ ವಿವರ ದಾಖಲಾಗುತ್ತದೆ. ಅದನ್ನು ನಿಮ್ಮ ಕುಟುಂಬದವರೊಂದಿಗೆ, ಸ್ನೇಹಿತರೊಂದಿಗೆ ಹಂಚಿಕೊಳ್ಳಲು 'ಲೊಕೇಷನ್ ಶೇರಿಂಗ್' ವ್ಯವಸ್ಥೆ ಇದೆ. ಅದನ್ನು ಚಾಲೂ ಇಟ್ಟು, ಯಾರಿಗೆಲ್ಲಾ ನಿಮ್ಮ ಲೊಕೇಷನ್ ವಿವರ ಹಂಚಿಕೊಳ್ಳಬೇಕು ಎಂಬುದನ್ನು ನಮೂದಿಸಿದರೆ ಆಯಿತು. ನಿಮ್ಮ ಇರುವಿಕೆಯ ವಿವರ ಅವರಿಗೆ ರವಾನೆಯಾಗುತ್ತಿರುತ್ತದೆ. ಫೈಂಡ್ ಮೈ ಆ್ಯಪ್‌ನಲ್ಲಿ ಆ ವಿವರಗಳನ್ನು ಬಳಸಿಕೊಂಡು, ಚಾರಣದ ವೇಳೆ ಕಾಣೆಯಾಗಿರುವ ವ್ಯಕ್ತಿಯನ್ನು ಹುಡುಕಬಹುದಾಗಿದೆ.


ದಾರಿತಪ್ಪಿಸುವ ಗೂಗಲ್ ಮ್ಯಾಪ್

ಗೂಗಲ್ ಮ್ಯಾಪ್‌ನಲ್ಲಿ ಯಾವುದೇ ಬೆಟ್ಟ–ಗುಡ್ಡ, ಕಾಡು–ಮೇಡನ್ನು ಸಪಾಟು ನೆಲದಂತೆಯೇ ತೋರಿಸುತ್ತದೆ. ಗೂಗಲ್ ಮ್ಯಾಪ್‌ನಲ್ಲಿ ಟೋಪೊಗ್ರಫಿ ಸವಲತ್ತು ಇದೆಯಾದರೂ, ಅದರ ನಿಖರತೆ ಕಡಿಮೆ. ಅಂದರೆ ಯಾವ ಪ್ರದೇಶ ಎಷ್ಟು ಎತ್ತರವಿದೆ, ಎಷ್ಟು ಕಡಿದಾಗಿದೆ ಎಂಬುದನ್ನು ಅದು ತೋರಿಸುವುದಿಲ್ಲ. ಒಂದೆಡೆ ಕಡಿದಾದ ಏರು ಮತ್ತೊಂದೆಡೆ ಕಡಿದಾದ ಪ್ರಪಾತದ ಮಧ್ಯೆ ಇರುವ ಎರಡು ಅಡಿಯ ಹಾದಿಯನ್ನೂ ಗೂಗಲ್ ಮ್ಯಾಪ್ ರಸ್ತೆಯಂತೆಯೇ ತೋರಿಸುತ್ತದೆ. ಈ ಕಾರಣದಿಂದಲೇ ಗೂಗಲ್ ಮ್ಯಾಪ್ ಬಳಸಿಕೊಂಡು ಚಾರಣದ ಹಾದಿಯನ್ನು ಸಿದ್ಧಪಡಿಸಿಕೊಳ್ಳುವುದು ಅಥವಾ ಹಾದಿಯನ್ನು ಅನುಸರಿಸುವುದು ಅಪಾಯಕಾರಿಯೇ ಹೌದು. ಗೂಗಲ್ ಮ್ಯಾಪ್ ಅನ್ನು ಹೀಗೆ ಬಳಸುವುದರಿಂದ, ಕಡಿದಾದ ಚಾರಣಕ್ಕೆ ನೀವು ಮಾಡಿಕೊಳ್ಳಬೇಕಿದ್ದ ಮಾನಸಿಕ ಮತ್ತು ದೈಹಿಕ ಸಿದ್ಧತೆಯನ್ನು ಅದು ತಪ್ಪಿಸುತ್ತದೆ.

ಲೊಕೇಷನ್ ಸರ್ವೀಸ್ ಉಪಯೋಗಿ

ನಿಜಕ್ಕೂ ಚಾರಣದ ವೇಳೆ ಅನುಕೂಲಕ್ಕೆ ಬರುವುದು ಗೂಗಲ್ ಲೊಕೇಷನ್ ಸರ್ವಿಸ್. ಬಹುತೇಕ ಆ್ಯಂಡ್ರಾಯ್ಡ್ ಫೋನ್‌ಗಳಲ್ಲಿ ಲೊಕೇಷನ್ ವ್ಯವಸ್ಥೆ ಇರುತ್ತದೆ. ತುರ್ತು ಸಂದರ್ಭದಲ್ಲಿ ನಮ್ಮ ಲೊಕೇಷನ್ ಅನ್ನು ರಕ್ಷಣಾ ಸಿಬ್ಬಂದಿಗೆ ಕಳುಹಿಸುವ ಸವಲತ್ತೂ ಆ ವ್ಯವಸ್ಥೆಯಲ್ಲಿ ಇರುತ್ತದೆ. ಅದನ್ನು ಬಳಸಿಕೊಳ್ಳಬೇಕಷ್ಟೆ. ಚಾರಣದ ಹಾದಿಯಲ್ಲಿ ನೀವು ಕಳೆದುಹೋದಿರಿ ಎಂದಿಟ್ಟುಕೊಳ್ಳಿ. ನೀವು ಎಲ್ಲಿದ್ದೀರಿ?, ಎಲ್ಲಿಗೆ ಹೋಗಬೇಕು? ಎಂಬುದು ನಿಮಗೆ ತಿಳಿಯದ ಸ್ಥಿತಿಯಲ್ಲಿದ್ದೀರಿ. ಆದರೆ, ನೀವು ಇರುವ ಜಾಗದ ನಿಖರ ವಿವರ ರಕ್ಷಣಾ ಸಿಬ್ಬಂದಿಗೆ ದೊರೆತರೆ, ಅವರು ನಿಮ್ಮನ್ನು ಹುಡುಕುವುದು ಸುಲಭವಾಗುತ್ತದೆ. ಇದಕ್ಕಾಗಿ ನೀವು ಹೊಸ ಸಾಧನಗಳನ್ನು ಖರೀದಿಸುವ, ಹೊಸ ಆ್ಯಪ್‌ಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಏನೂ ಇಲ್ಲ. ಬದಲಿಗೆ ನಿಮ್ಮ ಆ್ಯಂಡ್ರಾಯ್ಡ್ ಫೋನ್‌ಗಳಲ್ಲಿ ಇರುವ ಸೆಟ್ಟಿಂಗ್‌ನಲ್ಲಿ ಸ್ವಲ್ಪ ಬದಲಾವಣೆ ಮಾಡಿದರಾಯಿತು.





ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಸೆಟ್ಟಿಂಗ್‌ಗೆ ಹೋಗಬೇಕು. ಅದರಲ್ಲಿ 'ಲೊಕೇಷನ್' ಎಂಬ ಉಪವಿಭಾಗ ಇದೆ. ಅದನ್ನು ಒತ್ತಿದರೆ ಲೊಕೇಷನ್ ಸೆಟ್ಟಿಂಗ್‌ಗಳಿಗೆ ಕರೆದೊಯ್ಯುತ್ತದೆ. ಅದರಲ್ಲಿ 'Emergency Location Service–ELS' ಎಂಬ ಇನ್ನೊಂದು ಸೆಟ್ಟಿಂಗ್ ಸಿಗುತ್ತದೆ. ಅದನ್ನು ಚಾಲ್ತಿ ಮಾಡಬೇಕು. ಈ ವ್ಯವಸ್ಥೆ ಚಾಲ್ತಿಯಲ್ಲಿದ್ದರೆ, ನೀವು ತುರ್ತು ರಕ್ಷಣಾ ಸೇವೆಗೆ (ಸಂಪರ್ಕ ಸಂಖ್ಯೆ: 112) ಕರೆ ಮಾಡಿದರೆ ಅಥವಾ ಸಂದೇಶ ಕಳುಹಿಸಿದರೆ ಅದು ನಿಮ್ಮ ಲೊಕೇಷನ್‌ನ ಅತ್ಯಂತ ನಿಖರವಾದ ವಿವರವನ್ನೂ ರಕ್ಷಣಾ ಸಿಬ್ಬಂದಿಗೆ ಕಳುಹಿಸುತ್ತದೆ.

ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ (ಜಿಪಿಎಸ್) ಲೊಕೇಷನ್‌ಗೂ, ಇಎಲ್‌ಎಸ್‌ಗೂ ಬಹಳ ವ್ಯತ್ಯಾಸವಿದೆ. ಜಿಪಿಎಸ್ ಲೊಕೇಷನ್‌ನ ನಿಖರತೆ ಕಡಿಮೆ. ಆದರೆ ಇಎಲ್‌ಎಸ್ ವ್ಯವಸ್ಥೆಯು ಜಿಪಿಎಸ್ ಲೊಕೇಷನ್, ಫೋನ್ ಇರುವ ಪ್ರದೇಶದ ಎತ್ತರ, ಫೋನ್ ನೆಟ್‌ವರ್ಕ್ ಗೋಪುರದಿಂದ ಎಷ್ಟು ದೂರವಿದೆ, ಕಡೆಯ ಕರೆ, ಕಡೆಯ ಸಂದೇಶ ಮತ್ತು ಕಡೆಯ ಬಾರಿ ಇಂಟರ್ನೆಟ್ ಸಂಪರ್ಕ ಪಡೆದುಕೊಂಡಿದ್ದು ಎಲ್ಲಿ ಎಂಬ ವಿವರಗಳನ್ನು ಪಡೆದುಕೊಳ್ಳುತ್ತದೆ. ಈ ಮೂಲಕ ಫೋನ್ ಮತ್ತು ಆ ವ್ಯಕ್ತಿ ಇರುವ ಜಾಗದ ಅತ್ಯಂತ ನಿಖರವಾದ ಲೊಕೇಷನ್‌ನ ವಿವರವನ್ನು ಸಿದ್ಧಪಡಿಸುತ್ತದೆ. ಇಷ್ಟೆಲ್ಲಾ ನಿಖರವಾದ ವಿವರ ದೊರೆಯುವಂತಾಗಬೇಕು ಅಂದರೆ ನಿಮ್ಮ ಫೋನ್‌ನಲ್ಲಿ 'Google Location Accuracy' ಆಯ್ಕೆಯನ್ನು ಚಾಲೂ ಸ್ಥಿತಿಯಲ್ಲಿ ಇಡಬೇಕು.

ಇವು ಚಾರಣವನ್ನು ಮತ್ತಷ್ಟು ಸುರಕ್ಷಿತವಾಗಿಸುವ ವ್ಯವಸ್ಥೆಗಳು. ಅವು ನಮ್ಮ ಕೈಗಳಲ್ಲೇ ಇವೆ. ಅವುಗಳನ್ನು ಬಳಸಿಕೊಳ್ಳಬೇಕು ಅಷ್ಟೆ. ❖



4 ಕೆ ರೆಸಲ್ಯೂಷನ್ | **55** ಇಂಚು ಡಿಸ್‌ಪ್ಲೇ ಸ್ಕ್ರೀನ್ ಗಾತ್ರ | ಸುಮಾರು **9** ಕೆ.ಜಿ. ತೂಕ

ವೈರ್‌ಲೆಸ್ ಟೆಲಿವಿಷನ್ ಬಂತು ನೋಡಿ

ಟಿ.ವಿ ಕಾಲಕಾಲಕ್ಕೆ ಹೊಸ ರೂಪ ಪಡೆಯುತ್ತಾ ಮೇಜಿನಿಂದ ಗೋಡೆಗೇರಿ ವಿಶ್ವದ ಆಗುಹೋಗುಗಳನ್ನೆಲ್ಲಾ ತೋರಿಸುತ್ತಿದೆ. ಈಗ ಹೊಸ ತಂತ್ರಜ್ಞಾನದ ಪ್ರಭಾವದಿಂದ ಗೋಡೆಯಿಂದ ಜೋಪಾನವಾಗಿ ಕೆಳಗಿಳಿಯುವ ತಂತ್ರವನ್ನೂ ಕಲಿತಿದೆ. ಈ ವಿಶೇಷ ಟಿ.ವಿಯ ಮಾಹಿತಿ ಇಲ್ಲಿದೆ.

ಪೃಥ್ವಿರಾಜ್

ಟೆಲಿವಿಷನ್ ಎಂದರೆ ಕಣ್ಣಮುಂದೆಯೇ ಪ್ರಪಂಚದ ವಿದ್ಯಮಾನಗಳೆಲ್ಲಾ ನಡೆಯುತ್ತಿವೆ ಎಂಬಂತೆ ತೋರಿಸುವ ಉತ್ತಮ ಡಿಸ್‌ಪ್ಲೇ, ಕೋಣೆಯ ಮೂಲೆ ಮೂಲೆಗೆ ಪಸರಿಸುವ ಶಬ್ದ, ಬೇರೆ ಬೇರೆ ಚಾನೆಲ್‌ಗಳನ್ನು ನೋಡಲು ನೆರವಾಗುವ ಉತ್ತಮ ರಿಮೋಟ್... ಹೀಗೆ ಕೆಲವು ವೈಶಿಷ್ಟ್ಯಗಳಿದ್ದರೆ ಸಾಕು ಎಂಬುದರಿಂದ ಹಿಡಿದು ಕರ್ವ್ಡ್ ಡಿಸ್‌ಪ್ಲೇ, ಒಎಲ್‌ಡಿ ಸ್ಕ್ರೀನ್ ಟಿ.ವಿ, ಸ್ಮಾರ್ಟ್ ಟಿ.ವಿ, ಡಿಜಿಟಲ್ ಟಿ.ವಿ... ಹೀಗೆ ವಿವಿಧ ತಂತ್ರಜ್ಞಾನದ ಟಿ.ವಿಗಳು ಬಳಕೆಗೆ ಬಂದಿವೆ. ಇನ್ನು ಕೆಲವೇ ವರ್ಷಗಳಲ್ಲಿ ಎಲ್ಲೆಡೆ ಸಾಮಾನ್ಯವೆಂಬಂತೆ ಬಾಕ್ಸ್ ಟಿ.ವಿಗಳು, ರೋಲೆಬಲ್ ಟಿ.ವಿಗಳೂ ರಾರಾಜಿಸಲಿವೆ.

ಪ್ರಸ್ತುತ ನಮಗೆಲ್ಲರಿಗೂ ಪರಿಚಯವಿರುವ ಟಿ.ವಿಗಳಿಗಿಂತ ಭಿನ್ನವಾದ, ಹಲವು ಹೊಸ ವೈಶಿಷ್ಟ್ಯಗಳುಳ್ಳ ಟಿ.ವಿಯನ್ನು ಅಭಿವೃದ್ಧಿಪಡಿಸಲಾಗಿದೆ. ಇದರ ಹೆಸರು ಡಿಸ್‌ಪ್ಲೇಸ್. ಇದರ ಬಳಕೆ, ಉಪಯೋಗ, ತಂತ್ರಜ್ಞಾನ, ವಿನ್ಯಾಸ ಎಲ್ಲವೂ ಭಿನ್ನವಾಗಿವೆ. ಎಲ್ಲಕ್ಕಿಂತ ಮುಖ್ಯವಾಗಿ ವಿಶ್ವದ ಮೊದಲ ವೈರ್‌ಲೆಸ್ ತಂತ್ರಜ್ಞಾನವಿರುವ ಟಿ.ವಿ ಇದಾಗಿದ್ದು ಬ್ಯಾಟರಿಗಳ ನೆರವಿನಿಂದ ಕೆಲಸ ಮಾಡುತ್ತದೆ.

ಎಲ್ಲ ಟಿ.ವಿಗಳಂತೆ ಇದನ್ನು ಗೋಡೆಗೆ ಅಳವಡಿಸಲು ರಂಧ್ರ ಕೊರೆಯುವ ಅಥವಾ ಇದಕ್ಕಾಗಿ ಪ್ರತ್ಯೇಕ ಕಪಾಟು ಮಾಡಿಸುವ ಅಗತ್ಯವಿಲ್ಲ, ಸ್ಟ್ಯಾಂಡ್ ಕೂಡ ಬೇಕಿಲ್ಲ. ಇದರಲ್ಲಿ ಸೆಲ್ಫ್ ಮೌಂಟೆಬಲ್ ತಂತ್ರಜ್ಞಾನ ಅಳವಡಿಸಲಾಗಿದ್ದು, ಮನೆಯ ಗೋಡೆ ಅಥವಾ ಗಾಜಿನ ಗೋಡೆಗಳಿಗೆ ವ್ಯಾಕ್ಯುಮ್ ಸೆಲ್ಫ್ ಸೆಕ್ಷನ್ ಕಪ್‌ಗಳ ನೆರವಿನಿಂದ ಅಂಟಿಕೊಳ್ಳುವಂತೆ ತಯಾರಿಸಲಾಗಿದೆ. ಇದಕ್ಕೆ ಯಾವುದೇ ರೀತಿಯಲ್ಲೂ ವಿದ್ಯುತ್ ಸಂಪರ್ಕ ಕೊಡುವ ಅವಶ್ಯಕತೆ ಇಲ್ಲ. ಇದರಲ್ಲಿ ನಾಲ್ಕು ಬ್ಯಾಟರಿಗಳನ್ನು ಅಳವಡಿಸಲಾಗಿದ್ದು , ಬ್ಯಾಟರಿ ಶಕ್ತಿ ಕ್ಷೀಣಿಸಿದಾಗ ಟಿ.ವಿಯಿಂದ ಹೊರ ತೆಗೆದು ರೀಚಾರ್ಜ್ ಮಾಡಿಕೊಳ್ಳಬಹುದು.

ಎಲ್ಲ ಬ್ಯಾಟರಿಗಳನ್ನು ಒಮ್ಮೆ ರೀಚಾರ್ಜ್ ಮಾಡಿದರೆ ದಿನಕ್ಕೆ ಸರಾಸರಿ ಆರು ಗಂಟೆ ವೀಕ್ಷಿಸಿದರೂ ಒಂದು ತಿಂಗಳವರೆಗೆ ಬ್ಯಾಟರಿ ಬ್ಯಾಕಪ್ ಇರುತ್ತದೆ. ನಾಲ್ಕೂ ಬ್ಯಾಟರಿಗಳನ್ನು ಒಮ್ಮೆಗೆ ರೀಚಾರ್ಜ್ ಮಾಡುವ ಅಗತ್ಯವಿಲ್ಲ ಒಂದು ಬ್ಯಾಟರಿ ಶಕ್ತಿ ಹೀನವಾದಾಗ ಕೇವಲ ಅದನ್ನೇ ಹೊರತೆಗೆದು ರೀಚಾರ್ಜ್ ಮಾಡಿ ಇಡಬಹುದು. ಹೀಗೆ ಒಂದರ ನಂತರ ಮತ್ತೊಂದನ್ನು ರೀಚಾರ್ಜ್ ಮಾಡಿಕೊಳ್ಳುತ್ತಾ ನಿರಂತರವಾಗಿ ಟಿ.ವಿ ನೋಡಬಹುದು.

ಬ್ಯಾಟರಿ ಶಕ್ತಿ ಸಂಪೂರ್ಣ ಕುಂದಿದಾಗ ತಾನಾಗಿಯೇ ಗೋಡೆಯಿಂದ ಸುರಕ್ಷಿತವಾಗಿ ಇಳಿಯುವಂತೆ ಸೆಲ್ಫ್ ಲ್ಯಾಂಡಿಂಗ್ ತಂತ್ರಜ್ಞಾನದ ಮೋಟಾರ್ ಸೆಲ್ಫ್ ಮೆಕ್ಯಾನಿಸಂ ಇದರಲ್ಲಿ ಅಳವಡಿಸಲಾಗಿದೆ. ಇದರಿಂದ ಡಿಸ್‌ಪ್ಲೇ ಸ್ಕ್ರೀನ್‌ಗೆ ಯಾವುದೇ ಹಾನಿಯಾಗದಂತೆ ಜಿಪ್‌ಲೈನ್ ಹಾಗೂ ಫೋಮ್ ಮೆಕ್ಯಾನಿಸಂ ಇದರಲ್ಲಿದೆ. ಇದು ಈ ಟಿ.ವಿಯ ಮತ್ತೊಂದು ವಿಶೇಷ. ಇದರ ನಿಯಂತ್ರಣಕ್ಕೆ ಯಾವುದೇ ರಿಮೋಟ್ ಇರುವುದಿಲ್ಲ, ಕೈ ಸನ್ನೆಗಳಿಂದಲೇ ನಿಯಂತ್ರಿಸಬಹುದು.

ಇಷ್ಟವಾಗುವ ಚಾನೆಲ್ ನೋಡಬಹುದು ಅಗತ್ಯಕ್ಕೆ ತಕ್ಕಂತೆ ಸೌಂಡ್ ನಿಯಂತ್ರಿಸಬಹುದು. ಇದರಲ್ಲಿ ಅಳವಡಿಸಿರುವ ಕ್ಯಾಮೆರಾ ಇದಕ್ಕೆ ಪೂರಕವಾಗಿ ನಮ್ಮ ಸನ್ನೆಗಳನ್ನು ಗ್ರಹಿಸುತ್ತದೆ. ನಮ್ಮ ಧ್ವನಿಯಿಂದಲೂ ನಿಯಂತ್ರಿಸಬಹುದು, ತೀರಾ ಕಷ್ಟವಾದರೆ ಸ್ಮಾರ್ಟ್‌ಫೋನ್‌ಗಳ ಟಚ್‌ಸ್ಕ್ರೀನ್ ಮುಟ್ಟಿ ಬೇಕೆನಿಸಿದ ಆ್ಯಪ್ ಹೇಗೆ ಬಳಸುತ್ತಿದ್ದೇವೆಯೊ ಇದರ ಸ್ಕ್ರೀನ್ ಮೇಲೆ ಬೆರಳು ಸ್ಪರ್ಶಿಸಿ ಉಪಯೋಗಿಸಲು ನೆರವಾಗುವಂತೆ ವಾಯ್ಸ್ ಮತ್ತು ಟಚ್ ಬೇಸ್ಡ್ ಕಂಟ್ರೋಲ್ ತಂತ್ರಜ್ಞಾನವನ್ನೂ ಅಳವಡಿಸಲಾಗಿದೆ.

ಪ್ರಸ್ತುತ ಬಳಕೆಯಲ್ಲಿರುವ ಟಿ.ವಿಗಳ ಹಿಂದುಗಡೆ ಅದರ ಕಾರ್ಯನಿರ್ವಹಣೆಗೆ ನೆರವಾಗುವಂತೆ ಪಿಸಿಬಿ ಯೂನಿಟ್, ಸ್ಪೀಕರ್‌ಗಳನ್ನು ಅಳವಡಿಸಲಾಗಿರುತ್ತದೆ. ಇದರಿಂದ ಟಿ.ವಿಯ ತೂಕ ಹೆಚ್ಚಾಗಿರುತ್ತದೆ. ಆದರೆ ಈ ಟಿ.ವಿಯನ್ನು ಗೋಡೆಗೆ ಅಂಟಿಕೊಳ್ಳುವಂತೆ ತಯಾರಿಸಲಾಗಿರುವುದರಿಂದ ಇದು ಹಗುರವಾಗಿ ಇರಬೇಕು. ಹೀಗಾಗಿ ಇದರಲ್ಲಿ ಕೇವಲ ಡಿಸ್‌ಪ್ಲೇ ಪ್ಯಾನೆಲ್ ಹಾಗೂ ವೈರ್‌ಲೆಸ್ ರಿಸೀವರ್ ಮಾತ್ರ ಅಳವಡಿಸಲಾಗಿದೆ. ಆದರೆ ಇದು ಕೆಲಸ ನಿರ್ವಹಿಸಲು ಕನ್‌ಸೋಲ್ ನೀಡಲಾಗುತ್ತದೆ. ಇದು ಟಿ.ವಿಯಿಂದ ಪ್ರತ್ಯೇಕವಾಗಿರುತ್ತದೆ. ಈ ರೀತಿಯ ಒಂದು ಕನ್‌ಸೋಲ್‌ನಿಂದ ಡಿಸ್‌ಪ್ಲೇಸ್‌ನಂತಹ ನಾಲ್ಕು ಟಿ.ವಿಗಳನ್ನು ನಿಯಂತ್ರಿಸಬಹುದು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಬ್ಯೂಟನೋನ್ ನಾಲ್ಕು ಕಾರ್ಬನ್ ಪರಮಾಣು ಹೊಂದಿರುವ ಸಂಯುಕ್ತವಾಗಿದ್ದು, ಇದರಲ್ಲಿನ ಕ್ರಿಯಾಗುಂಪೆಂದರೆ
ಎ) ಕಾರ್ಬಾಕ್ಸಿಲಿಕ್ ಆಮ್ಲ ಬಿ) ಆಲ್ಡಿಹೈಡ್
ಸಿ) ಕೀಟೋನ್ ಡಿ) ಆಲ್ಕೋಹಾಲ್
ಉತ್ತರ:– (ಸಿ) ಕೀಟೋನ್

2) ಆವರ್ತಕ ಕೋಷ್ಟಕದ ಆವರ್ತಗಳಲ್ಲಿ ಎಡದಿಂದ ಬಲಕ್ಕೆ ಹೋದಂತೆ ತೋರುವ ಪ್ರವೃತ್ತಿಗೆ ಸಂಬಂಧಿಸಿದಂತೆ ಇರುವ ಈ ಕೆಳಗಿನ ಹೇಳಿಕೆಗಳಲ್ಲಿ ಯಾವ ಹೇಳಿಕೆ ಸರಿಯಲ್ಲ.
ಎ) ಧಾತುಗಳ ಲೋಹೀಯ ಸ್ವಭಾವ ಕಡಿಮೆಯಾಗುತ್ತದೆ
ಬಿ) ವೇಲೆನ್ಸ್ ಇಲೆಕ್ಟ್ರಾನ್‌ಗಳ ಸಂಖ್ಯೆ ಹೆಚ್ಚಾಗುತ್ತದೆ
ಸಿ) ಪರಮಾಣುಗಳು ಹೆಚ್ಚು ಸುಲಭವಾಗಿ ತಮ್ಮ ಇಲೆಕ್ಟ್ರಾನ್‌ಗಳನ್ನು ಕಳೆದುಕೊಳ್ಳುತ್ತವೆ
ಡಿ) ಆಕ್ಸೈಡ್‌ಗಳು ಹೆಚ್ಚು ಆಮ್ಲೀಯವಾಗುತ್ತವೆ
ಉತ್ತರ:– (ಸಿ) ಪರಮಾಣುಗಳು ಹೆಚ್ಚು ಸುಲಭವಾಗಿ ತಮ್ಮ ಇಲೆಕ್ಟ್ರಾನ್‌ಗಳನ್ನು ಕಳೆದುಕೊಳ್ಳುತ್ತವೆ

3). ಪರಾಗಕೋಶವು ಈ ಕೆಳಗಿನವುಗಳನ್ನು ಹೊಂದಿದೆ.
ಎ) ಪುಷ್ಪಪತ್ರಗಳು ಬಿ) ಅಂಡಾಣುಗಳು
ಸಿ) ಶಲಾಕ ಡಿ) ಪರಾಗರೇಣುಗಳು
ಉತ್ತರ:– (ಡಿ) ಪರಾಗರೇಣುಗಳು

4) ಸಮರೂಪಿ ಅಂಗಗಳಿಗೆ ಉದಾಹರಣೆಯೆಂದರೆ,.............
ಎ) ನಮ್ಮ ತೋಳು ಮತ್ತು ನಾಯಿಯ ಮುಂಗಾಲು
ಬಿ) ನಮ್ಮ ಹಲ್ಲುಗಳು ಮತ್ತು ಆನೆಯ ದಂತಗಳು
ಸಿ) ಆಲೂಗೆಡ್ಡೆ ಮತ್ತು ಹುಲ್ಲಿನ ಉಪಕಾಂಡಗಳು
ಡಿ) ಮೇಲಿನ ಎಲ್ಲವೂ
ಉತ್ತರ:– ಡಿ) ಮೇಲಿನ ಎಲ್ಲವೂ

5) . ನಿಮ್ಮ ದರ್ಪಣದಿಂದ ಉಂಟಾದ ಪ್ರತಿಬಿಂಬವು ಮಿಥ್ಯ, ನೇರ ಮತ್ತು ವಸ್ತುವಿಗಿಂತ ದೊಡ್ಡದಾಗಿದೆ. ಹಾಗಾದರೆ ವಸ್ತುವಿನ ಸ್ಥಾನ ಎಲ್ಲಿರಬೇಕು ?
ಎ) ಪ್ರಧಾನ ಸಂಗಮ ಮತ್ತು ವಕ್ರತಾ ಕೇಂದ್ರಗಳ ನಡುವೆ.
ಬಿ) ವಕ್ರತಾ ಕೇಂದ್ರದಲ್ಲಿ
ಸಿ) ವಕ್ರತಾ ಕೇಂದ್ರದಿಂದ ದೂರದಲ್ಲಿ
ಡಿ) ಧ್ರುವ ಮತ್ತು ಪ್ರಧಾನ ಸಂಗಮದ ನಡುವೆ
ಉತ್ತರ:– (ಡಿ) ಧ್ರುವ ಮತ್ತು ಪ್ರಧಾನ ಸಂಗಮದ ನಡುವೆ

6) ಮಾನವನ ಕಣ್ಣು ತನ್ನ ಕಣ್ಣಿನ ಮಸೂರದ ಸಂಗಮದೂರವನ್ನು ವಿವಿಧ ದೂರಗಳಲ್ಲಿರುವ ವಸ್ತುಗಳು ಕಾಣುವಂತೆ ಸರಿಹೊಂದಿಸಲು ಕಾರಣ.
ಎ) ಪ್ರಿಸ್‌ಬಯೊಪಿಯಾ ಬಿ) ಕಣ್ಣಿನ ಹೊಂದಾಣಿಕೆ
ಸಿ) ಸಮೀಪದೃಷ್ಟಿ ಡಿ) ದೂರದೃಷ್ಟಿ
ಉತ್ತರ:– (ಬಿ) ಕಣ್ಣಿನ ಹೊಂದಾಣಿಕೆ

7). ಕಬ್ಬಿಣದ ಕಾವಲಿ ತುಕ್ಕು ಹಿಡಿಯದಂತೆ ತಡೆಗಟ್ಟಲು ಈ ಕೆಳಗಿನವುಗಳಲ್ಲಿ ಯಾವ ವಿಧಾನ ಸೂಕ್ತವಾಗಿದೆ?
ಎ) ಗ್ರೀಸ್ ಹಚ್ಚುವುದು ಬಿ) ಬಣ್ಣ ಹಚ್ಚುವುದು
ಸಿ) ಸತುವಿನ ಲೇಪನ ಮಾಡುವುದು
ಡಿ) ಮೇಲಿನ ಎಲ್ಲವೂ
ಉತ್ತರ:– (ಸಿ) ಸತುವಿನ ಲೇಪನ ಮಾಡುವುದು

8) ವಿದ್ಯುತ್ ಕಾಂತೀಯ ಪ್ರೇರಣೆಯ ತತ್ವದ ಆಧಾರದ ಮೇಲೆ ಕಾರ್ಯನಿರ್ವಹಿಸುವ ಸಾಧನ..........................
ಎ) ವಿದ್ಯುತ್ ಜನಕ ಬಿ) ವಿದ್ಯುತ್ ಮೀಟರ್
ಸಿ) ವಿದ್ಯುತ್ ಮೋಟಾರು ಡಿ) ವಿದ್ಯುತ್ ಫ್ಯಾನ್
ಉತ್ತರ:– (ಎ) ವಿದ್ಯುತ್ ಜನಕ

9) ಆಹಾರ ಪದಾರ್ಥಗಳ ಡಬ್ಬಿಗಳನ್ನು ತವರದಿಂದ ಲೇಪನಮಾಡಲಾಗಿರುತ್ತದೆಯೇ ಹೊರತು ಸತುವಿನಿಂದಲ್ಲ ಕಾರಣ.......
ಎ) ಸತು ತವರಕ್ಕಿಂತ ದುಬಾರಿ.
ಬಿ) ಸತುವಿನ ಕರಗುವ ಬಿಂದು ತವರಕ್ಕಿಂತ ಹೆಚ್ಚು.
ಸಿ) ಸತುವು ತವರಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ.
ಡಿ) ಸತುವು ತವರಕ್ಕಿಂತ ಕಡಿಮೆ ಕ್ರಿಯಾಶೀಲವಾಗಿದೆ.
ಉತ್ತರ:– (ಸಿ) ಸತುವು ತವರಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ.

10) ವಿದಳನ ಕ್ರಿಯೆಯಿಂದ ಮಾತ್ರ ಸಂತಾನೋತ್ಪತ್ತಿ ನಡೆಸುವ ಜೀವಿಗಳ ಗುಂಪು ....
ಎ) ಅಮೀಬಾ, ಹೈಡ್ರಾ, ಸಪ್ರೋಗೈರಾ
ಬಿ) ಲಿಶ್ಮೇನಿಯಾ, ಅಮೀಬಾ, ಯಿಸ್ಟ್
ಸಿ) ಅಮೀಬಾ, ಪ್ಲಾಸ್ಮೋಡಿಯಂ, ಪ್ಲನೇರಿಯಾ
ಡಿ) ಅಮೀಬಾ, ಪ್ಲಾಸ್ಮೋಡಿಯಂ, ಲಿಶ್ಮೇನಿಯಾ,
ಉತ್ತರ:– (ಡಿ) ಅಮೀಬಾ, ಪ್ಲಾಸ್ಮೋಡಿಯಂ, ಲಿಶ್ಮೇನಿಯಾ,


ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಒಂದು ದ್ರವರೂಪದ ಅಲೋಹವನ್ನು ಹೆಸರಿಸಿ
ಉತ್ತರ:– ಬ್ರೋಮಿನ್

2) ಒಂದು ದ್ರವರೂಪದ ಲೋಹವನ್ನು ಹೆಸರಿಸಿ
ಉತ್ತರ:– ಪಾದರಸ

3) ಕಾಯಜ ಸಂತಾನೋತ್ಪತ್ತಿ ಎಲ್ಲಿ ಬಳಸಲಾಗುತ್ತದೆ?
ಉತ್ತರ:– ಕಾಯಜ ಸಂತಾನೋತ್ಪತ್ತಿಯ ಈ ಲಕ್ಷಣವನ್ನು ಲೇಯರಿಂಗ್ ಅಥವಾ ಕಸಿಮಾಡುವಿಕೆಯಂತಹ ವಿಧಾನಗಳಲ್ಲಿ ಕೃಷಿಯ ಉದ್ದೇಶಕ್ಕಾಗಿ ಕಬ್ಬು, ಗುಲಾಬಿ ಅಥವಾ ದ್ರಾಕ್ಷಿಗಳಂಥ ಅನೇಕ ಸಸ್ಯಗಳನ್ನು ಬೆಳೆಸಲು ಬಳಸಲಾಗುತ್ತದೆ.

4) ಕೆಳಗಿನ ಕೊಟ್ಟಿರುವ ಮೂರು ಬೇರೆ ಬೇರೆ ಪ್ರಾಣಿಗಳ ಹೃದಯವನ್ನು ಪ್ರತಿನಿಧಿಸುತ್ತವೆ. ಅವುಗಳನ್ನು ಗಮನಿಸಿ ಮತ್ತು ಪ್ರಶ್ನೆಗಳಿಗೆ ಉತ್ತರಿಸಿ.



ಇವುಗಳಲ್ಲಿ ಯಾವ ಹೃದಯವು ಅಧಿಕ ಶಕ್ತಿ ಇರುವ ಪ್ರಾಣಿಗಳಿಗೆ ಉಪಯುಕ್ತ? ಮತ್ತು ಏಕೆ?
ಉತ್ತರ:– ಅಧಿಕ ಶಕ್ತಿ ಇರುವ ಪ್ರಾಣಿಗಳಿಗೆ 2ನೇ ಹೃದಯವು ಉಪಯುಕ್ತವಾಗಿದೆ. ಯಾಕೆಂದರೆ ಇವುಗಳಲ್ಲಿ ಆಮ್ಲಜನಕ ಯುಕ್ತ ರಕ್ತ ಹಾಗೂ ಆಮ್ಲಜನಕ ರಹಿತ ರಕ್ತವು ಮಿಶ್ರಿತವಾಗುವುದಿಲ್ಲ, ಇಮ್ತಹ ಹೃದಯವು ಸಮರ್ಥ ಆಮ್ಲಜನಕದ ಪೂರೈಕೆಗೆ ಹಾಗೂ ದೇಹದಲ್ಲಿ ಉಷ್ಣತೆ ಕಾಪಾಡಿಕೊಳ್ಳಲು ಸಹಕಾರಿಯಾಗಿದೆ

5) ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಏನನ್ನು ಸಂಯೋಜಿಸುತ್ತದೆ?
ಉತ್ತರ:– ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ವಿಭಿನ್ನ ಜೀವಿಗಳ ಡಿಎನ್‌ಎ ಅಣುಗಳ ಸೇರುವಿಕೆ ಪ್ರಕ್ರಿಯೆಯನ್ನು ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಸಂಯೋಜಿಸುತ್ತದೆ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC PHYSICS

MODEL QUESTIONS

13. Derive lens maker's formula for convex lens placed in an optical medium
Ans:- This is for the better understanding:

Lens Maker's Formula:

The formula giving relation between the focal length (f) of the lens, refractive index of the material of the lens (n) and the radii of curvature of its surface (R & R) is known as Lens maker's formula.

The manufacturers of the lenses use this relation to design the lens of a given focal length and hence it is called so.

Assumptions made to derive Lens maker's formula:


i] The lens is thin and all the distances are measured from the optical centre of the lens.
ii] The aperture of the lens is small.
iii] The object is a point object and lies on the principal axis.
iv] The angle made by incident ray and refracted ray with the principal axis are small.

Sign Conventions:

i] All the distances are measured from the optical centre of the lens.
ii] Distances measured in the direction opposite to the direction of propagation of incident light are taken as negative.

Lens Maker's Formula for convex lens placed in an optical medium -


Consider a lens made of a material of absolute refractive index n_2. This lens is placed in a medium of absolute refractive index n_1 ($n_1 < n_2$). The lens is bounded by two spherical refracting surfaces XP_1Y and XP_2Y. C_1 and C_2 be their centres of curvature and R_1 and R_2 be their radii of curvature respectively. C is the optical centre of the lens as shown in the figure below -



Step- 1: Refraction at Surface XP_1Y: Let O be a point object lying in the rarer medium on the principal axis of the refracting surface XP_1Y. The incident ray OA after refraction at A bends towards the normal AC_1 and meets the principal axis at I_1 if the second surface XP_2Y were not present. So I_1 is the real image of the object O.


Since object lies in the rarer medium, so we have

$$-\frac{n_2}{u}+\frac{n_1}{\upsilon_1}=\frac{n_2-n_1}{R_1}$$



Step- 2: Refraction at Surface XP_2Y: In fact, the ray AB refracted by the first surface XP_1Y is refracted at B by the second surface XP_2Y and it finally meets the principal axis at I. The point I acts as a virtual object placed in the denser medium for the spherical surface XP_2Y. Now it is the situation, when object is placed in the denser medium and image is formed in the rarer medium.

$$\therefore\ -\frac{n_2}{\upsilon_1}+\frac{n_1}{\upsilon}=\frac{n_2-n_2}{R_2}$$



$$\therefore\ -\frac{n_2}{\upsilon_1}+\frac{n_1}{\upsilon}=\frac{n_1-n_2}{R_2}$$

$$\Rightarrow -\frac{n_2}{\upsilon_1}+\frac{n_1}{\upsilon}=-\frac{(n_2-n_1)}{R_2} \Rightarrow -\frac{n_1}{u}+\frac{n_1}{\upsilon}=(n_2-n_1)\left(\frac{1}{R_1}-\frac{1}{R_2}\right)$$

$$\Rightarrow -\frac{1}{u}+\frac{1}{\upsilon}=\left(\frac{n_2}{n_1}-1\right)\left(\frac{1}{R_1}-\frac{1}{R_2}\right)$$

But $\frac{n_2}{n_1}$ = n, relative refractive index of the lens w.r.t. the rarer medium.

$$\therefore -\frac{1}{u}+\frac{1}{\upsilon}=(n-1)\left(\frac{1}{R_1}-\frac{1}{R_2}\right) \text{.........(i)}$$

If objects is at infinity, the image is formed at the principal focus of the lens i.e., if u = ∞, ν = f.
Hence eqn. (vii) becomes

$$-\frac{1}{\infty}+\frac{1}{f}=(n-1)\left(\frac{1}{R_1}-\frac{1}{R_2}\right)$$

$$\text{(or) } \frac{1}{f}=(n-1)\left(\frac{1}{R_1}-\frac{1}{R_2}\right) \qquad \left(\because \frac{1}{\infty}=0\right) \text{........(ii)}$$

Eqn.(ii) represents Lens maker's formula.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕೆ • ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಎಂ.ಬಿ. ಪಾಟೀಲ ತಿರುಗೇಟು

‘ಕಾಂಗ್ರೆಸ್‌ನಿಂದ ಐಎಸ್ ಮಾದರಿ ಆಡಳಿತ’

ಪ್ರಜಾವಾಣಿ ವಾರ್ತೆ


ಪ್ರಲ್ಹಾದ ಜೋಶಿ

ವಿಜಯಪುರ: ‘ರಾಜ್ಯ ಕಾಂಗ್ರೆಸ್ ಸರ್ಕಾರ ಐಎಸ್, ಮೊಘಲ್ ಮಾದರಿ ಆಡಳಿತ ನಡೆಸಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರನ್ನು ಖುಷಿಪಡಿಸಲು ಕಾಂಗ್ರೆಸ್ ನಾಯಕರು ರಾಮಮಂದಿರ ಕುರಿತು ಹೇಳಿಕೆ ನೀಡುತ್ತಾರೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಾಗ್ದಾಳಿ ನಡೆಸಿದರು.

‘ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿ ಪ್ರಕರಣ ಕೈಬಿಡಲು ಪೊಲೀಸರಿಗೆ ಪತ್ರ ಬರೆದು, ರಾಮಮಂದಿರ ಹೋರಾಟಕ್ಕೆ ಸಂಬಂಧಿಸಿದ ಹಳೆಯ ಪ್ರಕರಣ ಕೈಗೆತ್ತಿಕೊಳ್ಳುವಂತೆ ಹೇಳಲಾಗುತ್ತದೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಐಎಸ್, ಮೊಘಲ್ ಮಾದರಿ ಆಡಳಿತ’ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

ಸಮಿತಿಯ ನಿರ್ಧಾರ: ‘ರಾಮಮಂದಿರ ಉದ್ಘಾಟನಾ ಕಾರ್ಯಕ್ರಮಕ್ಕೆ ಬಿಜೆಪಿ ಆಡಳಿತ ಇರುವ ರಾಜ್ಯಗಳು ಸೇರಿ ಯಾವ ರಾಜ್ಯದ ಮುಖ್ಯಮಂತ್ರಿಗಳಿಗೂ ಆಹ್ವಾನಿಸಿಲ್ಲ. ಕೇಂದ್ರ ಸಚಿವನಾದ ನನ್ನನ್ನೂ ಕರೆದಿಲ್ಲ. ಯಾರಿಗೆ ಆಹ್ವಾನಿಸಬೇಕು ಎಂಬುದು ಶ್ರೀರಾಮ ಮಂದಿರ ನಿರ್ಮಾಣ ಸಮಿತಿಯ ಸ್ವತಂತ್ರ ನಿರ್ಧಾರ’ ಎಂದರು.

‘ರಾಮ ಮಂದಿರ ಹೋರಾಟಕ್ಕೆ ಸಂಬಂಧಿಸಿದ ಹಳೆ ಪ್ರಕರಣ ತೆಗೆದು, 72 ವರ್ಷ ವಯಸ್ಸಿನ ವ್ಯಕ್ತಿಯನ್ನು ಬಂಧಿಸುವ ನೀಚ ಕೃತ್ಯಕ್ಕೆ ಕಾಂಗ್ರೆಸ್ ಸರ್ಕಾರ ಕೈ ಹಾಕಿದೆ. ರಾಮ ಮಂದಿರಕ್ಕೆ ಪ್ರತೀಕಾರ ತೀರಿಸಿಕೊಳ್ಳಲು ಮುಂದಾಗಿದೆ’ ಎಂದು ಅವರು ಆರೋಪಿಸಿದರು.

ಜೋಶಿ ಕಾನೂನು ತಜ್ಞರಾ: ಸಿ.ಎಂ



‘ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಕಾನೂನು ತಜ್ಞರಾ, ಅವರೇನು ಕೋರ್ಟಾ? ಅವರು ಹೇಳಿದ ತಕ್ಷಣ ಹಳೆಯ ಪ್ರಕರಣ ಕೈಬಿಡಲು ಸಾಧ್ಯವಾ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

‘ಅಪರಾಧಿ, ಅಪರಾಧಿಯೇ. ಬಹಳ ಸಮಯ ಆಗಿದೆ ಎಂದಾಕ್ಷಣ ಅಪರಾಧ ಹೋಗುವುದೇ? ಹಳೆಯ ಪ್ರಕರಣ ಚುಕ್ತಾ ಮಾಡುವಂತೆ ಗೃಹ ಸಚಿವರು ಸೂಚಿಸಿದ್ದಕ್ಕೆ ಪೊಲೀಸರು ಪ್ರಕರಣ ಕೈಗೆತ್ತಿಕೊಂಡಿದ್ದಾರೆ. ಆರೋಪಿಯನ್ನು ಬಂಧಿಸಿರುವುದರಲ್ಲಿ ತಪ್ಪೇನಿದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಕೊಪ್ಪಳದ ಹತ್ತಿರದ ಬಸಾಪುರದಲ್ಲಿ ಮಾತನಾಡಿದ ಅವರು, ‘ಬಂಧನ ವಿಚಾರದಲ್ಲಿ ದ್ವೇಷದ ರಾಜಕಾರಣ ಮಾಡುವುದಾಗಲಿ, ನಿರಪರಾಧಿಗಳನ್ನು ಬಂಧಿಸುವ ಕೆಲಸವಾಗಲಿ ಮಾಡಿಲ್ಲ. ತಪ್ಪು ಮಾಡಿದವರಿಗೆ ಏನು ಮಾಡಬೇಕು? ಸುಮ್ಮನೆ ಬಿಟ್ಟು ಬಿಡಬೇಕಾ’ ಎಂದು ಕೇಳಿದರು.

‘ರಾಮಮಂದಿರ ಉದ್ಘಾಟನೆ ದಿನ ಸರ್ಕಾರಿ ರಜೆಗೆ ಬಿಜೆಪಿ ಆಗ್ರಹಿಸುತ್ತಿದೆಯಲ್ಲ’ ಎನ್ನುವ ಪ್ರಶ್ನೆಗೆ, ‘ರಜೆ ಬಗ್ಗೆ ನನಗೆ ಗೊತ್ತಿಲ್ಲ. ಕೇಂದ್ರ ಸರ್ಕಾರ ಕಾರ್ಯಕ್ರಮ ಮಾಡುತ್ತಿರುವುದರಿಂದ ಕೇಂದ್ರವೇ ರಜೆ ನೀಡಲಿ’ ಎಂದರು.

‘ರಾಮಮಂದಿರ ಉದ್ಘಾಟನೆಗೆ ರಾಮಭಕ್ತರಿಗೆ ಮಾತ್ರ ಆಹ್ವಾನ ನೀಡಲಾಗಿದೆ’ ಎಂದು ರಾಮಮಂದಿರದ ಮುಖ್ಯ ಅರ್ಚಕರು ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಯಾರಿಗೆ ಆಹ್ವಾನ ಹೋಗಿದೆ, ಬಿಟ್ಟಿದೆ ಎಂದು ಗೊತ್ತಿಲ್ಲ. ಆಹ್ವಾನ ಇದ್ದವರು ಹೋಗುತ್ತಾರೆ, ಇಲ್ಲದವರು ಇಲ್ಲ’ ಎಂದು ತಿಳಿಸಿದರು.

‘ಜೋಶಿ ಹೇಳಿಕೆ ಖಂಡನೀಯ’


ಎಂ.ಬಿ. ಪಾಟೀಲ

‘ರಾಜ್ಯ ಕಾಂಗ್ರೆಸ್ ಸರ್ಕಾರವು ಐಎಸ್ ಮಾದರಿ ಆಡಳಿತ ನಡೆಸಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿರುವುದು ಖಂಡನೀಯ. ಕಳೆದ ಐದು ವರ್ಷ ಬಿಜೆಪಿ ಸರ್ಕಾರ ಯಾವ ರೀತಿ ಆಡಳಿತ ನಡೆಸಿದೆ ಎಂಬುದು ಎಲ್ಲರಿಗೂ ತಿಳಿದಿದೆ’ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು.

‘ಬಿಜೆಪಿಯವರು ಹಿಜಾಬ್, ಅಜಾನ್, ಹಲಾಲ್ ವಿಚಾರಗಳನ್ನು ಇಟ್ಟುಕೊಂಡು ಆಡಳಿತ ನಡೆಸಿದರು. ಅದಕ್ಕೆ ಅವರಿಗೆ ಮತದಾರರು ತಕ್ಕ ಪಾಠ ಕಲಿಸಿದರು’ ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

‘ನಮ್ಮ ಸರ್ಕಾರ ಸಮ ಸಮಾಜ ನಿರ್ಮಾಣಕ್ಕೆ ಆದ್ಯತೆ ನೀಡಿದೆ. ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದೇವೆ. ಆದರೆ, ಪ್ರಧಾನಿ ಮೋದಿ ಅವರು ಈವರೆಗೆ ಯಾವುದೇ ಭರವಸೆ ಈಡೇರಿಸಿಲ್ಲ’ ಎಂದರು.

ಬಂಧನ ವಿರೋಧಿಸಿ ಇಂದು ರಾಜ್ಯವ್ಯಾಪಿ ಪ್ರತಿಭಟನೆ

ಬೆಂಗಳೂರು: ‘ರಾಮಭಕ್ತರಿಗೆ ಕಿರುಕುಳ ನೀಡಲು ಕಾಂಗ್ರೆಸ್ ಸರ್ಕಾರ ಹಳೇ ಪ್ರಕರಣಗಳಲ್ಲಿ ಒಬ್ಬೊಬ್ಬರನ್ನೇ ಬಂಧಿಸುತ್ತಿದ್ದು, ಇದನ್ನು ವಿರೋಧಿಸಿ ಬುಧವಾರ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪಕ್ಷದ ಪ್ರಮುಖ ನಾಯಕರು ಪ್ರತಿಭಟನೆ ನಡೆಸಲಿದ್ದೇವೆ’ ಎಂದು ಹೇಳಿದರು.

‘ನಿನ್ನೆ ಹುಬ್ಬಳ್ಳಿಯಲ್ಲಿ 31 ವರ್ಷದ ಹಳೆಯ ಪ್ರಕರಣದಲ್ಲಿ ಹಿಂದೂ ಕಾರ್ಯಕರ್ತ ಶ್ರೀಕಾಂತ ಪೂಜಾರಿ ಸೇರಿ ಹಲವರನ್ನು ಬಂಧಿಸಲಾಗಿದೆ. ಇದೇ 22 ರಂದು ಅಯೋಧ್ಯೆಯಲ್ಲಿ ಭಗವಾನ್ ಶ್ರೀರಾಮನ ವಿಗ್ರಹದ ಪ್ರತಿಷ್ಠಾಪನೆ ನಡೆಯಲಿದೆ. ಈ ಶುಭ ಸಂದರ್ಭದಲ್ಲಿ ದೇಶದ ಎಲ್ಲಡೆ ಸಂಭ್ರಮದ ವಾತಾವರಣವಿದೆ. ಈ ಹೊತ್ತಿನಲ್ಲೇ ಸಿದ್ದರಾಮಯ್ಯ ತಮ್ಮದು ಹಿಂದೂ ವಿರೋಧಿ ಸರ್ಕಾರ ಎಂಬುದನ್ನು ತೋರಿಸಿದ್ದಾರೆ’ ಎಂದು ವಿಜಯೇಂದ್ರ ಹರಿಹಾಯ್ದರು.

‘ಹಿಂದೂ ವಿರೋಧಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ನಮ್ಮ ಹೋರಾಟ. ಅಲ್ಪಸಂಖ್ಯಾತರನ್ನು ಓಲೈಸಲು ಇಂತಹ ಕ್ರಮಕ್ಕೆ ಸರ್ಕಾರ ಮುಂದಾಗಿದೆ. ಇಡೀ ದೇಶ ಸಂಭ್ರಮದಲ್ಲಿರುವಾಗ ಹಿಂದೂಗಳ ಭಾವನೆಗೆ ಧಕ್ಕೆ ತರುವ ರೀತಿಯಲ್ಲಿ ಸರ್ಕಾರ ನಡೆದುಕೊಂಡಿದೆ. ಇದಕ್ಕೆ ತಕ್ಕಶಾಸ್ತಿಯನ್ನು ಮತದಾರರು ಮುಂದಿನ ದಿನಗಳಲ್ಲಿ ಮಾಡಲಿದ್ದಾರೆ’ ಎಂದು ಅವರು ಕಿಡಿ ಕಾರಿದರು.

ಅಯೋಧ್ಯೆಯ ಮಂತ್ರಾಕ್ಷತೆಯನ್ನು ಮನೆ ಮನೆಗೆ ತಲುಪಿಸುವ ಕೆಲಸ ನಡೆದಿದೆ. ಇದಕ್ಕೂ ಸರ್ಕಾರ ಅಡ್ಡಿ ಮಾಡುತ್ತಿದೆ ಎಂದು ಅವರು ಆರೋಪಿಸಿದರು.

ಮಂತ್ರಾಕ್ಷತೆಗೆ ‘ಅನ್ನಭಾಗ್ಯ’ ಅಕ್ಕಿ ಶಾಸಕ ಬಸವಂತಪ್ಪ ವ್ಯಂಗ್ಯ

ದಾವಣಗೆರೆ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡುತ್ತಿರುವ ಅನ್ನಭಾಗ್ಯದ ಅಕ್ಕಿಗೆ ಬಿಜೆಪಿಯವರು ಅರಿಶಿನ ಹಚ್ಚಿ ರಾಜ್ಯದಾದ್ಯಂತ ಮಂತ್ರಾಕ್ಷತೆ ಹೆಸರಲ್ಲಿ ಹಂಚುತ್ತಿದ್ದಾರೆ’ ಎಂದು ಮಾಯಕೊಂಡ ಕ್ಷೇತ್ರದ ಶಾಸಕ ಕೆ.ಎಸ್. ಬಸವಂತಪ್ಪ ವ್ಯಂಗ್ಯವಾಡಿದರು.

ಇಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಮಗೂ ರಾಮಮಂದಿರ ಬೇಕು. ಆದರೆ ಅದಕ್ಕೆ ಒತ್ತು ನೀಡಿದರೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಅಭಿವೃದ್ಧಿ ಕಡೆಗೆ, ರೈತರ ಬಗ್ಗೆ ಚಿಂತನೆ ನಡೆಸಿ ಮಂತ್ರಗಳನ್ನು ಹೇಳಬೇಕಿತ್ತು. ಕೇವಲ ಅಧ್ಯಾತ್ಮದ ಕಡೆಗೆ ಗಮನ ಹರಿಸಲಾಗುತ್ತಿದೆ. ದೇಶದಲ್ಲಿ ರಾಮ ಮಂದಿರದ ಜೊತೆಗೆ ಕೈಗಾರಿಕೆಗಳು ಸ್ಥಾಪನೆ ಆಗಬೇಕು’ ಎಂದರು.

‘ಕೊರೊನಾ ಸಮಯದಲ್ಲಿ ಗಂಟೆ ಬಾರಿಸಿ ಎಂದು ಪ್ರಧಾನಿ ಕರೆ ನೀಡಿದರು. ಆದರೆ, ಕೊರೊನಾ ನಿಯಂತ್ರಣಕ್ಕೆ ತರಲು ಸಾವಿರಾರು ಕೋಟಿ ಹಣ ವೆಚ್ಚವಾಯಿತು. ಜೊತೆಗೆ ವೈದ್ಯರು ರಾತ್ರಿ ಹಗಲು ದುಡಿದರು. ಮೋದಿ ಅವರು ವೈಜ್ಞಾನಿಕ ಸಂದೇಶ ನೀಡಬೇಕಿತ್ತು’ ಎಂದರು.

‘ನಮ್ಮೂರಿನ ರಾಮನನ್ನು ಪೂಜಿಸಿದರೆ ಆಗಲ್ವ?’

ಹಾಸನ: ‘ನಮ್ಮೂರಿನ ರಾಮನನ್ನು ಪೂಜೆ ಮಾಡಿದ್ರೆ ಆಶೀರ್ವಾದ ಮಾಡೋದಿಲ್ವ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್.ರಾಜಣ್ಣ ಪ್ರಶ್ನಿಸಿದರು.

ರಾಮಮಂದಿರ ಉದ್ಘಾಟನೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸದೇ ಇರುವ ಕುರಿತು ನಗರದಲ್ಲಿ ಮಂಗಳವಾರ ಪ್ರತಿಕ್ರಿಯಿಸಿ, ‘ಯಾರನ್ನು ಕರೆಯ ಬೇಕು, ಕರೆಯಬಾರದು ಎಂಬುದಕ್ಕೆ ಸಂಬಂಧಿಸಿ ಬಿಜೆಪಿಯವರದ್ದೇ ಅಜೆಂಡಾ ಇರುತ್ತದೆ. ಅದನ್ನು ನಾವೇಕೆ ಪ್ರಶ್ನಿಸಬೇಕು? ಅಲ್ಲಿಗೆ ಹೋಗಿ ದರ್ಶನ, ಪೂಜೆ ಮಾಡಿದರೆ ಮಾತ್ರ ಆಶೀರ್ವಾದಾನಾ?’ ಎಂದರು.

‘ದೇವರು ಎಲ್ಲೆಡೆ ಇದ್ದಾನೆ. ನಮ್ಮಲ್ಲೂ ಇದ್ದಾನೆ, ನಿಮ್ಮಲ್ಲೂ ಇದ್ದಾನೆ, ನಾವು ನೆಮ್ಮದಿಗಾಗಿ ದೇವಸ್ಥಾನಕ್ಕೆ ಹೋಗುತ್ತೇವೆ. ನಂಬಿಕೆಗೆ ಅನುಗುಣವಾಗಿ ಎಲ್ಲರೂ ನಡೆದುಕೊಳ್ಳುತ್ತಾರೆ. ಸರಿ, ತಪ್ಪು ವ್ಯಾಖ್ಯಾನಿಸುವುದಿಲ್ಲ. ಅವರದ್ದು ಸಣ್ಣತನ ಎನ್ನೋಣವೇ ಅಥವಾ ದೊಡ್ಡತನ ಎನ್ನೋಣವೇ’ ಎಂದು ಕೇಳಿದರು.

ಹಳೆಯ ಪ್ರಕರಣಗಳನ್ನು ಮರುಪರಿಶೀಲಿಸುವ ನೆಪದಲ್ಲಿ ಕಾಂಗ್ರೆಸ್ ಸರ್ಕಾರ ರಾಮಭಕ್ತರಲ್ಲಿ ಭಯ ಹುಟ್ಟು ಹಾಕುವ ಪ್ರಯತ್ನ ಮಾಡುತ್ತಿದೆ. ಆದರೆ, ರಾಮ ಭಕ್ತರ ನೆರವಿಗೆ ಬಿಜೆಪಿ ನಿಲ್ಲಲಿದೆ. ಇದಕ್ಕೆ ಯಾರೂ ಅಂಜ ಬೇಕಿಲ್ಲ

ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

ಶ್ರೀರಾಮಚಂದ್ರನೇ ಕಾಲ್ಪನಿಕ ಎನ್ನುವ ಕಾಂಗ್ರೆಸ್ಸಿಗರು ಅಯೋಧ್ಯೆಯಲ್ಲಿ ಮಹರ್ಷಿ ವಾಲ್ಮೀಕಿ ದೇವಾಲಯದ ನಿರ್ಮಾಣದ ಬಗ್ಗೆ ಮಾತನಾಡುತ್ತಾರೆ. ಶ್ರೀರಾಮಚಂದ್ರನೇ ಕಾಲ್ಪನಿಕ ಎಂದಾದರೆ ಮಹರ್ಷಿ ವಾಲ್ಮೀಕಿ ಕುರಿತು ಮಾತನಾಡಲು ನಿಮಗೇನು ಹಕ್ಕಿದೆ?

ಬಿ.ಶ್ರೀರಾಮುಲು, ಮಾಜಿ ಸಚಿವ

ರಾಜ್ಯದ ಎಲ್ಲ ಕರಸೇವಕರ ಪಟ್ಟಿಯನ್ನು ಕೊಡುವೆ. ನಿಮ್ಮ ಸರ್ಕಾರಕ್ಕೆ ತಾಕತ್ತಿದ್ದರೆ ರಾಜ್ಯದ ಎಲ್ಲ ರಾಮ ಕರಸೇವಕರನ್ನು ಬಂಧನ ಮಾಡಿ ನೋಡಿ. ಕಾಂಗ್ರೆಸ್‌ಗೆ ಹಿಂದುತ್ವದ ಬಗ್ಗೆ ನೈಜ ಕಾಳಜಿ ಇದ್ದರೆ ಇದೇ 22 ರಂದು ರಾಜ್ಯದ ಎಲ್ಲ ಮುಜರಾಯಿ ದೇವಾಲಯಗಳಲ್ಲೂ ವಿಶೇಷ ಪೂಜೆಗೆ ವ್ಯವಸ್ಥೆ ಮಾಡಲಿ

ವಿ.ಸುನಿಲ್‌ಕುಮಾರ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

ಸಿದ್ದರಾಮಯ್ಯ ಹೆಸರಿನಲ್ಲಿ ರಾಮ ಇದ್ದರೆ ಸಾಕೇ, ಅವರಿಗೆ ರಾಮನ ಗುಣ ಇದೆಯೇ? ಶ್ರೀರಾಮಚಂದ್ರ ಎಲ್ಲರಿಗೂ ನ್ಯಾಯ ಕೊಟ್ಟು ಧರ್ಮಕ್ಕಾಗಿ ಹೋರಾಟ ಮಾಡಿದ್ದಾನೆ. ಸಿದ್ದರಾಮಯ್ಯ ಎಲ್ಲರಿಗೂ ನ್ಯಾಯ ಕೊಟ್ಟಿದ್ದಾರಾ? ದಲಿತರಿಗೆ ಮೀಸಲಿಟ್ಟಿದ್ದ ₹11 ಸಾವಿರ ಕೋಟಿಯನ್ನು ವಾಪಸ್ ಪಡೆದು ₹10 ಸಾವಿರ ಕೋಟಿಯನ್ನು ಅಲ್ಪಸಂಖ್ಯಾತರಿಗೆ ವರ್ಗಾಯಿಸಿದ್ದಾರೆ

ಸಿ.ಟಿ.ರವಿ, ಬಿಜೆಪಿ ಮುಖಂಡ

ಮಂದಿರದ ಉದ್ಘಾಟನೆ ಸಮಯದಲ್ಲಿ ಹಳೆಯ ಪ್ರಕರಣವನ್ನು ಕೆದಕುತ್ತಿರುವುದು ರಾಜ್ಯ ಸರ್ಕಾರದ ಮಾನಸಿಕತೆಯನ್ನು ತೋರಿಸುತ್ತದೆ. ರಾಜ್ಯದಲ್ಲಿ ರಾಮಭಕ್ತರನ್ನು ಜೈಲಿಗೆ ತಳ್ಳುವ ಕೆಟ್ಟ ಪರಂಪರೆಯನ್ನು ಕಾಂಗ್ರೆಸ್ ಸರ್ಕಾರ ಆರಂಭಿಸಿದೆ. ಹಿಂದೂಗಳಿಗೆ ಕಿರುಕುಳ ನೀಡುತ್ತಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸುವೆ

ಕೋಟ ಶ್ರೀನಿವಾಸ ಪೂಜಾರಿ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ಸಿದ್ದರಾಮಯ್ಯ ಅವರೇ ನಮ್ಮ ರಾಮ ಎಂದು ಮಾಜಿ ಸಚಿವ ಆಂಜನೇಯ ಹೇಳಿದ್ದು ಅವರ ವೈಯಕ್ತಿಕ ಅಭಿಪ್ರಾಯ. ಸಿದ್ದರಾಮಯ್ಯ ಅವರ ಮೇಲಿರುವ ಅಭಿಮಾನದಿಂದ ಅವರು ಹಾಗೆ ಹೇಳಿರಬಹುದು. ಬಿಜೆಪಿಯವರಿಗೆ ರಾಜಕಾರಣಕ್ಕೆ ಮಾತ್ರ ಅಯೋಧ್ಯೆ ವಿಷಯ ಬೇಕಾಗಿದೆ

ವಿ.ಆರ್.ಸುದರ್ಶನ್, ಕೆಪಿಸಿಸಿ ಉಪಾಧ್ಯಕ್ಷ

‘ರಾಮಭಕ್ತರ ವಿರುದ್ಧ ಕ್ರಮ ಸರಿಯಲ್ಲ’

ರಾಯಚೂರು: ‘ಹುಬ್ಬಳ್ಳಿಯಲ್ಲಿ 31 ವರ್ಷಗಳ ಹಳೆಯ ಘಟನೆ ಮುಂದಿಟ್ಟುಕೊಂಡು ರಾಮಭಕ್ತರ ವಿರುದ್ಧ ಕ್ರಮಕೈಗೊಳ್ಳಲು ಮುಂದಾಗಿರುವುದು ಸರಿಯಲ್ಲ’ ಎಂದು ಮಂತ್ರಾಲಯದ ಸುಬುಧೇಂದ್ರ ತೀರ್ಥರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮರ್ಯಾದಾ ಪುರುಷೋತ್ತಮನ ಮಂದಿರ ನಿರ್ಮಾಣಕ್ಕೆ ಶ್ರಮಿಸಿದ ಭಕ್ತರ ವಿರುದ್ಧ ಕ್ರಮ ಸರಿಯಲ್ಲ. ರಾಮಮಂದಿರ ನಿರ್ಮಾಣಕ್ಕೆ ಅನೇಕ ಜನ ಪ್ರಾಣ ಕಳೆದುಕೊಂಡಿದ್ದಾರೆ. ಕೆಲವರು ದೇಹದ ಅಂಗಾಂಗ ಕಳೆದುಕೊಂಡಿದ್ದಾರೆ. ಆರ್ಥಿಕ ತೊಂದರೆಗೆ ಒಳಗಾಗಿದ್ದಾರೆ. ಇದು ದೇಶ ದ್ರೋಹದ ಕೆಲಸವಲ್ಲ. ಆರಾಧ್ಯದೇವನ ಮಂದಿರ ನಿರ್ಮಾಣ ನಮ್ಮೆಲ್ಲರ ಹಕ್ಕು’ ಎಂದರು.

ಬಸ್– ಜೀಪ್ ಡಿಕ್ಕಿ: ನಾಲ್ವರು ಸಾವು

ಹುಣಸೂರು (ಮೈಸೂರು ಜಿಲ್ಲೆ): ನಗರ ಹೊರವಲಯದ ಅಯ್ಯಪ್ಪ ದೇವಸ್ಥಾನ ಸಮೀಪ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಮಂಗಳವಾರ ಬೆಳಿಗ್ಗೆ ಕೆಎಸ್‌ಆರ್‌ಟಿಸಿ ಎಲೆಕ್ಟ್ರಿಕ್ ಬಸ್ ಮತ್ತು ಜೀಪ್ ಮುಖಾಮುಖಿ ಡಿಕ್ಕಿ ಸಂಭವಿಸಿ, ಜೀಪಿನಲ್ಲಿದ್ದ ನಾಲ್ವರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟು, ಐವರು ತೀವ್ರವಾಗಿ ಗಾಯಗೊಂಡರು.

ಎಚ್.ಡಿ.ಕೋಟೆ ತಾಲ್ಲೂಕಿನ ಜಿಯಾರ ಕಾಲೊನಿಯ ಸೋಮೇಶ (30), ಲೋಕೇಶ್ (30), ರಾಜು (35) ಮತ್ತು ಜೀಪ್ ಚಾಲಕ ಮನು (30) ಮೃತರು. ನಿಂಗರಾಜು ಮತ್ತು ರವಿ ಅವರ ತಲೆಗೆ ತೀವ್ರ ಗಾಯವಾಗಿದ್ದು, ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದವರು ಹುಣಸೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ರಜತ ‘ರಥ’ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಸಮೀಪದ ಇಂಚಲ ಗ್ರಾಮದ ಶಿವಯೋಗೀಶ್ವರ ಸಾಧು ಸಂಸ್ಥಾನ ಮಠದ ರಜತ ರಥೋತ್ಸವ ಮಂಗಳವಾರ ವೈಭವದಿಂದ ನೆರವೇರಿತು. ಪೀಠಾಧಿಪತಿ ಶಿವಾನಂದ ಭಾರತಿ ಸ್ವಾಮೀಜಿ 84ನೇ ಜನ್ಮದಿನದ ಅಂಗವಾಗಿ ನೆರವೇರಿದ ಈ ಜಾತ್ರೆಯಲ್ಲಿ ಅಪಾರ ಭಕ್ತರು ಪಾಲ್ಗೊಂಡರು

ಚಿತ್ರ: ಪ್ರಕಾಶ ಕರಿಗಾರ

‘ಪೊಲೀಸರಿಂದ ಕಾನೂನು ಪ್ರಕಾರ ಕ್ರಮ’

ಪ್ರಜಾವಾಣಿ ವಾರ್ತೆ


ಜಿ.ಪರಮೇಶ್ವರ

ಬೆಂಗಳೂರು: ‘ಹುಬ್ಬಳ್ಳಿಯಲ್ಲಿ 30 ವರ್ಷಗಳ ಹಿಂದೆ ನಡೆದ ರಾಮಜನ್ಮಭೂಮಿ ಹೋರಾಟದಲ್ಲಿ ಭಾಗಿಯಾದವರ ಬಂಧನ ವಿಚಾರದಲ್ಲಿ ಪೊಲೀಸರು ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದಾರೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಕೇವಲ ಇದೊಂದೇ ಪ್ರಕರಣ ಅಲ್ಲ. ಎಲ್ಲ ಪ್ರಕರಣಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಈ ಪ್ರಕರಣದ ಬಗ್ಗೆಯೂ ಕ್ರಮ ಕೈಗೊಳ್ಳಲಾಗಿದೆ’ ಎಂದರು.

‘ಈ ನೆಲದ ಕಾನೂನಿನ ಪ್ರಕಾರ ಪೊಲೀಸರು ನಡೆದುಕೊಂಡಿದ್ದಾರೆ. ಬಿಜೆಪಿ ನಾಯಕರು ರಾಜಕೀಯ ಉದ್ದೇಶದಿಂದ ಟೀಕೆ ಮಾಡಬಾರದು. ಹಾಗಾದರೆ, ಉಳಿದ ಪ್ರಕರಣಗಳಲ್ಲಿ ಬಂಧನ ಆದವರು ಹಿಂದೂಗಳಲ್ಲವೇ? ಅವರಿಗೊಂದು ನ್ಯಾಯ ಇವರಿಗೊಂದು ನ್ಯಾಯವೇ’ ಎಂದು ಪ್ರಶ್ನಿಸಿದರು.

‘ಹುಬ್ಬಳ್ಳಿಯಲ್ಲಿ ಮಾತ್ರವಲ್ಲ, ಎಲ್ಲ ಕಡೆಗಳಲ್ಲೂ ಹಳೆ ಪ್ರಕರಣಗಳನ್ನು ಪರಿಶೀಲಿಸುತ್ತಿದ್ದೇವೆ. ಹುಬ್ಬಳ್ಳಿ ನಗರ ಪೊಲೀಸ್ ಕಮಿಷನರ್ ಅವರು ಬಂಧಿಸುವ ಮುನ್ನ ನಮ್ಮ ಗಮನಕ್ಕೆ ತಂದಿಲ್ಲ. 30 ವರ್ಷಗಳ ಹಿಂದಿನ ಪ್ರಕರಣಕ್ಕೆ ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಯ ಸಂದರ್ಭದಲ್ಲಿ ಬಂಧನ ಆಗಿದ್ದು ಕಾಕತಾಳೀಯ ಅಷ್ಟೇ’ ಎಂದು ಸ್ಪಷ್ಟನೆ ನೀಡಿದರು.

ರೈತರ ಮತ್ತು ಕನ್ನಡ ಪರ ಹೋರಾಟಗಾರರ ಮೇಲಿನ ಪ್ರಕರಣಗಳನ್ನು ಹಿಂಪಡೆಯಬೇಕೆಂಬ ಆಗ್ರಹದ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ, ‘ಪ್ರಕರಣ ಹಿಂಪಡೆಯುವಂತೆ ಬಹಳಷ್ಟು ಅರ್ಜಿಗಳು ಬಂದಿವೆ. ಸ್ವಯಂಪ್ರೇರಿತವಾಗಿ ಹಿಂಪಡೆಯಲು ಆಗುವುದಿಲ್ಲ. ಕೇಸ್ ವಾಪಸ್ ವಿಚಾರ ಸಂಪುಟ ಉಪ ಸಮಿತಿಯಲ್ಲಿ ಚರ್ಚೆಯಾಗಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಅಧಿಕಾರಿಗಳು ಪ್ರಕರಣಗಳನ್ನು ಪರಿಶೀಲಿಸಿ, ಯಾವ ಪ್ರಕರಣ ವಾಪಸ್ ಪಡೆಯಬಹುದು, ಯಾವುದನ್ನು ಪಡೆಯಬಾರದು ಎಂದು ಶಿಫಾರಸು ಮಾಡುತ್ತಾರೆ. ಸಮಿತಿ ತೀರ್ಮಾನ ತೆಗೆದುಕೊಳ್ಳುತ್ತದೆ’ ಎಂದರು.

‘ರೈತರ ಅನೇಕ ಪ್ರಕರಣಗಳನ್ನು ವಾಪಸ್ ಪಡೆಯುವಂತೆ ಅರ್ಜಿ ಬಂದಿವೆ. ಅಮಾಯಕರ ಮೇಲಿನ ಮತ್ತು ಘಟನೆಗಳಿಂದ ಸಾರ್ವಜನಿಕರಿಗೆ ತೊಂದರೆ ಆಗಿಲ್ಲ ಎಂದಾದರೆ ಅಂತಹ ಪ್ರಕರಣಗಳನ್ನು ವಾಪಸ್ ಪಡೆಯಲಾಗುತ್ತದೆ’ ಎಂದರು.

ಶಾಸಕರ ಮೇಲಿನ ಪ್ರಕರಣ ವಾಪಸ್ ಪಡೆಯುವ ಕುರಿತು ಪ್ರತಿಕ್ರಿಯಿಸಿದ ಅವರು, ‘ಶಾಸಕರಿಂದಲೂ ಅರ್ಜಿಗಳು ಬಂದಿವೆ. ಅವುಗಳನ್ನು ಪರಿಶೀಲಿಸಿ, ವಾಪಸ್ ಪಡೆಯುವ ಹಂತದಲ್ಲಿದ್ದರೆ ನೋಡುತ್ತೇವೆ’ ಎಂದರು.

ರಾಷ್ಟ್ರೀಯ ಕವಿ ಸಮ್ಮೇಳನಕ್ಕೆ ಫೈಜ್ನಟ್ರಾಜ್


ಫೈಜ್ನಟ್ರಾಜ್

ಬೆಂಗಳೂರು: ಆಕಾಶವಾಣಿಯು ಜಾರ್ಖಂಡ್‌ನ ರಾಂಚಿಯಲ್ಲಿ ಜ.5ರಂದು ಹಮ್ಮಿಕೊಂಡಿರುವ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಕವಿ ಸಂತೇಬೆನ್ನೂರು ಫೈಜ್ನಟ್ರಾಜ್ ಕನ್ನಡ ಭಾಷೆಯನ್ನು ಪ್ರತಿನಿಧಿಸಲಿದ್ದಾರೆ.

ಆಕಾಶವಾಣಿಯು 1956ರಿಂದ ಪ್ರತಿವರ್ಷ ಭಾರತೀಯ ಭಾಷೆಗಳ ರಾಷ್ಟ್ರೀಯ ಕವಿ ಸಮ್ಮೇಳನ ಆಯೋಜಿಸುತ್ತಾ ಬಂದಿದೆ. ಬೇರೆ ಬೇರೆ ರಾಜ್ಯಗಳಿಂದ ವಿವಿಧ ಭಾಷೆಗಳನ್ನು ಪ್ರತಿನಿಧಿಸುವ ಕವಿಗಳು ಭಾಗವಹಿಸಲಿದ್ದು, ಸಂತೇಬೆನ್ನೂರು ಫೈಜ್ನಟ್ರಾಜ್ ಕನ್ನಡ ಕವನ ವಾಚನ ಮಾಡಲಿದ್ದಾರೆ.

ಈ ಕಾರ್ಯಕ್ರಮ ಗಣರಾಜ್ಯೋತ್ಸವದ ಮುನ್ನಾದಿನ ಆಕಾಶವಾಣಿಯ ಎಲ್ಲ ಕೇಂದ್ರಗಳಿಂದ ಆಯಾ ರಾಜ್ಯಗಳ ಭಾಷೆಗಳಲ್ಲಿ ಪ್ರಸಾರವಾಗಲಿದೆ.

‘ಆದೇಶ ಪಾಲಿಸದ ಸಿಇಒಗಳಿಗೆ ನೋಟಿಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರದ ಆದೇಶ, ಸೂಚನೆ ಪಾಲಿಸದೆ, ತಮ್ಮದೇ ನಿರ್ಧಾರಗಳನ್ನು ತೆಗೆದುಕೊಳ್ಳುವ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಸಿಇಒ) ನೋಟಿಸ್ ನೀಡಬೇಕು’ ಎಂದು ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದರು.

ಸಿಇಒಗಳ ಜೊತೆ ಮಂಗಳವಾರ ವಿಡಿಯೊ ಸಂವಾದ ನಡೆಸಿ, ಜಿಲ್ಲೆಗಳಲ್ಲಿ ಆಗಿರುವ ಪ್ರಗತಿ ಪರಿಶೀಲಿಸಿದ ಸಚಿವರು, ‘ವಾರಕ್ಕೊಮ್ಮೆ ಸಿಇಒಗಳು ಕಡ್ಡಾಯವಾಗಿ ತಾಲ್ಲೂಕು ಕೇಂದ್ರಗಳಿಗೆ ಹಾಗೂ ಗ್ರಾಮ ಪಂಚಾಯತಿ ಕಚೇರಿಗಳಿಗೆ ಭೇಟಿ ನೀಡಬೇಕು. ಕ್ಷೇತ್ರಮಟ್ಟದಲ್ಲಿ ಯೋಜನೆಗಳ ಆಶಯ ಹಾಗೂ ಅವುಗಳ ಅಗತ್ಯದ ಕುರಿತು ಸಿಇಒಗಳು ಮಾಹಿತಿ ನೀಡಿದರೆ ಮತ್ತಷ್ಟು ಜನಸ್ನೇಹಿ ಕಾರ್ಯಕ್ರಮಗಳನ್ನು ರೂಪಿಸಲು ಅನುಕೂಲ ಆಗಬಹುದು’ ಎಂದರು.

ತನಿಖೆ ಎದುರಿಸುತ್ತಿರುವ ಅಧಿಕಾರಿ/ಸಿಬ್ಬಂದಿ

253 ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು

130 ಪಂಚಾಯತಿ ಕಾರ್ಯದರ್ಶಿಗಳು

32 ಪಂಚಾಯಿತಿ ಸಿಬ್ಬಂದಿ

‘ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಇತರ ಅಧಿಕಾರಿಗಳ ವಿರುದ್ಧದ ಇಲಾಖಾ ತನಿಖೆ ಹಾಗೂ ಲೋಕಾಯುಕ್ತ ತನಿಖೆಯ ಸಂಬಂಧದಲ್ಲಿ ತ್ವರಿತ ಕ್ರಮ ಆಗದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಸಚಿವರು, ‘ವಿಳಂಬ ಮಾಡದೆ ಕ್ರಮ ಕೈಗೊಂಡು ಪ್ರಕರಣಗಳಿಗೆ ಅಂತ್ಯ ಹಾಡಬೇಕು’ ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸುಸಜ್ಜಿತ ಕಟ್ಟಡ ಇಲ್ಲದ ಗ್ರಾಮ ಪಂಚಾಯತಿ ಕಚೇರಿಗಳಿಗೆ ಕಟ್ಟಡ ನಿರ್ಮಿಸಲು ತಲಾ ₹ 20 ಲಕ್ಷ ಅನುದಾನ ನೀಡಲಾಗುತ್ತಿದೆ. 283 ಕಟ್ಟಡಗಳು ನಿರ್ಮಾಣಗೊಂಡಿವೆ. 151 ಕಟ್ಟಡಗಳ ನಿರ್ಮಾಣ ವಿವಿಧ ಹಂತಗಳಲ್ಲಿವೆ. 22 ಗ್ರಾಮಗಳಲ್ಲಿ ನಿವೇಶನ ಲಭ್ಯವಾಗಬೇಕಾಗಿದೆ ಎಂದು ಅಧಿಕಾರಿಗಳು ಸಚಿವರ ಗಮನಕ್ಕೆ ತಂದರು.

ಗ್ರಾಮ ಪಂಚಾಯತಿ ಕಚೇರಿಗಳಲ್ಲಿ 46,655 ಸಿಬ್ಬಂದಿ ಇದ್ದಾರೆ. ಈ ಪೈಕಿ, ಶೇ 63ರಷ್ಟು ಮಂದಿ ಮಾತ್ರ ಇ-ಹಾಜರಿ ಬಳಸುತ್ತಿರುವುದನ್ನು ಗಮನಿಸಿದ ಸಚಿವರು, ತಕ್ಷಣ ಎಲ್ಲ ಸಿಬ್ಬಂದಿಯನ್ನು ಇ–ಹಾಜರಾತಿ ವ್ಯಾಪ್ತಿಗೆ ತರಬೇಕು. ಈ ವ್ಯವಸ್ಥೆಗೆ ಬಾರದ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ಇ-ಸ್ವತ್ತು ದಾಖಲೆಗಳ ವಿತರಣೆಯಲ್ಲಿ ಆಗುತ್ತಿರುವ ವಿಳಂಬ ಸರಿಯಲ್ಲ. ಜನೋಪಯೋಗಿ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವಲ್ಲಿ ಆದ್ಯತೆ ನೀಡಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ತೆರಿಗೆ ಪಾಲು: ರಾಜ್ಯದ ಸೊಲ್ಲು

ಒಂದನೇ ಪುಟದಿಂದ...

15ನೇ ಹಣಕಾಸು ಆಯೋಗದ ಅವಧಿಯಲ್ಲಿ ಅದನ್ನು ಶೇ 3.64 ಕ್ಕೆ ಇಳಿಕೆಯಾಯಿತು. ಇದರಿಂದ ಮೂರು ವರ್ಷಗಳಲ್ಲಿ ಕರ್ನಾಟಕಕ್ಕೆ ₹26,140 ಕೋಟಿ ಕೊರತೆ ಆಗಿದೆ ಎಂದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಪ್ರತಿಪಾದಿಸುತ್ತಿದೆ.

2019–23ರ ಅವಧಿಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯನವರು, ಕೇಂದ್ರದಿಂದ ಸಿಗುತ್ತಿರುವ ಅನುದಾನ ಕುಸಿತವಾಗುತ್ತಾ ಬಂದಿರುವುದನ್ನು ಉಲ್ಲೇಖಿಸಿದ್ದರು. ಮುಖ್ಯಮಂತ್ರಿಯಾದ ಬಳಿಕ ಜುಲೈನಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವನ್ನು ನೇರವಾಗಿಯೇ ತರಾಟೆಗೆ ತೆಗೆದುಕೊಂಡಿದ್ದರು.

ರಾಜ್ಯವಾರು ಸಂಗ್ರಹವಾಗುವ ತೆರಿಗೆ ಪಾಲಿನ ಹಂಚಿಕೆ ಮಾಡುವ ವಿಧಾನವನ್ನು ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಬದಲಾಯಿಸಿದ್ದೇ ಇದಕ್ಕೆ ಕಾರಣ. ಹೆಚ್ಚು ತೆರಿಗೆ ಸಂಗ್ರಹವಾಗುವ ರಾಜ್ಯಕ್ಕೆ ಹೆಚ್ಚಿನ ಪಾಲನ್ನು ನೀಡುವ ಬದಲಿಗೆ ಜನಸಂಖ್ಯೆ, ಹಿಂದುಳಿದಿರುವಿಕೆ ಮತ್ತಿತರ ಮಾನದಂಡ ಆಧರಿಸಿ ತೆರಿಗೆ ಪಾಲು ಹಂಚಿಕೆ ಮಾಡುವ ತೀರ್ಮಾನವನ್ನು ಸರ್ಕಾರ ಕೈಗೊಂಡಿತು. ಒಟ್ಟು ಜಿಡಿಪಿಯ ಮೂರನೇ ಒಂದರಷ್ಟು ಹಾಗೂ ತೆರಿಗೆಯ ಶೇ 30ರಷ್ಟು ಮೊತ್ತ ತಮಿಳುನಾಡು, ಕರ್ನಾಟಕ, ಕೇರಳ, ಆಂಧ್ರಪ್ರದೇಶ ಮತ್ತು ತೆಲಂಗಾಣದಿಂದ ಸಂಗ್ರಹವಾಗುತ್ತಿದೆ. ಪಾಲು ನೀಡುವಾಗ, ಉತ್ತರ ಪ್ರದೇಶ, ಬಿಹಾರ ಮತ್ತಿತರ ರಾಜ್ಯಗಳಿಗೆ ಹೆಚ್ಚಿನ ಮೊತ್ತ ನೀಡಲಾಗುತ್ತಿದೆ. ಈ ತಾರತಮ್ಯದ ವಿರುದ್ಧ ಧ್ವನಿ ಎತ್ತಲು ಸರ್ಕಾರ ಮುಂದಾಗಿದೆ. ದಕ್ಷಿಣದ ರಾಜ್ಯಗಳ ಜತೆಗೆ, ಇದೇ ರೀತಿಯ ಅನ್ಯಾಯಕ್ಕೆ ಒಳಗಾಗಿರುವ ಉತ್ತರದ ರಾಜ್ಯಗಳನ್ನೂ ಸೇರಿಸಿಕೊಳ್ಳುವ ಆಲೋಚನೆ ಸರ್ಕಾರದ ಮುಂದಿದೆ ಎಂದು ತಿಳಿದುಬಂದಿದೆ.

ನೀತಿ ಆಯೋಗದ ಮಾಜಿ ಅಧ್ಯಕ್ಷ ಹಾಗೂ ಕೊಲಂಬಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅರವಿಂದ್ ಪನಗಡಿಯಾ ಅವರು 16ನೇ ಹಣಕಾಸು ಆಯೋಗದ ಅಧ್ಯಕ್ಷರು. 2026ರ ಏಪ್ರಿಲ್ 1ರಿಂದ ಇದು ಕಾರ್ಯಾರಂಭ ಮಾಡಲಿದ್ದು, ಇದರ ಅವಧಿ ಐದು ವರ್ಷಗಳು.

ಜನಸಂಖ್ಯೆ ಆಧಾರದ ಮೇಲೆ ಹಂಚಿಕೆ ಮಾಡುವುದನ್ನು ಬದಲಿಸಬೇಕು. ಇದರ ಬದಲಿಗೆ, ಅಭಿವೃದ್ಧಿ ಹೊಂದಿದ ರಾಜ್ಯಗಳಿಗೆ ಅಭಿವೃದ್ಧಿ ಹೊಂದದ ರಾಜ್ಯಗಳಿಂದ ಭಾರಿ ಪ್ರಮಾಣದಲ್ಲಿ ವಲಸಿಗರು ಬರುತ್ತಿರುವುದರಿಂದ ಇಂತಹ ‘ಗಮ್ಯ ರಾಜ್ಯ’ಗಳನ್ನು ಪುರಸ್ಕರಿಸಿ ಹೆಚ್ಚಿನ ಪಾಲು ನೀಡಬೇಕು ಎಂಬ ವಾದನ್ನು ಕರ್ನಾಟಕ ಮಂಡಿಸಲಿದೆ ಎಂದೂ ಮೂಲಗಳು ಹೇಳಿವೆ.

‘ಇತರ ರಾಜ್ಯಗಳ ಸಹಕಾರ ಪಡೆಯುತ್ತೇವೆ’

ಒಂದನೇ ಪುಟದಿಂದ...

‘16 ನೇ ಹಣಕಾಸು ಆಯೋಗ ಕರ್ನಾಟಕದ ಪಾಲಿಗೆ ಮಹತ್ವದ್ದು. ನಾವು ನಮ್ಮ ರಾಜ್ಯದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಬೇಕು. ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದದ ರಾಜ್ಯಗಳ ಮಧ್ಯೆ ಸಾಕಷ್ಟು (ತೆರಿಗೆ ಪಾಲಿನ ಹಂಚಿಕೆ) ತಾರತಮ್ಯ ಇದೆ. ಹಣಕಾಸು ಆಯೋಗದ ಮುಂದೆ ನಮ್ಮ ವಿಚಾರವನ್ನು ಪ್ರಬಲವಾಗಿ ಪ್ರತಿಪಾದಿಸುವುದಕ್ಕೆ ಸಂಬಂಧಿಸಿದಂತೆ ಕಾರ್ಯವನ್ನು ಆರಂಭಿಸಲಿದ್ದೇವೆ’ ಎಂದು ರಾಯರಡ್ಡಿ ಹೇಳಿದರು.

ಡಿಎಂಕೆ ಹೊರತಾಗಿ ಮಿಕ್ಕ ಪ್ರಾದೇಶಿಕ ಪಕ್ಷಗಳ ಒಕ್ಕೂಟದ ಪರವಾದ ನಿಲುವುಗಳ ಬದ್ಧತೆ ಸದಾ ಸಂಶಯಾಸ್ಪದ. ಅವು ವಿಶ್ವಾಸಾರ್ಹತೆ ಕಳೆದುಕೊಂಡಿವೆ. ಈ ವಿಷಯದಲ್ಲಿ ಕಾಂಗ್ರೆಸ್ ಬಗ್ಗೆ ಮಾತನಾಡುವುದೇನಿಲ್ಲ

ಬಿ.ಶ್ರೀಪಾದಭಟ್
ಸಾಮಾಜಿಕ ಕಾರ್ಯಕರ್ತ

ದೇವರಕೊಂಡ ರೆಡ್ಡಿ, ಕಾಯ್ಕಿಣಿಗೆ ಪ್ರಶಸ್ತಿ


ದೇವರಕೊಂಡ ರೆಡ್ಡಿ


ಜಯಂತ ಕಾಯ್ಕಿಣಿ

ಧಾರವಾಡ: ಹಾವೇರಿಯ ಗಳಗನಾಥ ಮತ್ತು ನಾ.ಶ್ರೀ. ರಾಜಪುರೋಹಿತ ಪ್ರತಿಷ್ಠಾನ ನೀಡುವ ‘ನಾ.ಶ್ರೀ. ರಾಜಪುರೋಹಿತ ಸಂಶೋಧಕ ಪ್ರಶಸ್ತಿ’ಗೆ ಬೆಂಗಳೂರಿನ ಕರ್ನಾಟಕ ಇತಿಹಾಸ ಅಕಾಡೆಮಿ ಅಧ್ಯಕ್ಷ ದೇವರಕೊಂಡ ರೆಡ್ಡಿ ಹಾಗೂ ‘ಗಳಗನಾಥ ಕಾದಂಬರಿಕಾರ ಪ್ರಶಸ್ತಿ’ಗೆ ಸಾಹಿತಿ ಜಯಂತ ಕಾಯ್ಕಿಣಿ ಆಯ್ಕೆಯಾಗಿದ್ದಾರೆ.

‘ಪ್ರಶಸ್ತಿಗಳು ತಲಾ ₹50 ಸಾವಿರ ನಗದು, ಫಲಕ ಒಳಗೊಂಡಿದೆ. ಜನವರಿ 5ರಂದು ಧಾರವಾಡದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ’ ಎಂದು ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ದುಷ್ಯಂತ ನಾಡಗೌಡ ತಿಳಿಸಿದ್ದಾರೆ.

ಧಾರಣಾ ಶಕ್ತಿಯ ಅಧ್ಯಯನವಿಲ್ಲದೆ ಯೋಜನೆಗೆ ತಾತ್ವಿಕ ಅನುಮೋದನೆ: ಕೇಂದ್ರ ತೀರ್ಮಾನ

ಜಲ ವಿದ್ಯುತ್ ಯೋಜನೆಗೆ ‘ರಹದಾರಿ’

• ಮಂಜುನಾಥ ಹೆಬ್ಬಾರ್

ನವದೆಹಲಿ: ನದಿ ಜಲಾನಯನ ಪ್ರದೇಶದ ಧಾರಣಾ ಶಕ್ತಿ ಹಾಗೂ ಪರಿಸರ ಪರಿಣಾಮದ ಮೌಲ್ಯಮಾಪನದ ಕುರಿತು ಅಧ್ಯಯನಗಳನ್ನು ನಡೆಸುವ ಮುನ್ನವೇ ಪ್ರಸ್ತಾವಿತ ಜಲ ವಿದ್ಯುತ್ ಯೋಜನೆಗಳಿಗೆ ತಾತ್ವಿಕ ಅನುಮೋದನೆ ನೀಡಲು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ತೀರ್ಮಾನಿಸಿದೆ. ಇದೊಂದು ಅನಾಹುತಕಾರಿ ನಡೆ ಎಂದು ಪರಿಸರವಾದಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

ಕರ್ನಾಟಕದ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೇರಿದಂತೆ ಎಲ್ಲ ರಾಜ್ಯಗಳ ಅರಣ್ಯ ಇಲಾಖೆಗಳ ಮುಖ್ಯಸ್ಥರಿಗೆ ಡಿಸೆಂಬರ್ 27ರಂದು ಪತ್ರ ಬರೆದಿರುವ ಸಚಿವಾಲಯವು, ಈ ಬಗ್ಗೆ ಮಾಹಿತಿ ಹಂಚಿಕೊಂಡಿದೆ.

ಪರಿಸರ, ಜೀವವೈವಿಧ್ಯ, ಪುನರ್ವಸತಿ ಹಾಗೂ ಅದಕ್ಕೆ ಸಂಬಂಧಿಸಿದ ಇತರ ವಿಷಯಗಳನ್ನು ಪರಿಸರ ಮೌಲ್ಯಮಾಪನದ ಅಧ್ಯಯನವು ಗಣನೆಗೆ ತೆಗೆದುಕೊಳ್ಳುತ್ತದೆ. ಅಧ್ಯಯನ ವರದಿಗಳ ಆಧಾರದಲ್ಲೇ ಯೋಜನೆಗಳಿಗೆ ಅನುಮೋದನೆ ನೀಡಲಾಗುತ್ತದೆ ಎಂದು ಸಚಿವಾಲಯವು 2013ರಲ್ಲಿ ಹೇಳಿತ್ತು.

ಅರಣ್ಯ ಸಂರಕ್ಷಣಾ ಕಾಯ್ದೆ–1980ರ ಅಡಿಯಲ್ಲಿ ಯೋಜನೆಗೆ ಅನುಮೋದನೆ ನೀಡಲು ದೀರ್ಘಕಾಲ ಬೇಕಾಗುತ್ತದೆ. ಹೀಗಾಗಿ, ಷರತ್ತುಗಳನ್ನು ವಿಧಿಸಿ ಸಚಿವಾಲಯದ ಅರಣ್ಯ ಸಂರಕ್ಷಣಾ ವಿಭಾಗವು ಯೋಜನೆಗೆ ಮೊದಲನೇ (ತಾತ್ವಿಕ) ಹಂತದ ಅನುಮೋದನೆ ನೀಡಬಹುದು. ಇದು ಸಣ್ಣ ಹಾಗೂ ಮಧ್ಯಮ ಗಾತ್ರದ ಜಲ ವಿದ್ಯುತ್ ಯೋಜನೆಗಳಿಗೆ ಅನ್ವಯವಾಗಲಿದೆ ಎಂದು ಸಚಿವಾಲಯ ತಿಳಿಸಿದೆ. ಜತೆಗೆ, ಧಾರಣಾ ಶಕ್ತಿ ಹಾಗೂ ಪರಿಸರ ಮೌಲ್ಯಮಾಪನದ ಅಧ್ಯಯನ ವರದಿಗಳು ಬಂದ ಬಳಿಕವೇ ಯೋಜನೆಗೆ ಅಂತಿಮ ಅನುಮೋದನೆ ನೀಡಲು ಸಚಿವಾಲಯ ನಿರ್ಧರಿಸಿದೆ.

ಆದರೆ, ನದಿ ಜಲಾನಯನ ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚು ಜಲ ವಿದ್ಯುತ್ ಯೋಜನೆಗಳನ್ನು ಮಂಜೂರು ಮಾಡಲು ಧಾರಣಾ ಸಾಮರ್ಥ್ಯ ಹಾಗೂ ಪರಿಸರ ಪರಿಣಾಮದ ಮೌಲ್ಯಮಾಪನ ಅಧ್ಯಯನಗಳನ್ನು ನಡೆಸುವುದು ಅವಶ್ಯಕ ಎಂದೂ ಸ್ಪಷ್ಟಪಡಿಸಿದೆ. ಸಚಿವಾಲಯದ ಸಂಬಂಧಪಟ್ಟ ವಿಭಾಗವು ನದಿ ಜಲಾನಯನ ಪ್ರದೇಶದ ವರದಿಗಳ ವಿವರಗಳನ್ನು ರಾಜ್ಯ ಸರ್ಕಾರಗಳ ಜತೆಗೆ ಹಂಚಿಕೊಳ್ಳಬೇಕು ಎಂದು ಸಚಿವಾಲಯ ತಿಳಿಸಿದೆ.

‘ಯೋಜನೆ ಆರಂಭಿಸುವವರು ಯೋಜನಾ ಮಂಜೂರಾತಿಗಾಗಿ ಸಚಿವಾಲಯಕ್ಕೆ ಅರ್ಜಿ ಸಲ್ಲಿಸುತ್ತಾರೆ. ಸಚಿವಾಲಯವು ಕೆಲವೊಂದು ಷರತ್ತುಗಳನ್ನು ವಿಧಿಸಿ ತಾತ್ವಿಕ ಅನುಮೋದನೆ ನೀಡುತ್ತದೆ. ಬಳಿಕ ಅವರು ಸಾಲಕ್ಕಾಗಿ ಬ್ಯಾಂಕ್‌ಗೆ ಅರ್ಜಿ ಸಲ್ಲಿಸುತ್ತಾರೆ. ಬ್ಯಾಂಕ್ ಹತ್ತಾರು ಕೋಟಿ ಸಾಲ ಕೊಡುತ್ತದೆ. ಬ್ಯಾಂಕ್ ಸಾಲವನ್ನೇ ನೆಪವಾಗಿಟ್ಟುಕೊಂಡು ಅಂತಿಮ ಅನುಮೋದನೆ ಕೊಡಿ ಎಂದು ಸಚಿವಾಲಯಕ್ಕೆ ದುಂಬಾಲು ಬೀಳುತ್ತಾರೆ. ಅನ್ಯ ಮಾರ್ಗವಿಲ್ಲದೆ ಸಚಿವಾಲಯವು ಯೋಜನೆಗೆ ಅಂತಿಮ ಅನುಮೋದನೆ ನೀಡಬೇಕಾಗುತ್ತದೆ. ಹೆದ್ದಾರಿ ಯೋಜನೆಗಳಲ್ಲಿ ಇದು ಹಲವು ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದೀಗ, ಜಲ ವಿದ್ಯುತ್ ಯೋಜನೆಗಳಿಗೂ ಈ ತಂತ್ರ ಅನುಸರಿಸಲು ಮುಂದಾಗಿದ್ದಾರೆ. ಇದೊಂದು ಅಪವಿತ್ರ ಮೈತ್ರಿ’ ಎಂದು ಪರಿಸರವಾದಿಗಳು ದೂರುತ್ತಾರೆ.

907 ಮೆಗಾವಾಟ್
ಕರ್ನಾಟಕದಲ್ಲಿರುವ ಸಣ್ಣ ಜಲ ವಿದ್ಯುತ್ ಯೋಜನೆಗಳ ಒಟ್ಟು ಸಾಮರ್ಥ್ಯ

ಹೆಚ್ಚು ಜಲ ವಿದ್ಯುತ್ ಯೋಜನೆಗಳಿರುವ ಜಿಲ್ಲೆಗಳು

ಜಿಲ್ಲೆ	ಮೆಗಾವಾಟ್
ದಕ್ಷಿಣ ಕನ್ನಡ	162
ಮಂಡ್ಯ	133
ಯಾದಗಿರಿ	116
ಹಾಸನ	104
ಉಡುಪಿ	68
ಶಿವಮೊಗ್ಗ	60

‘ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘನೆ’

ಸುತ್ತೋಲೆಗಳ ಮೂಲಕ ನಿರ್ಬಂಧಗಳನ್ನು ಸಡಿಲಗೊಳಿಸಿ ಪರಿಸರ ಅನುಮೋದನೆ ನೀಡುವ ತಂತ್ರಗಾರಿಕೆ ಅಳವಡಿಸಲು ಪರಿಸರ ಸಚಿವಾಲಯ ಹಲವು ಸಮಯದಿಂದ ಪ್ರಯತ್ನಿಸುತ್ತಿದೆ. ಜಲ ವಿದ್ಯುತ್ ಯೋಜನೆಗಳಿಗೆ ತಾತ್ವಿಕ ಅನುಮೋದನೆ ಪಡೆಯುವುದನ್ನು ಅನುವು ಮಾಡಿಕೊಡುವ ಈಗಿನ ಆದೇಶ ಇದರ ಮುಂದುವರಿದ ಭಾಗ. ಇದು ಅರಣ್ಯ (ಸಂರಕ್ಷಣೆ) ಕಾಯ್ದೆ 1980ರ ನಿಯಮಗಳ ಮತ್ತು ಸುಪ್ರೀಂ ಕೋರ್ಟ್ ಆದೇಶದ ಸ್ಪಷ್ಟ ಉಲ್ಲಂಘನೆ.

ಪ್ರವೀಣ್ ಭಾರ್ಗವ್, ವೈಲ್ಡ್‌ಲೈಫ್ ಫಸ್ಟ್‌ನ ಟ್ರಸ್ಟಿ

‘ವಿನಾಶಕಾರಿ ತೀರ್ಮಾನ’

ಅರಣ್ಯ, ಪರಿಸರ ಹಾಗೂ ವನ್ಯಜೀವಿಗಳ ಸಂರಕ್ಷಣೆಯ ಕಾನೂನು ಹಾಗೂ ನಿಯಮಗಳನ್ನು ದುರ್ಬಲಗೊಳಿಸಲು ಕೇಂದ್ರ ಸರ್ಕಾರ ತೆಗೆದುಕೊಂಡಿರುವ ಈ ತೀರ್ಮಾನ ಅತ್ಯಂತ ದುರದೃಷ್ಟಕರ. ಪರಿಸರ ಮೌಲ್ಯಮಾಪನ ಇಲ್ಲದೆ ಜಲ ವಿದ್ಯುತ್ ಯೋಜನೆಗಳಿಗೆ ಮೊದಲನೇ ಹಂತದ ಅನುಮತಿ ನೀಡುವುದು ಅರಣ್ಯ ಸಂರಕ್ಷಣಾ ಕಾಯ್ದೆಯ ಮೂಲ ಉದ್ದೇಶಕ್ಕೆ ತದ್ವಿರುದ್ಧವಾಗಿದೆ. ಈ ನಿರ್ಧಾರ ಅತ್ಯಂತ ವಿನಾಶಕಾರಿ. ಸರ್ಕಾರ ಕೂಡಲೇ ಇದನ್ನು ಹಿಂಪಡೆಯಬೇಕು

ಗಿರಿಧರ್ ಕುಲಕರ್ಣಿ, ಪರಿಸರ ಸಂರಕ್ಷಣಾವಾದಿ

ಆತ್ಮಹತ್ಯೆ ತಡೆಗೆ ಓಪನ್ ಬುಕ್ ಪರೀಕ್ಷೆ

ಒಂದನೇ ಪುಟದಿಂದ...


ಇದರಿಂದ ಪರೀಕ್ಷಾ ಅಕ್ರಮಗಳ ಸಂಖ್ಯೆ ಕಡಿಮೆಯಾಗಿದೆ. ಕೋವಿಡ್ ವೇಳೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವೂ ಇದೇ ವಿಧಾನ ಅನುಸರಿಸಿತ್ತು.

‘ಓಪನ್ ಬುಕ್ ಪರೀಕ್ಷೆಯಲ್ಲೂ ವಿದ್ಯಾರ್ಥಿಗಳು ಮನಸ್ಸು ಕೇಂದ್ರೀಕರಿಸಬೇಕಾಗುತ್ತದೆ. ಅಧ್ಯಯನ ಮಾಡಿರಬೇಕಾಗುತ್ತದೆ. ಸಮಿತಿಯ ವರದಿ ಸ್ವೀಕರಿಸಲಾಗಿದೆ. ಸಂಪೂರ್ಣ ಓದಿದ ನಂತರ ಶಿಫಾರಸುಗಳ ಕುರಿತು ಅಧಿಕಾರಿಗಳ ಜತೆ ಚರ್ಚಿಸಲಾಗುವುದು’ ಎನ್ನುತ್ತಾರೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್.

ಅಂಕಗಳ ಬದಲು ಗ್ರೇಡ್: ಈಗಿನ ಪರೀಕ್ಷಾ ಪದ್ಧತಿಯಲ್ಲಿ ಇರುವ ಅಂಕಗಳ ನೀಡುವಿಕೆ, ರ್‍ಯಾಂಕ್ ವ್ಯವಸ್ಥೆಯನ್ನು ಸಂಪೂರ್ಣ ಕೈಬಿಡಬೇಕು. ಸರಾಸರಿ ಅಂಕಗಳ ಆಧಾರದಲ್ಲಿ ಕೇವಲ ಗ್ರೇಡಿಂಗ್ ಪದ್ಧತಿ ಪರಿಚಯಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ವಿದ್ಯಾರ್ಥಿಗಳಲ್ಲಿ ಏಕಾಗ್ರತೆ, ಮಾನಸಿಕ ದೃಢತೆ ಮೂಡಿಸಲು ಕಾಲೇಜುಗಳಲ್ಲಿ ಪರಿಣತರನ್ನು ಒಳಗೊಂಡ ಯೋಗಕ್ಷೇಮ ಕೇಂದ್ರಗಳನ್ನು ತೆರೆಯಬೇಕು. ಮಾನಸಿಕ ಖಿನ್ನತೆಗಳಿಗೆ ಕಾರಣವಾಗುವ ಸಾಮಾಜಿಕ, ಕೌಟುಂಬಿಕ ಒತ್ತಡಗಳು, ಡ್ರಗ್ಸ್ ಮತ್ತಿತರ ವ್ಯಸನಗಳು, ಲಿಂಗ ತಾರತಮ್ಯ, ಲೈಂಗಿಕ ಕಿರುಕುಳಗಳು, ಅನಾರೋಗ್ಯಕರ ಸ್ಪರ್ಧೆಗಳ ನಿವಾರಣೆಗೂ ಒತ್ತು ನೀಡಬೇಕು ಎಂಬ ಸಲಹೆಗಳನ್ನು ನೀಡಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸಂತೋಷವಾಗಿ ಇರುವುದರ ಗುಟ್ಟು ಹೆಚ್ಚು ಬಯಸುವುದರಲ್ಲಿ ಇಲ್ಲ; ಕಡಿಮೆ ಇರುವುದರಲ್ಲೇ ತೃಪ್ತಿಪಡುವುದರಲ್ಲಿ ಇದೆ.

-ಸಾಕ್ರಟೀಸ್

ತಾರಾಲೋಕದ ಕಪ್ಪುರಂಧ್ರ ಶೋಧನೆಗೆ ಭಾರತದ ವಿಜ್ಞಾನಿಗಳಿಗೆ ಹೊಸ ದೀವಿಗೆ

ಹೊಸವರ್ಷದ ಸ್ವಾಗತಕ್ಕೆಂದು ಜಗತ್ತಿನೆಲ್ಲೆಡೆ ಬಣ್ಣಬಣ್ಣದ ರಾಕೆಟ್‌ಗಳು ಆಕಾಶವನ್ನು ಅಲಂಕರಿಸುತ್ತಿದ್ದಾಗ, ನಮ್ಮ ಹೆಮ್ಮೆಯ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಭರ್ಜರಿ ಪಿಎಸ್‌ಎಲ್‌ವಿ ರಾಕೆಟ್ಟನ್ನೇ ನಭೋಮಂಡಲಕ್ಕೆ ಚಿಮ್ಮಿಸಿತು. ಭೂಮಿಯಿಂದ 650 ಕಿಲೊಮೀಟರ್ ಎತ್ತರದ ಕಕ್ಷೆಗೆ ತನ್ನದೊಂದು ವಿಶೇಷ ಉಪಗ್ರಹವನ್ನು ಎತ್ತೊಯ್ದು ಸ್ಥಾಪಿಸಿತು. ವಿಶೇಷ ಏನೆಂದರೆ, ಇದನ್ನು ನಮ್ಮ ದೇಶದ ಸ್ವಂತದ ಅನುಕೂಲಕ್ಕಾಗಲೀ ನಮ್ಮ ಸಾಧನೆಯನ್ನು ಜಗತ್ತಿಗೆ ಸಾರುವ ಉದ್ದೇಶದಿಂದಾಗಲೀ ಮೇಲಕ್ಕೇರಿಸಿದ್ದಲ್ಲ. ಬದಲಿಗೆ, ನಮ್ಮಾಚಿನ ಬ್ರಹ್ಮಾಂಡದಲ್ಲಿ ಏನೇನಿವೆಯೆಂದು ಅರಿಯುವ ದಿಸೆಯಲ್ಲಿ ಇಡೀ ಮನುಕುಲಕ್ಕಿರುವ ಜ್ಞಾನದ ಹಸಿವೆಯನ್ನು ತುಸುಮಟ್ಟಿಗೆ ತಣಿಸಲೆಂದೇ ಬೆಂಗಳೂರಿನ ರಾಮನ್ ಸಂಶೋಧನಾ ಸಂಸ್ಥೆಯವರ ಪ್ರಸ್ತಾವದ ಮೇರೆಗೆ ರೂಪುಗೊಂಡ ಯೋಜನೆ ಇದು. ಈಗ ಕಕ್ಷೆಯೇರಿ ಕೂರುತ್ತಿರುವ 'ಎಕ್ಸ್‌ಪೊಸ್ಯಾಟ್' ಉಪಗ್ರಹ ತನ್ನ ಸುತ್ತಲಿನ ನಕ್ಷತ್ರಗಳ ಮಹಾಸಾಗರದಲ್ಲಿ ಅಲ್ಲಲ್ಲಿ ಹೊಮ್ಮುತ್ತಿರುವ ಎಕ್ಸ್ ಕಿರಣಗಳನ್ನು ಹೀರಿಕೊಳ್ಳುತ್ತ ಮುಂದಿನ ಐದು ವರ್ಷಗಳ ಕಾಲ ನಮ್ಮತ್ತ ಆ ಮಾಹಿತಿಗಳನ್ನು ರವಾನಿಸುತ್ತಿರುತ್ತದೆ. ಎಕ್ಸ್ ಕಿರಣಗಳು ಹೊಮ್ಮಲು ಕಾರಣವೇನು- ಅಲ್ಲಿ ಯಾವುದೋ ತಾರೆಯೊಂದು ಸ್ಫೋಟಗೊಂಡು ನಿಗಿನಿಗಿ ನ್ಯೂಟ್ರಾನ್ ನಕ್ಷತ್ರವಾಯಿತೆ ಅಥವಾ ಎರಡು ನಕ್ಷತ್ರಗಳು ಪರಸ್ಪರ ಪ್ರದಕ್ಷಿಣೆ ಹಾಕುತ್ತ ಯುಗ್ಮತಾರೆಯೊಂದು ಉದ್ಭವವಾಯಿತೆ ಅಥವಾ ಅವೆರಡೂ ತಂತಮ್ಮೊಳಗೆ ಬೆಸುಗೆಗೊಂಡು ಕಪ್ಪುರಂಧ್ರವಾಯಿತೆ ಅಥವಾ ಯುಗ್ಮತಾರೆಯೇ ತಾನಾಗಿ ಬೇರೊಂದು ನಿಗೂಢ ಕಪ್ಪುರಂಧ್ರದ ಸೆಳೆತಕ್ಕೆ ಸಿಲುಕಿ ಎಕ್ಸ್ ಕಿರಣಗಳ ರೂಪದಲ್ಲಿ ಆಕ್ರಂದನ ಹೊಮ್ಮಿಸುತ್ತಿದೆಯೆ ಎಂಬುದು ನಮಗೆ ತಿಳಿಯಬೇಕಿದೆ. ಕಪ್ಪುರಂಧ್ರ ಎಂದರೆ ತನ್ನ ಬೆಳಕನ್ನೂ ತಾನೇ ನುಂಗುತ್ತಿರುವ ದೈತ್ಯಶಕ್ತಿಯ ತಾಣವಾಗಿದ್ದು ಕೆಲವೊಮ್ಮೆ ಆಚೀಚಿನ ಬೃಹತ್ ತಾರೆಗಳನ್ನೂ ನುಂಗಿ ಹಾಕುತ್ತಿರುತ್ತದೆ. ನಾವು ಕಳಿಸಿದ ಎಕ್ಸ್‌ಪೊಸ್ಯಾಟ್ ತನ್ನ ಸ್ಕ್ಯಾನಿಂಗ್‌ನಲ್ಲಿ ಕಪ್ಪುರಂಧ್ರದ ಇರವನ್ನೇ ನಿಖರವಾಗಿ ಗುರುತಿಸಿದರಂತೂ ಅದು ಇನ್ನಷ್ಟು ಸಂಶೋಧನೆಗೆ ಹೊಸ ಬೆಳಕನ್ನು ತೋರಿಸಿದಂತಾಗುತ್ತದೆ. ತಾರೆಯೊಂದು ತನ್ನ ಭಾರದಿಂದ ತಾನೇ ಕುಸಿದು ಕಪ್ಪುಕುಳಿ ಆದೀತೆಂದು ಗಣಿತ ತರ್ಕದ ಆಧಾರದಲ್ಲೇ ಮೊದಲು ಸೂಚಿಸಿದ ಕೀರ್ತಿ ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಸುಬ್ರಹ್ಮಣ್ಯಂ ಚಂದ್ರಶೇಖರ್ ಅವರದಾಗಿದ್ದು, ಅವರ ಚಿಕ್ಕಪ್ಪ ಸರ್ ಸಿ.ವಿ. ರಾಮನ್ ಸ್ಥಾಪಿಸಿದ ಸಂಸ್ಥೆಯ ಮೂಲಕವೇ ಅಂಥ ಕಪ್ಪುರಂಧ್ರವೊಂದು ಖಚಿತವಾಗಿ ಪತ್ತೆಯಾದರೆ ಅದು ಭಾರತದ ಸಾಧನೆಗೆ ವಿಶೇಷ ಮೆರುಗು ಕೊಟ್ಟಂತಾಗುತ್ತದೆ. ಮೂರು ವರ್ಷಗಳ ಹಿಂದೆ ಅಮೆರಿಕದ ನಾಸಾ ಸಂಸ್ಥೆ ಹಾರಿಬಿಟ್ಟ 'ಇಕ್ಸ್‌ಪೆ' ಉಪಗ್ರಹವನ್ನು ಹೊರತುಪಡಿಸಿದರೆ ಎಕ್ಸ್ ಕಿರಣಗಳ ಅಧ್ಯಯನಕ್ಕೆ ಬೇರೆ ಯಾವ ಸಾಧನವೂ ಬಾಹ್ಯಾಕಾಶದಲ್ಲಿ ಇಲ್ಲ. ನಾಸಾದ ಸಾಧನವೂ ಇನ್ನೆರಡು ವರ್ಷಗಳಲ್ಲಿ ತನ್ನ ಶೋಧಕಾರ್ಯಕ್ಕೆ ವಿರಾಮ ಹೇಳಲಿದ್ದು ನಂತರ ಇಸ್ರೊದ ಎಕ್ಸ್‌ಪೊಸ್ಯಾಟ್ ಮಾತ್ರವೇ ಈ ಕೆಲಸವನ್ನು ಮುಂದುವರಿಸುವ ಏಕಮೇವ ಕಾಯವೆನ್ನಿಸಲಿದೆ.



ಇಸ್ರೊ ವಿಜ್ಞಾನಿಗಳ ಲೋಕಕಲ್ಯಾಣದ ಧೋರಣೆ ಶ್ಲಾಘನೀಯ

ನೇರ ಫಲಾಪೇಕ್ಷೆ ಇಲ್ಲದೆ ಕೇವಲ ಜ್ಞಾನಪ್ರಾಪ್ತಿಗೆಂದೇ ಖಗೋಲ ಅಧ್ಯಯನ ಕ್ಷೇತ್ರಕ್ಕೆ ಇಸ್ರೊ ತನ್ನ ಕೊಡುಗೆ ನೀಡಲು ಹೊರಟಿದ್ದು ಇದೇ ಮೊದಲೇನಲ್ಲ. 2015ರಲ್ಲೇ ಖಗೋಲ ಕಿರಣಗಳ ಅಧ್ಯಯನಕ್ಕೆಂದು 'ಆಸ್ಟ್ರೊಸ್ಯಾಟ್' ಎಂಬ ಉಪಗ್ರಹವನ್ನು ಹಾರಿಬಿಟ್ಟಿದ್ದು, ಅದು ತನ್ನ ಐದು ವರ್ಷಗಳ ಸೇವಾಮಿತಿಯನ್ನು ದಾಟಿ ಈಗಲೂ ಕ್ರಿಯಾಶೀಲವಾಗಿದೆ. ಸೂರ್ಯನನ್ನು ಕಣ್ಣಿಟ್ಟು ನೋಡಲೆಂದು ಇಸ್ರೊ ಹಾರಿಬಿಟ್ಟ 'ಆದಿತ್ಯ- ಎಲ್1' ಉಪಗ್ರಹ ತನ್ನ 15 ಲಕ್ಷ ಕಿಲೊಮೀಟರ್ ಪಯಣವನ್ನು ಮುಗಿಸಿ ಇದೇ ತಿಂಗಳ 6ರಂದು ನಿಗದಿತ ಬಿಂದುವಿನಲ್ಲಿ ಕೂರಲಿದೆ. ಇದೀಗ ಕಕ್ಷೆಗೇರಿದ ಎಕ್ಸ್‌ಪೊಸ್ಯಾಟ್ ಜೊತೆಗೇ ಸಂಶೋಧಕರ ಬಳಕೆಗೆಂದೇ ಪೊಯೆಮ್-3 ಹೆಸರಿನ ಇನ್ನೊಂದು ಕಾಯವನ್ನೂ ಹಾರಿಬಿಡಲಾಗಿದ್ದು ಅದರಲ್ಲಿ ಕೂರಿಸಿದ ಉಪಕರಣಗಳನ್ನು ಜಗತ್ತಿನ ಯಾರು ಬೇಕಾದರೂ ನಭೋಮಂಡಲದ ಅಧ್ಯಯನಕ್ಕೆ ಬಳಸಬಹುದಾಗಿದೆ. ಇಸ್ರೊ ವಿಜ್ಞಾನಿಗಳ ಈ ಲೋಕಕಲ್ಯಾಣದ ಧೋರಣೆಯೂ ಶ್ಲಾಘನೀಯವಾಗಿದೆ.

2024ರ ಇಡೀ ವರ್ಷವನ್ನು 'ಗಗನಯಾನದ ಸಿದ್ಧತೆಯ ವರ್ಷ' ಎಂತಲೇ ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಬಣ್ಣಿಸಿದ್ದಾರೆ. ಖಾಲಿ ನೌಕೆಗಳನ್ನು ಕಕ್ಷೆಗೇರಿಸಿ ಇಡಿಯಾಗಿ ಕೆಳಕ್ಕಿಳಿಸುವ ಪ್ರಯೋಗಗಳಿಗೇ ಈ ವರ್ಷ ಶ್ರೀಹರಿಕೋಟದ ರಾಕೆಟ್ ಚಟುವಟಿಕೆಗಳೆಲ್ಲ ಮೀಸಲಿರುತ್ತವೆ. 2025ರಲ್ಲಿ ಮಾನವಸಹಿತ ನೌಕೆಯನ್ನು ಅಂತರಿಕ್ಷಕ್ಕೇರಿಸಿ ಸುರಕ್ಷಿತವಾಗಿ ಕರೆತರುವ ಸಾಹಸದ ಪೂರ್ವತಯಾರಿಯಲ್ಲಿ ಇಸ್ರೊ ತೊಡಗಿರುತ್ತದೆ. ವಿಜ್ಞಾನ, ತಂತ್ರಜ್ಞಾನದ ಅನ್ವೇಷಣೆಗೆ ತಕ್ಕಷ್ಟು ಧನಸಹಾಯ, ಸತತ ತಾಲೀಮು, ತನ್ನ ಕೆಲಸದಲ್ಲಿ ಅಚಲ ನಂಬಿಕೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಆತ್ಮವಿಶ್ವಾಸ ಇರಬೇಕು. ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರದಲ್ಲಿ ಒಂದೊಂದೇ ಪಾವಟಿಗೆಯನ್ನು ದೃಢವಿಶ್ವಾಸದಿಂದ ಏರುತ್ತಿರುವ ಇಸ್ರೊಕ್ಕೆ ಅವೆಲ್ಲವೂ ಇವೆ; ಜೊತೆಗೆ ಇಡೀ ಭಾರತ ಪ್ರಜಾಸ್ತೋಮದ ಶುಭಹಾರೈಕೆಯೂ ಇದೆ.

ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಇರಲಿ ಆದ್ಯತೆ, ಬೇಕು ಒತ್ತಡಮುಕ್ತ ಕಲಿಕೆ

ಅಂಕ ಸ್ಪರ್ಧೆ ಮತ್ತು ವಾಸ್ತವಿಕ ಜಗತ್ತು



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ತನ್ನ ತೀವ್ರ ಪ್ರತಿಸ್ಪರ್ಧಿಯಾದ ಸಹಪಾಠಿಗೆ ಪರೀಕ್ಷೆಯ ದಿನ ಜ್ವರ ಬರಲಿ ಎಂದು ಮಗುವೊಂದು ದೇವರನ್ನು ಕೇಳಿಕೊಳ್ಳುವ ಸನ್ನಿವೇಶವನ್ನು ಕಲ್ಪಿಸಿಕೊಳ್ಳಿ. ಮಗುವಿಗೆ ತಾನು ಪ್ರಥಮ ಸ್ಥಾನದಲ್ಲಿ ಇರಬೇಕು ಎನ್ನುವುದಷ್ಟೇ ಗೊತ್ತಿರುವುದು. ಅದನ್ನು ಸಾಧಿಸುವ ವಿಧಾನದಲ್ಲಿ ಅದಕ್ಕೆ ಸುಲಭ ಎನಿಸಿದ್ದನ್ನು ದೇವರಲ್ಲಿ ಪ್ರಾರ್ಥಿಸಿದೆ. ಆದರೆ ತಾನು ಪ್ರಥಮ ಸ್ಥಾನ ಪಡೆಯುವ ಸಲುವಾಗಿ ಸಹಪಾಠಿ ಅನಾರೋಗ್ಯ ಕ್ಕೀಡಾಗಲಿ ಎಂದು ಬಯಸುವ ಮನಃಸ್ಥಿತಿ ಎಷ್ಟೊಂದು ಕ್ರೂರ ಎಂದು ಮಗುವಿಗಂತೂ ಹೊಳೆಯಲು ಸಾಧ್ಯವಿಲ್ಲ. ಹಿರಿಯರಿಗಾದರೂ ಹೊಳೆಯಬೇಕು. ಏಕೆಂದರೆ ಮಕ್ಕಳು ಈ ರೀತಿಯ ಪ್ರಾರ್ಥನೆ ಸಲ್ಲಿಸಬೇಕಾದ ಸ್ಥಿತಿಯನ್ನು ನಿರ್ಮಿಸಿದವರು ಹಿರಿಯರೇ.

ನೂರಕ್ಕೆ ತೊಂಬತ್ತು ಅಂಕ ಪಡೆದಾಗಲೂ ಮಕ್ಕಳನ್ನು ಹಿಂಸಿಸುವ ಪಾಲಕರಿದ್ದಾರೆ, 'ಇನ್ನುಳಿದ ಹತ್ತು ಅಂಕ ಯಾಕೆ ಬರಲಿಲ್ಲ' ಎಂದು! ಅಂಕಗಳ ಈ ಜಿದ್ದಾಜಿದ್ದು ಶೈಕ್ಷಣಿಕ ಆಡಳಿತ ಮತ್ತು ಸಾಮಾಜಿಕ ವ್ಯವಸ್ಥೆಯನ್ನೂ ಆವರಿಸಿದ್ದು, ಡಿಸ್ಟಿಂಕ್ಷನ್ ಇಷ್ಟು, ಪ್ರಥಮ ದರ್ಜೆ ಇಷ್ಟು ಎನ್ನುವ ಲೆಕ್ಕಾಚಾರಗಳಿಗೆ ಮಾಧ್ಯಮಗಳಲ್ಲೂ ಸ್ಥಾನವಿದೆ.


ಅಂಕಗಳ ಜಿದ್ದಾಜಿದ್ದು ನೂರಕ್ಕೆ ನೂರರಷ್ಟು ಉತ್ತೀರ್ಣರಾಗಬೇಕು ಎನ್ನುವ ಅಪೇಕ್ಷೆಗಿಂತ ಭಿನ್ನವಾದದ್ದು. ಎಲ್ಲರೂ ಉತ್ತೀರ್ಣರಾಗಬೇಕು ಎಂಬ ಪರಿಕಲ್ಪನೆಗೆ ಅದರದೇ ಶೈಕ್ಷಣಿಕ ಮಿತಿಗಳು ಇದ್ದಾಗಲೂ ಅದರಲ್ಲೊಂದು ಶೈಕ್ಷಣಿಕ ಕಾಳಜಿ ಇದೆ. ಅನುತ್ತೀರ್ಣ ಆಗುವುದರಿಂದ ಮಗುವಿನ ಆತ್ಮವಿಶ್ವಾಸ ಕುಗ್ಗುವಂತಾಗುತ್ತದೆ, ಅದಾಗಬಾರದು. ಅಲ್ಲದೆ, ಅದರಿಂದ ಮಗುವಿನ ಒಂದು ವರ್ಷ ಪೋಲಾಗುತ್ತದೆ, ವಿಕಾಸಕ್ಕೆ ತಡೆಯಾಗುತ್ತದೆ ಎನ್ನುವ ವಿಚಾರಗಳಲ್ಲಿ ಪ್ರಾಮಾಣಿಕ ಕಾಳಜಿಗಳಿವೆ. ಆದರೆ ಅಂಕಗಳ ಜಿದ್ದಾಜಿದ್ದಿನಲ್ಲಿ ಈ ಬಗೆಯ ಕಾಳಜಿಗಳಿಲ್ಲ. ಅದರಲ್ಲಿ, ಪೊಳ್ಳು ಪ್ರತಿಷ್ಠೆಯ ಸಾಮೂಹಿಕ ಶೈಕ್ಷಣಿಕ ತಪ್ಪಿಗೆ ಸಮರ್ಥನೆ ಮಾತ್ರ ಇದೆ.

ಜಿದ್ದಾಜಿದ್ದಿನ ಅಂಕದ ಉದ್ದೇಶವೇನು? ಒಳ್ಳೆಯ ಅಂಕಗಳಿಂದ ಒಳ್ಳೆಯ ಉದ್ಯೋಗ ಸಿಗುತ್ತದೆ ಎನ್ನುವುದು ಸಾಮಾನ್ಯ ಗ್ರಹಿಕೆಯಾಗಿದೆ. ಆದರೆ ನಿಜಕ್ಕೂ ವಾಸ್ತವ ಜಗತ್ತು ಹಾಗಿದೆಯೇ? ಸರ್ಕಾರಿ ನೇಮಕಾತಿಗಳೆಲ್ಲವೂ ಸಾಮಾನ್ಯವಾಗಿ ಈಗ ಅವುಗಳದೇ ಆದ ಸ್ಪರ್ಧಾತ್ಮಕ ಪರೀಕ್ಷೆಯನ್ನು ಹೊಂದಿದ್ದು, ಅದರಲ್ಲಿ ಪಡೆದ ಅಂಕಗಳು ನೇಮಕಾತಿಗೆ ಮಾನದಂಡಗಳಾಗಿವೆ. ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಅಕಡೆಮಿಕ್ ಪರೀಕ್ಷೆಗಳಲ್ಲಿ ಪಡೆದ ಅಂಕಗಳು ಪರಿಗಣನೆಗೆ ಒಳಗಾಗುವುದೇ ಇಲ್ಲ. ಪದವಿ ಉತ್ತೀರ್ಣರಾಗಿರಬೇಕು ಎಂಬುದಷ್ಟೇ ಅಕಡೆಮಿಕ್ ಅರ್ಹತೆಯಾಗಿ ಅಲ್ಲಿದೆ. ಉತ್ತೀರ್ಣತಾ ಪರೀಕ್ಷೆಯಲ್ಲಿ ಪಡೆದ ಅಂಕಗಳು ಮುಖ್ಯವಲ್ಲವೇ ಅಲ್ಲ. ಹಾಗಿದ್ದರೆ ಉತ್ತೀರ್ಣತಾ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದು ಉಪಯೋಗವೇನು? ಏನೂ ಇಲ್ಲ. ಒಂದು ವೇಳೆ ಅಕಡೆಮಿಕ್ ಪರೀಕ್ಷೆಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವಭಾವಿ ತರಬೇತಿಯ ರೂಪದಲ್ಲಿ ಸಂಘಟಿಸಲ್ಪಟ್ಟಿದ್ದರೆ ಆಗ ಅಕಡೆಮಿಕ್ ಪರೀಕ್ಷೆಗಳಲ್ಲಿನ ಒಳ್ಳೆಯ ಅಂಕಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಪಡೆಯಲು ಸಾಮರ್ಥ್ಯಗಳಾಗಿ ಒದಗಿಬರುತ್ತವೆ.

ಆದರೆ ಸದ್ಯದ ಅಕಡೆಮಿಕ್ ಪರೀಕ್ಷೆಗಳಿಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಪರೀಕ್ಷಾ ಕ್ರಮದಲ್ಲಾಗಲೀ ಅಧ್ಯಯನ ವಿಧಾನದಲ್ಲಾಗಲೀ ಹೊಂದಾಣಿಕೆಯೇ ಏರ್ಪಡುವುದಿಲ್ಲ. ಏಕೆಂದರೆ, ಅಕಡೆಮಿಕ್ ಪರೀಕ್ಷೆಗಳ ಸ್ವರೂಪವನ್ನು ಸ್ಪರ್ಧಾತ್ಮಕ ಪರೀಕ್ಷೆಯ ರೀತಿಯಲ್ಲಿ ಇರಿಸಿದರೆ ಶೇಕಡ 60-70ರಷ್ಟು ವಿದ್ಯಾರ್ಥಿಗಳೂ ಉತ್ತೀರ್ಣರಾಗಲು ಸಾಧ್ಯವಿಲ್ಲ. ಆದ್ದರಿಂದ ಇವೆರಡೂ ಬೇರೆ ಬೇರೆ ಸ್ವರೂಪವನ್ನೇ ಹೊಂದಿದ್ದು, ಆ ಕಾರಣದಿಂದಲೇ ಅಕಡೆಮಿಕ್ ಪರೀಕ್ಷೆಯಲ್ಲಿ ಎಷ್ಟು ಉತ್ತಮ ಅಂಕಗಳನ್ನು ಪಡೆದಿದ್ದರೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪ್ರತ್ಯೇಕ ತರಬೇತಿಯನ್ನು ಪಡೆಯಬೇಕಾಗುತ್ತದೆ, ಪ್ರತ್ಯೇಕ ಅಧ್ಯಯನವನ್ನು ಮಾಡಬೇಕಾಗುತ್ತದೆ.

ಎರಡನೆಯದು, ಖಾಸಗಿ ಉದ್ದಿಮೆಗಳ ನೇಮಕಾತಿಗಳು. ಅಲ್ಲಿ ಪ್ರತಿಯೊಂದು ಕಂಪನಿಯೂ ತನ್ನ ಅಗತ್ಯಕ್ಕೆ ತಕ್ಕ ಹಾಗೆ ಅಭ್ಯರ್ಥಿಯ ಸಾಮರ್ಥ್ಯವನ್ನು ತನ್ನದೇ ಆದ ಪ್ರತ್ಯೇಕ ಮಾನದಂಡದ ಆಧಾರದಲ್ಲಿ ಪರೀಕ್ಷಿಸಿ ನೇಮಕಾತಿಯನ್ನು ಮಾಡುತ್ತದೆ. ಕ್ಯಾಂಪಸ್ ಸೆಲೆಕ್ಷನ್‌ನಲ್ಲಿಯೂ ಆಯ್ಕೆಯನ್ನು ಕಂಪನಿ ತನಗೆ ಬೇಕಾದ ಮಾನದಂಡದ ಆಧಾರದಲ್ಲಿಯೇ ಮಾಡುತ್ತದೆ. ಅಂದರೆ ಅಕಡೆಮಿಕ್ ಪರೀಕ್ಷೆಯಲ್ಲಿ ಪಡೆದ ಉತ್ತಮ ಅಂಕಗಳಿಗೆ ಇಲ್ಲಿಯೂ ಗಮನಾರ್ಹ ಮಹತ್ವವೇನಿಲ್ಲ.

ಕಾಲೇಜುಗಳಿಗೆ ಪ್ರವೇಶ ಕೊಡುವಾಗಲೂ ಬಹಳಷ್ಟು ಸಂಸ್ಥೆಗಳು ತಮ್ಮದೇ ಆದ ಪ್ರವೇಶ ಪರೀಕ್ಷೆಯನ್ನು ನಡೆಸುತ್ತವೆ. ಅಲ್ಲಿಯೂ ಹಿಂದಿನ ಅಕಡೆಮಿಕ್ ಪರೀಕ್ಷೆಯಲ್ಲಿ ಪಡೆದ ಅಂಕಗಳಿಗೆ ಮಹತ್ವ ಇರುವುದಿಲ್ಲ. ಆದರೆ ಇನ್ನೂ ಹಲವು ಕಾಲೇಜುಗಳು ಹಿಂದಿನ ಅಕಡೆಮಿಕ್ ಪರೀಕ್ಷೆಯಲ್ಲಿ ವಿದ್ಯಾರ್ಥಿ ಪಡೆದ ಅಂಕಗಳ ಆಧಾರದಲ್ಲಿ ಪ್ರವೇಶ ಕೊಡುವ ಹಳೆಯ ಪದ್ಧತಿಯನ್ನು ಉಳಿಸಿಕೊಂಡಿವೆ. ಈ ಸಂದರ್ಭದಲ್ಲಿ ಅಕಡೆಮಿಕ್ ಪರೀಕ್ಷೆಯಲ್ಲಿ ಪಡೆದ ಉತ್ತಮ ಅಂಕಗಳಿಗೆ ಮಹತ್ವ ಸಿಗುತ್ತದೆ. ಆದರೆ ಇಲ್ಲಿರುವ ಪ್ರಶ್ನೆ, ಈ ರೀತಿ ಪ್ರವೇಶ ಕೊಡುವ ಪದ್ಧತಿ ವೈಜ್ಞಾನಿಕವೋ ಸಂಸ್ಥೆಗಳು ತಮ್ಮದೇ ಆದ ಪ್ರವೇಶ ಪರೀಕ್ಷೆ ನಡೆಸುವುದು ವೈಜ್ಞಾನಿಕವೋ ಎನ್ನುವುದು. ನಿಜವಾಗಿ, ಪ್ರವೇಶ ಪರೀಕ್ಷೆ ನಡೆಸುವುದೇ ಹೆಚ್ಚು ವೈಜ್ಞಾನಿಕವಾದದ್ದು. ಏಕೆಂದರೆ ಇವತ್ತು ಭಾರತದ ಶಿಕ್ಷಣವನ್ನು ವಿಶ್ವ ದರ್ಜೆಗೆ ಏರಿಸುವ ಉದ್ದೇಶವನ್ನು ಶಿಕ್ಷಣ ನೀತಿಗಳು ಹೊಂದಿವೆ ಮತ್ತು ಅದಕ್ಕೆ ತಕ್ಕಂತೆ ಹೊಸ ಹೊಸ ನಿರ್ದಿಷ್ಟ ಕೋರ್ಸ್‌ಗಳನ್ನು ಸಂಸ್ಥೆಗಳು ಒದಗಿಸುತ್ತಲೂ ಇವೆ. ಆಗ ಅಂತಹ ಕೋರ್ಸ್‌ಗಳಿಗೆ ಬೇಕಾದ ಸಾಮರ್ಥ್ಯವನ್ನು ಹಿಂದಿನ ಅಕಡೆಮಿಕ್ ಪರೀಕ್ಷೆಯು ಹೊಂದಿರಲು ಸಾಧ್ಯವಿಲ್ಲ. ಆ ಸಾಂಪ್ರದಾಯಿಕ ಪದ್ಧತಿಯನ್ನು ಕೈಬಿಟ್ಟು ಸಂಸ್ಥೆಗಳು ಪ್ರವೇಶ ಪರೀಕ್ಷೆಯನ್ನು ನಡೆಸುವುದೇ ವೈಜ್ಞಾನಿಕವಾಗಿದೆ.



ಸದ್ಯದ ಶೈಕ್ಷಣಿಕ ಸನ್ನಿವೇಶದಲ್ಲಿ ಅಕಡೆಮಿಕ್ ಪರೀಕ್ಷೆಗಳಲ್ಲಿ ಪಡೆಯುವ ಅಂಕಗಳು ಏನನ್ನು ಸೂಚಿಸುತ್ತಿವೆ? ಕಲಿಕಾ ದಕ್ಷತೆಗಿಂತ ಹೆಚ್ಚಾಗಿ ಪರೀಕ್ಷೆಯಲ್ಲಿ ಕೇಳಲಾಗುವ ಪ್ರಶ್ನೆಗಳಿಗೆ ನಿರ್ದಿಷ್ಟ ಪದಗಳಲ್ಲಿ ಬರೆದು ಉತ್ತರಿಸುವ ಕೌಶಲ ಎಷ್ಟಿದೆ ಎಂಬುದನ್ನು ಮಾತ್ರ ಸೂಚಿಸುತ್ತವೆ. ಅದೇ ಪ್ರಶ್ನೆಯನ್ನು ಮೌಖಿಕವಾಗಿ ಕೇಳಿದಾಗ ಸೂಕ್ತ ಮೌಖಿಕ ಸಂವಹನದಲ್ಲಿ ಅಭಿವ್ಯಕ್ತಪಡಿಸುವ ಕೌಶಲ ಇದೆಯೋ ಇಲ್ಲವೋ ಎಂಬುದನ್ನೂ ಸೂಚಿಸುವುದಿಲ್ಲ. ಹೀಗಿದ್ದಾಗ ಕಲಿಕಾ ದಕ್ಷತೆಯನ್ನು ಸೂಚಿಸುವುದಕ್ಕಂತೂ ಸಾಧ್ಯವಿಲ್ಲ. ಅಂದಮೇಲೆ ನೂರೋ ಇನ್ನೂರೋ ಪ್ರಶ್ನೆಗಳಿಗೆ ಬರೆಯುವ ಕೌಶಲ ಇದೆಯೇ ಎನ್ನುವುದೇ ಒಬ್ಬ ವ್ಯಕ್ತಿಯ ಜೀವನದ ಒಟ್ಟಾರೆ ದಿಕ್ಕುದೆಸೆಯನ್ನು ನಿರ್ಧರಿಸಲಾರದು. ಆದ್ದರಿಂದ ಅಕಡೆಮಿಕ್ ಪರೀಕ್ಷೆಯಲ್ಲಿ ಪಡೆಯುವ ಅಂಕಗಳಿಗೆ ತೋರಿಸುವ ಪ್ರಾಮುಖ್ಯವನ್ನು ಇಡೀ ಸಮಾಜ ಕೈಬಿಡಬೇಕಾದ ಅಗತ್ಯವಿದೆ. ಎಲ್ಲರೂ ಉತ್ತೀರ್ಣರಾಗಬೇಕು ಎನ್ನುವ ಮನಃಸ್ಥಿತಿ ಸಾಕಾದೀತು.

ಇದರರ್ಥ, ಅಂಕಗಳ ಜಿದ್ದಾಜಿದ್ದಿಯಿಂದ ಹೊರಗೆ ಬಂದು, ಉತ್ತೀರ್ಣರಾದರೆ ಸಾಕು ಎನ್ನುವಲ್ಲಿಗೆ ಅಕಡೆಮಿಕ್ ಕಲಿಕೆಯನ್ನು ಸೀಮಿತಗೊಳಿಸಿ, ಏನೂ ಮಾಡದೇ ಇರುವುದು ಎಂದಲ್ಲ. ಅಂಕಗಳಿಗಾಗಿನ ಪೈಪೋಟಿಯು ಮಕ್ಕಳಲ್ಲಿ ಪರಸ್ಪರ ಅಸಂತೋಷವನ್ನು ಬೆಳೆಸುತ್ತದೆ. ಅಂಕಗಳಿಗಾಗಿನ ಒತ್ತಡಗಳು ಮಕ್ಕಳಿಗೆ ಕಲಿಕೆಯನ್ನು ಆನಂದದ ಅನುಭವವಾಗಿಸುವ ಬದಲು ಹಿಂಸೆಯ ಅನುಭವವಾಗಿಸುತ್ತವೆ. ಪೋಷಕರು ಮತ್ತು ಅಧ್ಯಾಪಕರನ್ನು ಅತಿಯಾದ ಒತ್ತಡದಲ್ಲಿ ಇರಿಸುತ್ತವೆ. ಇವೆಲ್ಲದರಿಂದಾಗಿ ಮಕ್ಕಳಲ್ಲಿ ಕಲಿಕಾ ಅನುಭವಗಳು, ಪ್ರಶ್ನೋತ್ತರಗಳ ಹೊರತಾದ ಪಠ್ಯ ಮತ್ತು ಬದುಕಿನ ಚಟುವಟಿಕೆಗಳ ಕಲಿಕೆಯು ಕುಂಠಿತವಾಗುತ್ತವೆ. ಪೋಷಕರು ಮತ್ತು ಅಧ್ಯಾಪಕರು ಮಕ್ಕಳ ಸರ್ವಾಂಗೀಣ ವಿಕಾಸದ ಕಡೆಗೆ ಗಮನಿಸಿಕೊಳ್ಳಲು ಸಾಧ್ಯವಾಗದಂತೆ ಮಾಡುತ್ತವೆ.

ಅತ್ಯಧಿಕ ಅಂಕಗಳಿಗಾಗಿನ ಒತ್ತಡವನ್ನು ಇಲ್ಲವಾಗಿಸುವ ಮೂಲಕ ಮಕ್ಕಳು ನಿರಾಳ ಭಾವವನ್ನು ಹೊಂದುವಂತೆ ಮಾಡಬೇಕು. ಕಲಿಕೆಯನ್ನು ಹೆಚ್ಚಿಸಬೇಕು. ಅಂಕಗಳ ಒತ್ತಡಮುಕ್ತ ಕಲಿಕೆಯು ಕಲಿಕೆಯನ್ನು ಸಂತಸದಾಯಕ ಆಗಿಸುತ್ತದೆ. ಆಗ ಕಲಿಕೆಯ ಪರಿಣಾಮವಾದ ಸಾಮರ್ಥ್ಯ ಮಕ್ಕಳಲ್ಲಿ ಜಾಸ್ತಿಯಾಗುತ್ತದೆ. ಇದು ಭವಿಷ್ಯದ ಬದುಕಿಗೆ ಅಂಕಗಳಿಗಿಂತ ಹೆಚ್ಚು ಸಹಾಯಕ ಸಂಗತಿಯಾಗಿ ಬರುತ್ತದೆ. ಪೋಷಕರು ಮತ್ತು ಅಧ್ಯಾಪಕರು ಮಕ್ಕಳ ದೈಹಿಕ ಚಟುವಟಿಕೆಗಳನ್ನು ಗಮನಿಸಿ, ಅವರು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಿ ಬೆಳೆಯುವಂತೆ ಮಾಡಬೇಕು. ಮಕ್ಕಳ ವರ್ತನೆಗಳು, ಜೀವನಕೌಶಲಗಳು, ಭಾವನಾತ್ಮಕ ನಿರ್ವಹಣೆ, ಉತ್ಪಾದಕ ಸಾಮರ್ಥ್ಯಗಳನ್ನೆಲ್ಲ ಹೆಚ್ಚಿಸಲು ಸಾಧ್ಯವಾಗುತ್ತದೆ. ಆಗ ಒಟ್ಟಾರೆ ಶಿಕ್ಷಣವು ಅಂಕ ನಿರ್ದೇಶಿತ ಏಕಮುಖಿ ಚಲನೆಯಿಂದ ಹೊರಕ್ಕೆ ಬಂದು ಬಹುಮುಖಿಯಾಗಿ ಮಕ್ಕಳನ್ನು ವಿಕಾಸಗೊಳಿಸಲು ಸಾಧ್ಯವಾಗುತ್ತದೆ; ಸಾಧ್ಯವಾಗಬೇಕು.

ಚುರುಮುರಿ



ಸರಿಗನ್ನಡಂ ಬೋರ್ಡ್‌ಗೆ

• ಮಣ್ಣೆರಾಜು

'ನಾಮಫಲಕದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕೆಂಬ ಒತ್ತಾಯ, ಸರ್ಕಾರದ ಆದೇಶ ತಕ್ಕಮಟ್ಟಿಗೆ ಪಾಲನೆ ಆಗ್ತಿದೆ ಕಣ್ರೀ...' ಸುಮಿ ಸಡಗರಪಟ್ಟಳು.

'ಅಲ್ಲಲ್ಲಿ ಆಗ್ತಿದೆ, ಕನ್ನಡವನ್ನು ಬೋರ್ಡಿಗಿಲ್ಲದಂತೆ ಕಡೆಗಣಿಸಿದ್ದವರ ನಾಮಫಲಕಗಳಲ್ಲಿ ಕನ್ನಡ ಪದ ಬೋರ್ಡಿಗೆ ಬಂದಿದೆ' ಅಂದ ಶಂಕ್ರಿ.

'ಬೋರ್ಡ್ ವಿಚಾರವಾಗಿ ಸೀರೆ ಅಂಗಡಿಯ ಓನರ್‌ಗೆ ಹೆಂಗಸರು ತರಾಟೆ ತೆಗೆದುಕೊಂಡರಂತೆ!'

'ಏಕೆ? ಅಂಗಡಿಗೆ ಕನ್ನಡ ಬೋರ್ಡ್ ಹಾಕಬೇಕು ಅಂತನಾ?'

'ಅಲ್ಲಾ, ಹಾಕಿರುವ ಕನ್ನಡ ಬೋರ್ಡ್ ಬದಲಾಯಿಸಿ ಅಂತ. ಅಂಗಡಿಯ 'ಸ್ಯಾರಿ ಬಜಾರ್' ಹೆಸರನ್ನು 'ಸೀರೆ ಬಜಾರಿ' ಅಂತ ಕನ್ನಡದಲ್ಲಿ ಬೋರ್ಡ್ ಬರೆಸಿದ್ದರಂತೆ'.

'ಇನ್ನೊಂದು ಕಡೆ 'ಸಿಟಿಜನ್ ಟಿಫನ್ ರೂಂ' ಹೆಸರನ್ನು 'ಸಿಟಿಜನ್ ದಫನ್ ರೂಂ' ಅಂತ ಕನ್ನಡದಲ್ಲಿ ಬೋರ್ಡ್ ಬರೆಯಲಾಗಿದೆ'.

'ಬ್ಯಾಂಗಲ್ ಸ್ಟೋರ್ ಅನ್ನು ಕನ್ನಡಕ್ಕೆ ಅನುವಾದಿಸಲು ಹೋಗಿ 'ಬಾಳೆ ಅಂಗಡಿ' ಅಂತ ಬರೆಸಿದ್ದಾರೆ. ಪಕ್ಕದ ಸ್ನ್ಯಾಕ್ಸ್ ಸೆಂಟರ್ ಬೋರ್ಡ್ ಕನ್ನಡೀಕರಣಗೊಂಡು 'ಸ್ನೇಕ್ಸ್ ಸೆಂಟರ್, ನಮ್ಮಲ್ಲಿ ಎಲ್ಲಾ ಬಗೆಯ ಸ್ನೇಕ್ಸ್ ದೊರೆಯುತ್ತವೆ' ಎಂದು ಬರೆದಿದ್ದಾರೆ'.

'ಹೋಟೆಲ್‌ವೊಂದರಲ್ಲಿ 'ವೂಟ ತಯಾರಾಗಿದೆ' ಎಂದು ಬೋರ್ಡ್ ಬರೆದು ಆಭಾಸ ಮಾಡಿದ್ದಾರೆ. ಇನ್ನೊಂದು ಹೋಟೆಲ್‌ನಲ್ಲಿ 'ನಾರ್ಥ್ ಇಂಡಿಯನ್ ಮೇಲ್ಸ್ ಸಿಗುತ್ತದೆ' ಎಂಬ ಬೋರ್ಡ್ ಇದೆಯಂತೆ'.

'ಕನ್ನಡ ಬೋರ್ಡ್‌ಗಳಲ್ಲಿನ ಆಭಾಸ ತಪ್ಪಬೇಕು. ಲೋಪಾಯುಕ್ತ ತನಿಖೆ ನಡೆಸಿ ಬೋರ್ಡ್‌ಗಳ ಕನ್ನಡ ಲೋಪ ಸರಿಪಡಿಸಲು ತಿದ್ದುಪಡಿ ಆಂದೋಲನ ಮಾಡಬೇಕಾಗುತ್ತದೆ...'

'ಸರ್ಕಾರ ಬೋರ್ಡ್ ಕಾವಲು ಸಮಿತಿ ರಚನೆ ಮಾಡಬೇಕು, ಬೋರ್ಡ್‌ಗಳಲ್ಲಿ ಕನ್ನಡಕ್ಕೆ ಕಳಂಕವಾಗದಂತೆ ಕಣ್ಗಾವಲು ವಹಿಸಿ ಕನ್ನಡವನ್ನು ಕಾಪಾಡಬೇಕು'.

'ಹೌದು, ಬೋರ್ಡ್‌ಗಳಲ್ಲಿ ಶುದ್ಧ ಕನ್ನಡ ರಾರಾಜಿಸಲಿ, ಸಿರಿಗನ್ನಡಂ ಗೆಲ್ಗೆ, ಸರಿಗನ್ನಡಂ ಬೋರ್ಡ್‌ಗೆ...' ಎಂದು ಜೈಕಾರ ಹಾಕಿದಳು ಸುಮಿ.

ದಿನದ ಟ್ವೀಟ್

ಈಗ ಕೆದಕಿದ್ದೇಕೆ?



ರಾಮಮಂದಿರ ಉದ್ಘಾಟನೆಗೆ ಸಿದ್ಧವಾಗಿರುವ ಈ ಸಂದರ್ಭದಲ್ಲಿ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು 30 ವರ್ಷಗಳಷ್ಟು ಹಳೆಯದಾದ ಪ್ರಕರಣವನ್ನು ಕೆದಕಿ, ಹುಬ್ಬಳ್ಳಿಯ ಹಿಂದೂ ಕರಸೇವಕರನ್ನು ಬಂಧಿಸಿರುವುದು ಅತ್ಯಂತ ಖಂಡನೀಯ. ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣ ಆಗುತ್ತಿರುವುದನ್ನು ಸಹಿಸಲು ಕಾಂಗ್ರೆಸ್‌ನವರಿಗೆ ಆಗುತ್ತಿಲ್ಲ.

ಬಸವರಾಜ ಬೊಮ್ಮಾಯಿ, ಬಿಜೆಪಿ ಶಾಸಕ

ಕಿಡಿನುಡಿ



ರಾಮನ ವಿಚಾರವನ್ನು ರಾಜಕೀಯಕ್ಕೆ ಬಳಸಿಕೊಳ್ಳುವವರನ್ನು ರಾಮನೇ ನೋಡಿಕೊಳ್ಳಲಿ. ಒಳ್ಳೆಯದು ಮಾಡುವ ಪ್ರತಿಯೊಬ್ಬರಲ್ಲೂ ದೇವರನ್ನು ಕಾಣುವ ಸಂಸ್ಕೃತಿ ನಮ್ಮದು. ದೇವರ ಹೆಸರಿನಲ್ಲಿ ರಾಜಕೀಯ ಮಾಡುವುದು ಬಿಜೆಪಿಯವರ ಸಂಸ್ಕೃತಿ.

ಮಂಕಾಳ ವೈದ್ಯ, ಮೀನುಗಾರಿಕೆ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 3-1-1999

• **ಗುಜರಾತ್ ಹಿಂಸಾಚಾರ ತಡೆ- ರಾಷ್ಟ್ರಪತಿಗೆ ಕಾಂಗ್ರೆಸ್ ಮನವಿ**

ನವದೆಹಲಿ, ಜ. 2 – ಗುಜರಾತ್‌ನಲ್ಲಿ ಅಲ್ಪಸಂಖ್ಯಾತ ಕ್ರೈಸ್ತರ ಮೇಲೆ ನಿರಂತರವಾಗಿ ನಡೆಯುತ್ತಿರುವ ಹಿಂಸಾಚಾರವನ್ನು ನಿಲ್ಲಿಸುವಂತೆ ಕೇಂದ್ರ ಮತ್ತು ಗುಜರಾತ್‌ನ ಕೇಶುಭಾಯ್ ಪಟೇಲ್ ನೇತೃತ್ವದ ಸರ್ಕಾರಕ್ಕೆ ಸ್ಪಷ್ಟ ಆದೇಶ ನೀಡಬೇಕು ಎಂದು ಕಾಂಗ್ರೆಸ್ ಪಕ್ಷವು ರಾಷ್ಟ್ರಪತಿಯವರನ್ನು ಒತ್ತಾಯಿಸಿದೆ.

ರಾಜ್ಯಸಭೆಯಲ್ಲಿನ ವಿರೋಧಿ ನಾಯಕ ಡಾ. ಮನಮೋಹನ್ ಸಿಂಗ್ ನೇತೃತ್ವದ ನಾಲ್ಕು ಮಂದಿಯ ಕಾಂಗ್ರೆಸ್ ನಿಯೋಗವು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರನ್ನು ಭೇಟಿಯಾಗಿ, ಗುಜರಾತ್‌ನಲ್ಲಿ ಕ್ರೈಸ್ತರ ವಿರುದ್ಧ ಹಿಂದೂ ಜಾಗರಣ ಮಂಚ್, ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ಕಾರ್ಯಕರ್ತರು ಹಿಂಸಾಚಾರ ನಡೆಸುತ್ತಿದ್ದು, ಅನೇಕ ಕಡೆ ಅವರ ಪ್ರಾರ್ಥನಾ ಮಂದಿರಗಳಾದ ಚರ್ಚ್‌ಗಳಿಗೆ ಬೆಂಕಿ ಹಚ್ಚಿದ್ದರೂ ರಾಜ್ಯ ಸರ್ಕಾರ ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಎಂದು ಆರೋಪಿಸಿದೆ.

50 ವರ್ಷಗಳ ಹಿಂದೆ

ಗುರುವಾರ, 3-1-1974

• **3 ಕನ್ನಡ ಕೃತಿಗೆ ಕೇಂದ್ರದ ಪ್ರಶಸ್ತಿ**

ನವದೆಹಲಿ, ಜ. 2 – ಕನ್ನಡದಲ್ಲಿ ಬರೆದ ಮೂರು ಕೃತಿಗಳು ಕೇಂದ್ರ ಶಿಕ್ಷಣ ಖಾತೆ ನೀಡುವ ತಲಾ ಒಂದು ಸಾವಿರ ರೂ. ಬಹುಮಾನಕ್ಕೆ ಆಯ್ಕೆಯಾಗಿವೆ. ವಿವಿಧ ಭಾಷೆಗಳಲ್ಲಿ ಬರೆದ ಇನ್ನಿತರೆ ಐದು ಕೃತಿಗಳು ಆಯ್ಕೆಯಾಗಿವೆ.

ತಮ್ಮ ಮಾತೃ ಭಾಷೆಯಲ್ಲದ ಇನ್ನೊಂದು ಭಾಷೆಯಲ್ಲಿ ಬರೆದ ಕೃತಿಗಳಿಗೆ ಬಹುಮಾನ ಕೊಡುವ ರಾಷ್ಟ್ರೀಯ ಭಾವೈಕ್ಯ ಯೋಜನೆ ಅನ್ವಯ 1972-73ರ ಸಾಲಿನ ಬಹುಮಾನಗಳಿಗೆ ಈಗ ಆಯ್ಕೆ ಮಾಡಲಾಗಿದೆ.

ಕನ್ನಡದಲ್ಲಿ 'ಚಾರು ಚಂದ್ರಲೇಖ' ಕಥಾನಕ ಬರೆದ ಡಾ. ಎನ್.ಎಸ್. ದಕ್ಷಿಣಾಮೂರ್ತಿ (ಮಾತೃಭಾಷೆ-ತೆಲುಗು), 'ಗಂಧ-ಕೇಸರ' ಕನ್ನಡ ಕವನ ಸಂಕಲನದ ಕರ್ತೃ ಪ್ರೊ. ಎಂ. ಅಂಬರಅಲೀ (ಮಾತೃಭಾಷೆ-ಉರ್ದು) ಮತ್ತು 'ಇಲ್ಲದ್ದು' ಕನ್ನಡ ಕವನ ಸಂಕಲನದ ಕರ್ತೃ ಶಿವಪ್ರಕಾಶ್ (ಮಾತೃಭಾಷೆ-ತೆಲುಗು) ಅವರು ಬಹುಮಾನ ವಿಜೇತರಾಗಿದ್ದಾರೆ.

ಉರ್ದು ಕವನ ಸಂಕಲನ 'ಹುಸ್ನ್-ಇ-ಇರ್ಫಾನ್'ನ ಕರ್ತೃ ಡಾ. ಕೆಂಬಾವಿ ಮುದ್ದಣ್ಣ (ಮಾತೃಭಾಷೆ-ಕನ್ನಡ) ಅವರಿಗೂ ಒಂದು ಸಾವಿರ ರೂ.ನ ಈ ಬಹುಮಾನ ಲಭಿಸಿದೆ.

• **ಬಲಪ್ರಯೋಗದ ಮೂಲಕ ಸಮಾಜವಾದಿ ಸಮಾಜ ಅಸ್ತಿತ್ವಕ್ಕೆ ಬಂದೀತು: ರಾಷ್ಟ್ರಪತಿ ಎಚ್ಚರಿಕೆ**

ಮೈಸೂರು: ಜ. 2 – ಶಾಂತಿಯುತ ಮಾರ್ಗಗಳಿಂದ ಶೀಘ್ರವಾಗಿ ಸಮಾಜವಾದಿ ಸಮಾಜ ಸ್ಥಾಪನೆಗೆ ನಾವು ಶ್ರಮಿಸದಿದ್ದರೆ ಪರಿಸ್ಥಿತಿ ಕೈಮೀರಿ ಬಲಪ್ರಯೋಗದ ಮೂಲಕ ಸಮಾಜವಾದಿ ಸಮಾಜ ಅಸ್ತಿತ್ವಕ್ಕೆ ಬರುವ ಭೀತಿಯಿದೆ ಎಂದು ರಾಷ್ಟ್ರಪತಿ ವಿ.ವಿ.ಗಿರಿ ಅವರು ಇಂದು ಇಲ್ಲಿ ಎಚ್ಚರಿಸಿದರು.

ಸಂಗತ

ಸದ್ದು, ಸಂಭ್ರಮ, ಸಂಕಟ

ಮಾನವ ತನ್ನ ಮೋಜಿಗಾಗಿ ಸುಡುವ ಸಿಡಿಮದ್ದುಗಳ ಕಾರಣದಿಂದ ಹೆಚ್ಚು ತೊಂದರೆ ಅನುಭವಿಸುವುದು ಪಶು–ಪಕ್ಷಿಗಳು

• ಡಾ. ಮುರಳೀಧರ ಕಿರಣಕೆರೆ

ಆಲ್ಸೇಶಿಯನ್ ತಳಿಯ ಆ ಶ್ವಾನವನ್ನು ಆಸ್ಪತ್ರೆಗೆ ಕರೆತಂದ ಯುವತಿಯ ಮುಖ ಬಾಡಿತ್ತು. ಹಿಂದಿನ ದಿನ ಅದಕ್ಕೆ ಗರ್ಭಪಾತವಾಗಿತ್ತು. ದಿನ ತುಂಬದ ನಾಲ್ಕು ಮರಿಗಳೂ ಹುಟ್ಟುವಾಗಲೇ ಅಸುನೀಗಿದ್ದವು!

'ಮೂರು ದಿನದಿಂದ ಸರಿಯಾಗಿ ಊಟ ಮಾಡ್ತಿಲ್ಲ. ಒತ್ತಾಯದಿಂದಲೇ ತಿನ್ನಿಸಬೇಕು. ತುಂಬಾ ಮಂಕಾಗಿದೆ. ಸ್ವಲ್ಪ ಶಬ್ದ ಆದ್ರೂ ಸಾಕು ನಡುಗಕ್ಕೆ ಶುರುಮಾಡುತ್ತೆ' ತನ್ನ ಮುದ್ದು ಪ್ರಾಣಿಯ ಪರಿಸ್ಥಿತಿ ವಿವರಿಸುವಾಗ ಒಡತಿಯ ಕಂಗಳು ತುಂಬಿಕೊಂಡಿದ್ದವು. ಮತ್ತಷ್ಟು ಮಾಹಿತಿ ಕಲೆಹಾಕುತ್ತಿದ್ದಂತೆಯೇ ಆ ಶ್ವಾನಕ್ಕೆ ಮಾನಸಿಕ ಆಘಾತವಾಗಿರುವುದು ಖಚಿತವಾಗಿತ್ತು. ಯಾವುದೋ ಸಂಭ್ರಮಕ್ಕೆ ಪಕ್ಕದ ಮನೆಯವರು ಹಚ್ಚಿದ ಪಟಾಕಿಗಳ ಪರಿಣಾಮವಿದು. ಕಿವಿಗಪ್ಪಳಿಸಿದ ಭಾರಿ ಸದ್ದಿಗೆ ಬೆದರಿದ ನಾಯಿಯ ಸೂಕ್ಷ್ಮ ಮನಸ್ಸಿಗೆ ಗಾಸಿಯಾಗುವುದರ ಜೊತೆಗೆ ರಸದೂತಗಳು ಏರುಪೇರಾಗಿ ಗರ್ಭ ಜಾರಿತ್ತು. ಪ್ರಾಣಿಗಳಲ್ಲಿ ಆಪ್ತಸಮಾಲೋಚನೆಗೆ ಮಿತಿಗಳಿವೆ. ಶೀಘ್ರ ಚೇತರಿಕೆಗೆ ಮತ್ತಷ್ಟು ನಿಕಟ ಸಾಂಗತ್ಯದ ಅಗತ್ಯವನ್ನು ಆ ಯುವತಿಗೆ ವಿವರಿಸಿದೆ.

ನಮ್ಮ ಪಕ್ಕದ ಮನೆಯ ನಾಯಿಯೂ ಶಬ್ದದ ಅಬ್ಬರಕ್ಕೆ ತೀವ್ರವಾಗಿ ಪ್ರತಿಕ್ರಿಯಿಸುತ್ತದೆ. ಸೌಮ್ಯ ಸ್ವಭಾವದ ಅದು ಸಿಡಿಮದ್ದಿನ ಸದ್ದಿಗೆ ಬೆಚ್ಚಿಬಿದ್ದು ಕೂಗಲು ಆರಂಭಿಸುತ್ತದೆ. ಪಟಾಕಿ ಶಬ್ದ ಸಂಪೂರ್ಣ ನಿಲ್ಲುವವರೆಗೂ ಬಾಯಿ ಮುಚ್ಚದು. ಇದನ್ನು ಕಂಡಾಗಲೆಲ್ಲಾ ಸಂಕಟವಾಗುತ್ತದೆ! ಚಿಕಿತ್ಸೆಗೆಂದು ಕರೆತಂದ ಮತ್ತೊಂದು ನಾಯಿಯ ದೇಹದಲ್ಲೆಲ್ಲಾ ದೊಡ್ಡ ದೊಡ್ಡ ಗುಳ್ಳೆಗಳು. ಕೆಲವು ಒಡೆದು ವ್ರಣಗಳಾಗಿದ್ದವು. ಇದಕ್ಕೆ ಕಾರಣ ಸಹ ಪಟಾಕಿ ಸದ್ದೇ. ಸರಣಿ ಸ್ಫೋಟಕ್ಕೆ ಬೆದರಿ ಕುತ್ತಿಗೆಯ ಬೆಲ್ಟ್ ತುಂಡರಿಸಿಕೊಂಡು ಹೊರಗೋಡಿದ್ದು, ಮೂರು ದಿನಗಳ ನಂತರವಷ್ಟೇ ಮರಳಿತ್ತು. ಕಾಡಿನಲ್ಲಿ ಕೀಟಗಳಿಂದ ಕಚ್ಚಿಸಿಕೊಂಡು ನಂಜೇರಿ ಪರಿಸ್ಥಿತಿ ವಿಷಮಿಸಿತ್ತು!

ಮಾನವ ತನ್ನ ಮೋಜಿಗಾಗಿ ಸುಡುವ ಸಿಡಿಮದ್ದುಗಳ ಕಾರಣ ಪ್ರತಿವರ್ಷವೂ ಇಂತಹದ್ದೇ ಸಾಲು ಸಾಲು ಅವಗಡಗಳು. ಹೌದು, ಖಗ-ಮೃಗಗಳಲ್ಲಿ ಪಟಾಕಿಯ ದುಷ್ಪರಿಣಾಮಗಳು ಜಾಸ್ತಿ. ಇದಕ್ಕೆ ಪ್ರಮುಖ ಕಾರಣ ಅವುಗಳ ಸೂಕ್ಷ್ಮ ಶ್ರವಣೇಂದ್ರಿಯ. ಮಾನವನಿಗೆ ಹೋಲಿಸಿದರೆ ಇವುಗಳ ಶಬ್ದಗ್ರಹಣ ಸಾಮರ್ಥ್ಯ ಹಲವು ಪಟ್ಟು ಹೆಚ್ಚು. ನಮ್ಮ ಕಿವಿಗೆ ಬೀಳದ ಅತಿ ಸಣ್ಣ ಶಬ್ದ ತರಂಗಗಳನ್ನೂ ಇವು ಗ್ರಹಿಸಬಲ್ಲವು. ಪಶುಗಳು ತಮ್ಮ ಅಗಲವಾದ ಹೊರಗಿವಿಗಳನ್ನು ನಿಮಿರಿಸಿ ಆ್ಯಂಟೆನಾದ ರೂಪದಲ್ಲಿ ಬೇಕಾದೆಡೆ ತಿರುಗಿಸಿ ಸ್ಪಷ್ಟವಾಗಿ ಸದ್ದು ಕೇಳಬಲ್ಲವು. ಬೇಟೆಯಾಡಲು, ಶತ್ರುಗಳಿಂದ ರಕ್ಷಿಸಿಕೊಳ್ಳಲು ಪ್ರಕೃತಿ ನೀಡಿದ ವಿಶಿಷ್ಟ ವರದಾನವಿದು. ಆದರೆ ಮಾನವನ ವಿಕೃತಾನಂದದಿಂದ ಈ ವರವೇ ಅವುಗಳಿಗೆ ಶಾಪ ಆಗುತ್ತಿರುವುದು ನಿಜಕ್ಕೂ ದುರಂತ.

ಅಧಿಕ ತೀವ್ರತೆಯಲ್ಲಿ ಕಿವಿಗಪ್ಪಳಿಸುವ ಶಬ್ದದಿಂದ ಪಶುಗಳು ದಿಕ್ಕಾಪಾಲಾಗಿ ಓಡುತ್ತವೆ. ಭಯದಿಂದ ಆಕ್ರಮಣಕ್ಕೆ ಮುಂದಾಗುವುದೂ ಉಂಟು. ಓಡುವಾಗ ಗಾಯಗೊಂಡ, ಕಾಲು ಮುರಿದುಕೊಂಡ, ವಾಹನಗಳಿಗೆ ಸಿಲುಕಿ ಸಾವನ್ನಪ್ಪಿರುವ ಪ್ರಕರಣಗಳು ಹಲವು. ಬೆದರಿದ ಹಸುಗಳಲ್ಲಿ ಅಧಿಕ ಪ್ರಮಾಣದಲ್ಲಿ ಸ್ರವಿಸುವ ಅಡ್ರಿನಲಿನ್ ರಸದೂತ, ಹಾಲು ಸ್ರವಿಸಲು ಅಗತ್ಯವಾದ ಆಕ್ಸಿಟೋಸಿನ್ ಹಾರ್ಮೋನಿಗೆ ತಡೆಯೊಡ್ಡುವುದರಿಂದ ಹಾಲಿನ ಇಳುವರಿಯೂ ಕುಸಿಯುತ್ತದೆ. ಪದೇಪದೇ ಭಾರಿ ಸದ್ದು ಅಪ್ಪಳಿಸುತ್ತಿದ್ದರೆ ಪಶು, ಪಕ್ಷಿಗಳು ಹೃದಯಾಘಾತದಿಂದ ಸಾವನ್ನಪ್ಪುವುದೂ ಉಂಟು. ಅಬ್ಬರದ ಸಂಗೀತವೂ ಸಿಡಿಮದ್ದುಗಳಂತೆ ಕೆಡುಕು ತರುತ್ತಿರುವುದು ಮತ್ತೊಂದು ಆತಂಕಕಾರಿ ಬೆಳವಣಿಗೆ. ಮೆರವಣಿಗೆ, ಜಾತ್ರೆ, ಮನರಂಜನಾ ಕಾರ್ಯಕ್ರಮಗಳಲ್ಲಿ ಡಿ.ಜೆಯಂತಹ ಕಿವಿಗಪ್ಪಳಿಸುವ ಸಂಗೀತ ಮೊಳಗಿಸುತ್ತಾ ಹುಚ್ಚೆದ್ದು ಕುಣಿಯುವುದು ಈಗೆಲ್ಲಾ ಸಾಮಾನ್ಯ ದೃಶ್ಯ. ಸಾಮಾನ್ಯವಾಗಿ 90 ಡೆಸಿಬಲ್‌ಗಿಂತ ಹೆಚ್ಚಿನ ಸಪ್ಪಳ ಕಿವಿಯ ಮೇಲೆ ಬಿದ್ದರೆ ಅದು ಅಪಾಯಕಾರಿ ಎಂದು ಪರಿಗಣಿತವಾಗಿದೆ. ಪಟಾಕಿ, ಡಿ.ಜೆ. ಸಿಸ್ಟಂಗಳಿಂದ ಹೊರಹೊಮ್ಮುವ ಶಬ್ದ 140 ಡೆಸಿಬಲ್‌ಗಿಂತಲೂ ಅಧಿಕ. ಈ ತೀವ್ರತೆಯ ಸದ್ದು ಅತೀವ ಒತ್ತಡಕಾರಿ.



60 ಡೆಸಿಬಲ್‌ಗಿಂತಲೂ ಹೆಚ್ಚಿನ ಸಂಗೀತ ಅಥವಾ ಶಬ್ದವನ್ನು ನಿರಂತರವಾಗಿ ಕೇಳಿದವರಲ್ಲಿ ಅಮಿಗ್ಡಾಲಾ ಸಕ್ರಿಯವಾಗಿರುವುದು ಪತ್ತೆಯಾಗಿದೆ. ಇಂತಹ ಒತ್ತಡವನ್ನು ನಿಭಾಯಿಸಲು ದೇಹವು ಕೆಲವು ಹಾರ್ಮೋನ್‌ಗಳನ್ನು ಬಿಡುಗಡೆ ಮಾಡುತ್ತದೆ. ಪರಿಣಾಮವಾಗಿ ರಕ್ತದೊತ್ತಡ ಏರುತ್ತದೆ. ಹೃದಯಬಡಿತ, ರಕ್ತಪರಿಚಲನೆಯಲ್ಲಿ ಏರುಪೇರಾಗುತ್ತದೆ. ಇದು ಪಾರ್ಶ್ವವಾಯು, ಹೃದಯಾಘಾತದಂತಹ ಅಪಾಯಕ್ಕೆ ತಳ್ಳಬಹುದು ಎನ್ನುತ್ತದೆ ವೈಜ್ಞಾನಿಕ ಅಧ್ಯಯನ.

ಮಾನವನಿಗೆ ಹೋಲಿಸಿದರೆ ಪಶು-ಪಕ್ಷಿಗಳ ಸ್ಥಿತಿ ಮತ್ತಷ್ಟು ಶೋಚನೀಯ. ಸದ್ದು, ಅಬ್ಬರದ ಮೂಲ ಹಾಗೂ ಕಾರಣ ಅವುಗಳ ಅರಿವಿನ ಪರಿಧಿಗೆ ನಿಲುಕದಿರುವುದರಿಂದ ಭೀತಿಯ ಮಟ್ಟ ಜಾಸ್ತಿ. ಹಾಗಾಗಿಯೇ ಅವುಗಳಲ್ಲಿ ಹಠಾತ್ ಸಾವುಗಳೂ ಹೆಚ್ಚು!

ಹಬ್ಬ, ಜಾತ್ರೆ, ವಿಜಯೋತ್ಸವ, ಹೊಸ ವರ್ಷಾಚರಣೆ ಎಂದೆಲ್ಲಾ ಪಟಾಕಿಗಳ ಸದ್ದು ಮೊಳಗುತ್ತಲೇ ಇರುತ್ತದೆ. ಉತ್ಪಾದನೆ, ದಾಸ್ತಾನು, ಬಳಕೆಯ ಹಂತದಲ್ಲಿ ಹಠಾತ್ ಸ್ಫೋಟಗೊಂಡು ಜೀವಹಾನಿ, ಅಂಗವೈಕಲ್ಯಕ್ಕೆ ಕಾರಣವಾಗುವ, ಪರಿಸರವನ್ನು ಮಲಿನಗೊಳಿಸಿ ಸ್ವಾಸ್ಥ್ಯವನ್ನು ಹದಗೆಡಿಸುವ, ಸಿಡಿಸಿದಾಗ ಹೊರಹೊಮ್ಮುವ ಭಾರಿ ಕಂಪನಗಳಿಂದ ಕಟ್ಟಡಗಳಿಗೆ ಹಾನಿ ಉಂಟುಮಾಡುವ ಈ ಮೋಜು ನಿಜಕ್ಕೂ ಬೇಕೇ ಎಂಬ ಪ್ರಶ್ನೆ ಎಲ್ಲರನ್ನೂ ಕಾಡಿದಾಗಲಷ್ಟೇ ಸದ್ದಿಗೆ ಕಡಿವಾಣ ಬೀಳಬಹುದು.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶುಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಬಾಕಿ ಪ್ರಕರಣ: ಮುಜುಗರದ ಸ್ಥಿತಿ ತಂದೀತು

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ 2,511 ನ್ಯಾಯಾಂಗ ನಿಂದನೆ ಪ್ರಕರಣಗಳು ಹೈಕೋರ್ಟ್ ಮತ್ತು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ (ಕೆಎಟಿ) ಬಾಕಿ ಉಳಿದಿರುವುದು (ಪ್ರ.ವಾ., ಜ. 2) ನ್ಯಾಯಾಂಗದೆಡೆಗೆ ಅಧಿಕಾರಿಶಾಹಿಯು ಹೊಂದಿರುವ ಅನಾದರವನ್ನು ಎತ್ತಿ ತೋರಿಸುತ್ತದೆ. ಇವುಗಳಲ್ಲಿ ಬಹುತೇಕ ಪ್ರಕರಣಗಳು ಇಲಾಖಾ ಮಟ್ಟದಲ್ಲಿ ಪರಿಹಾರ ಸಿಗದೇ ಜನಸಾಮಾನ್ಯರು ಕೋರ್ಟ್ ಮೆಟ್ಟಿಲೇರಿ ತಮ್ಮ ಪರ ತೀರ್ಪು ಪಡೆದಿರುವಂತಹವಾಗಿರುತ್ತವೆ. ಆದರೆ ತೀರ್ಪಿನ ಪ್ರಕಾರ ನಡೆದುಕೊಳ್ಳದೆ ಅಲ್ಲೂ ವಿಳಂಬ ಧೋರಣೆ ತಳೆದು, ಪರಿಹಾರ ಎಂಬುದು ಕೋರ್ಟ್ ಮೆಟ್ಟಿಲೇರಿದವರಿಗೆ ಮರೀಚಿಕೆ ಆಗುವಂತೆ ನೋಡಿಕೊಳ್ಳುವ ದುರುದ್ದೇಶ ಇದರ ಹಿಂದೆ ಇರಬಹುದು. ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಿಸಿದ ಪ್ರಕರಣಗಳು ಒಂದೆಡೆಯಾದರೆ, ಮುಖ್ಯಕಾರ್ಯದರ್ಶಿಯನ್ನು ಪ್ರತಿವಾದಿಯನ್ನಾಗಿ ಮಾಡಿರುವ 49 ನ್ಯಾಯಾಂಗ ನಿಂದನೆ ಪ್ರಕರಣಗಳು ಬಾಕಿ ಇರುವುದು ಏನನ್ನು ಸೂಚಿಸುತ್ತದೆ? ಇಂತಹ ನಡವಳಿಕೆ ಮುಂದೊಂದು ದಿನ ಸರ್ಕಾರಕ್ಕೆ ಮುಜುಗರದ ಪರಿಸ್ಥಿತಿ ತಂದೊಡ್ಡಿದರೆ ಆಶ್ಚರ್ಯವಿಲ್ಲ.

ನವೀನ್ ತಾಜ್ ಎಚ್.ಆರ್., ಹಾಸನ

ಇಂಥ ಪ್ರತಿಭಟನೆ ಸಲ್ಲ

ರಾಮನಗರ ತಾಲ್ಲೂಕಿನ ಅಣ್ಣಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನೂತನ ಕಾರ್ಯದರ್ಶಿಯ ನೇಮಕ ಖಂಡಿಸಿ ಹಾಗೂ ಈ ನೇಮಕದ ಹಿಂದೆ ಬಮೂಲ್ ನಿರ್ದೇಶಕ ಪಿ.ನಾಗರಾಜ್ ಅವರ ಕೈವಾಡವಿದೆ ಎಂದು ಆಕ್ರೋಶ ವ್ಯಕ್ತಪಡಿಸಿ, ಗ್ರಾಮದ ಹಾಲು ಉತ್ಪಾದಕರು ರಾಮನಗರಕ್ಕೆ ಹಸುಗಳನ್ನು ಕರೆತಂದು, ರಸ್ತೆಯಲ್ಲಿ ಹಾಲು ಚೆಲ್ಲಿ ಪ್ರತಿಭಟಿಸಿದ್ದಾರೆ.

ಪೌಷ್ಟಿಕ ಆಹಾರ ದೊರಕದೆ ಅಪೌಷ್ಟಿಕತೆ ಕಾಡುತ್ತಿದೆ ಎಂದು ಸರ್ಕಾರವು ಶಾಲಾ ಮಕ್ಕಳಿಗೆ ಹಾಲು, ಹಣ್ಣು, ಮೊಟ್ಟೆ, ಊಟ ನೀಡುತ್ತಿದೆ. ಹಾಲು ಪೌಷ್ಟಿಕ ಆಹಾರ. ಅನ್ಯಾಯ ಆದಾಗ ಪ್ರತಿಭಟನೆ ಮಾಡುವುದು ಜನರ ಹಕ್ಕು. ಪ್ರತಿಭಟನೆಗೆ ನಾನಾ ಮಾರ್ಗಗಳಿವೆ. ಆದರೆ, ಈ ರೀತಿ ಹಾಲಿನಂತಹ ಆಹಾರ ಪದಾರ್ಥಗಳನ್ನು ರಸ್ತೆಗೆ ಚೆಲ್ಲಿ ಪ್ರತಿಭಟಿಸುವುದು ತರವಲ್ಲ. ಅದರ ಬದಲು ಬಡಮಕ್ಕಳಿಗೆ ಹಂಚಲಿ. ಕಪ್ಪುಬಟ್ಟೆ ಧರಿಸಿ ಜನರಿಗೆ ಉಚಿತವಾಗಿ ನೀಡಲಿ. ಹಾಲು, ಹಣ್ಣು ಅಥವಾ ಇನ್ನಾವುದೇ ಆಹಾರವನ್ನು ವ್ಯರ್ಥ ಮಾಡುವವರ ಮೇಲೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಆಗ ಇಂತಹ ಕೃತ್ಯಗಳು ನಿಯಂತ್ರಣಕ್ಕೆ ಬರಬಹುದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಮದ್ಯರಾತ್ರಿ?

ಡಿಸೆಂಬರ್ 31ರಂದು ₹ 193 ಕೋಟಿ ಮೌಲ್ಯದ ಮದ್ಯ ಮಾರಾಟವಾಗಿದೆಯಂತೆ! (ಪ್ರ.ವಾ., ಜ.2).
ಅಂದಿನ 'ಮಧ್ಯರಾತ್ರಿ'ಯು 'ಮದ್ಯರಾತ್ರಿ'ಯಾಗಿ ಬದಲಾದುದು ವಿಪರ್ಯಾಸ!

ಪಿ.ಜೆ.ರಾಘವೇಂದ್ರ, ಮೈಸೂರು

ನಾಗರಿಕ ಸಮಾಜ ಸಾಗುತ್ತಿರುವ ಈ ಪರಿ!

ರಾಜ್ಯದಾದ್ಯಂತ ಹೊಸ ವರ್ಷವನ್ನು ಸಂಭ್ರಮದಿಂದ ಆಚರಿಸಲಾಗಿದೆ. ಅದರಲ್ಲೂ ಬೆಂಗಳೂರಿನ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಯುವಸಮೂಹವು ಅಬ್ಬರದ ಪಾಶ್ಚಾತ್ಯ ಸಂಗೀತ, ಡಿ.ಜೆ. ಸದ್ದಿಗೆ ಹೆಜ್ಜೆ ಹಾಕುತ್ತಾ ಕುಣಿದದ್ದು, ಕೆಲ ಯುವಕ, ಯುವತಿಯರು ಕಂಠಪೂರ್ತಿ ಕುಡಿದು ನಶೆಯಲ್ಲಿ ತೇಲಾಡುತ್ತಿದ್ದುದು, ಇನ್ನು ಕೆಲವರು ಕುಡಿದ ಮತ್ತಿನಲ್ಲಿ ಹೊಡೆದಾಡಿಕೊಳ್ಳುತ್ತಿದ್ದುದು ವರದಿಯಾಗಿದೆ. ಇದನ್ನೆಲ್ಲ ನೋಡಿದಾಗ, ಭಾರತದ ಭವ್ಯ ಸಂಸ್ಕೃತಿ, ಸಂಸ್ಕಾರಕ್ಕೆ ಏನಾಗಿದೆ ಮತ್ತು ನಾಗರಿಕ ಸಮಾಜ ಎತ್ತ ಸಾಗುತ್ತಿದೆ ಎಂಬ ಪ್ರಶ್ನೆಗಳು ಮೂಡಿದವು. ಬದಲಾವಣೆ ಜಗದ ನಿಯಮ. ಕಾಲಕ್ಕೆ ತಕ್ಕಂತೆ ನಾವೂ ಬದಲಾಗಬೇಕು ನಿಜ. ಆದರೆ ಅದು ಮಿತಿಮೀರದಂತೆ ನೋಡಿಕೊಳ್ಳಬೇಕಾದುದು ನಮ್ಮೆಲ್ಲರ ಕರ್ತವ್ಯ.

ಬಿ.ಎಸ್.ಚೈತ್ರ, ಚಿತ್ರದುರ್ಗ

ಮಕ್ಕಳಲ್ಲಿ ದ್ವೇಷಭಾವನೆ ಹೆಚ್ಚಿತೇಕೆ?

ಕ್ಷುಲ್ಲಕ ಕಾರಣಕ್ಕೆ ವಿದ್ಯಾರ್ಥಿಗಳು ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಗಲಾಟೆ ಮಾಡಿಕೊಂಡ ಪ್ರಕರಣ ರಾಯಚೂರು ನಗರದ ಮದರ್ ಟ್ರಸ್ಟ್ ಶಾಲೆಯ ಆವರಣದಲ್ಲಿ ನಡೆದಿರುವ ಬಗ್ಗೆ ವರದಿಯಾಗಿದೆ (ಪ್ರ.ವಾ., ಜ. 2). ಇವರೆಲ್ಲ 7 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳು ಎಂಬುದು ಆತಂಕಕಾರಿ. ಈ ನವ ಪೀಳಿಗೆಗೆ ಹಿಂಸಾರಭಸಮತಿಯು ಅವರು ಪ್ರೌಢ ವಯಸ್ಸಿಗೆ ಬರುವ ಮೊದಲೇ ವಕ್ಕರಿಸಿಕೊಂಡಿರುವುದು ದುರದೃಷ್ಟಕರ.

ಇಂಥ ಅಹಿತಕರ ಪ್ರಕರಣಗಳು ಮೇಲಿಂದ ಮೇಲೆ ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಗೋಲಿ ಆಡುವಂಥ ಮಕ್ಕಳ ಕೈಗೆ ಬಂದಿರುವ ಮೊಬೈಲ್‌ಗಳು ಮಕ್ಕಳ ಮನಸ್ಸಿನಲ್ಲಿ ಹಿಂಸೆ, ದ್ವೇಷ ಹೆಚ್ಚಿಸುವುದಕ್ಕೆ ಕಾರಣವಾಗಿವೆ ಹಾಗೂ ಈ ಮಕ್ಕಳಿಗೆ ದೊರೆಯುತ್ತಿರುವ ಪರೀಕ್ಷಾಕೇಂದ್ರಿತ ಶಿಕ್ಷಣವೂ ಹೇತುವಾಗಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಉಸ್ತುವಾರಿ ವ್ಯವಸ್ಥೆ ಜನಸ್ನೇಹಿ ಆಗಲಿ

ಅಭಿವೃದ್ಧಿ ಕಾರ್ಯಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ಪ್ರತಿ ತಾಲ್ಲೂಕಿಗೂ ಒಬ್ಬರು ಉಸ್ತುವಾರಿ ಅಧಿಕಾರಿಯನ್ನು ನಿಯೋಜಿಸಿರುವುದು ಒಳ್ಳೆಯ ಬೆಳವಣಿಗೆ. ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ ಕಾರ್ಯದರ್ಶಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರದ ಇಂತಹ ಕ್ರಮಗಳ ಬಗ್ಗೆ ಶ್ರೀಸಾಮಾನ್ಯನಿಗೆ ಬಹಳಷ್ಟು ನಿರೀಕ್ಷೆಗಳು ಇರುತ್ತವೆ. ಈ ದಿಸೆಯಲ್ಲಿ ತಾಲ್ಲೂಕು ಉಸ್ತುವಾರಿ ಅಧಿಕಾರಿಗಳು ಜನರ ನಿರೀಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸಿ, ಜನರಿಗೆ ಸುಲಭವಾಗಿ ಸಿಗುವಂತೆ ಆಗಬೇಕು. ಜನರ ಅಹವಾಲುಗಳನ್ನು ಸ್ವೀಕರಿಸಿ, ಸಮಸ್ಯೆಗಳನ್ನು ಬಗೆಹರಿಸಬೇಕು.

ಜನ ತಮ್ಮ ಕೆಲಸ ಕಾರ್ಯಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಅಲೆದು ಅಲೆದು ವ್ಯವಸ್ಥೆ ಮೇಲೆ ನಂಬಿಕೆಯನ್ನೇ ಕಳೆದುಕೊಂಡಿದ್ದಾರೆ. ತಾಲ್ಲೂಕು ಉಸ್ತುವಾರಿ ಅಧಿಕಾರಿಗಳ ನೇಮಕದ ಮೂಲಕ ಜನರ ಕಷ್ಟಕಾರ್ಪಣ್ಯಗಳು ಬೇಗ ಬಗೆಹರಿಯುವಂತಾಗಲಿ ಮತ್ತು ವ್ಯವಸ್ಥೆ ಮೇಲೆ ಅವರ ನಂಬಿಕೆ ಇನ್ನಷ್ಟು ಗಟ್ಟಿಯಾಗಲಿ.

ಪ್ರಸಾದ್ ಜಿ.ಎಂ., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹಿಟ್ ಅಂಡ್ ರನ್‌ಗೆ ಭಾರಿ ಶಿಕ್ಷೆ

ಚಾಲಕನ ಸುರಕ್ಷತೆಯ ಹಕ್ಕು ಕಸಿದುಕೊಳ್ಳುವ ‘ನ್ಯಾಯ’

ಅಪಘಾತ ಮಾಡಿ ಪರಾರಿಯಾಗುವ (ಹಿಟ್ ಅಂಡ್ ರನ್) ಚಾಲಕರಿಗೆ ಕಠಿಣ ಶಿಕ್ಷೆ ಮತ್ತು ದಂಡ ವಿಧಿಸಲು ನೂತನ ‘ಭಾರತೀಯ ನ್ಯಾಯ ಸಂಹಿತೆ’ಯಲ್ಲಿ ಅವಕಾಶ ಮಾಡಿಕೊಡಲಾಗಿದೆ. 10 ವರ್ಷಗಳವರೆಗೆ ಶಿಕ್ಷೆ ಮತ್ತು ಭಾರಿ ಪ್ರಮಾಣದ ದಂಡ ವಿಧಿಸುವುದು ನಮ್ಮ ಬದುಕನ್ನೇ ಕಸಿದುಕೊಳ್ಳುತ್ತದೆ ಎಂದು ಉತ್ತರ ಮತ್ತು ಮಧ್ಯ ಭಾರತದ ಟ್ರಕ್ ಚಾಲಕರು ಮುಷ್ಕರ ನಡೆಸುತ್ತಿದ್ದಾರೆ. ಕಠಿಣ ಶಿಕ್ಷೆ ಮತ್ತು ಭಾರಿ ದಂಡಕ್ಕಿಂತ ಕಡು ಕಳವಳಕಾರಿ ವಿಷಯವೊಂದು ಭಾರತೀಯ ನ್ಯಾಯ ಸಂಹಿತೆಯಲ್ಲಿದೆ. ನೂತನ ಸಂಹಿತೆಯಲ್ಲಿ ಅಪಘಾತ ಮಾಡಿ ಪರಾರಿಯಾಗುವ ಕೃತ್ಯದ ವ್ಯಾಖ್ಯಾನ ಬದಲಿಸಲಾಗಿದೆ. ಈ ವ್ಯಾಖ್ಯಾನವು ಮೋಟಾರು ವಾಹನ ಕಾಯ್ದೆ ಮತ್ತು ಸಂಚಾರ ನಿಯಂತ್ರಣ ಅಧಿನಿಯಮಕ್ಕೆ ವ್ಯತಿರಿಕ್ತವಾಗಿದೆ

ಪ್ರಜಾವಾಣಿ ವಾರ್ತೆ

ರಸ್ತೆ ಅಪಘಾತ ನಡೆದಾಗ ಗಾಯಾಳುಗಳಿಗೆ ವೈದ್ಯಕೀಯ ನೆರವು ಒದಗುವಂತೆ ಮಾಡುವುದು ಆಯಾ ವಾಹನದ ಚಾಲಕನ ಮೊದಲ ಕರ್ತವ್ಯ. ನಂತರ ಆತ ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ಒದಗಿಸಿ, ಪ್ರಕರಣ ದಾಖಲಿಸಬೇಕು. ಇದು ಅಪಘಾತ ಮಾಡಿದ ಚಾಲಕನ ಎರಡನೇ ಕರ್ತವ್ಯ. ಆದರೆ ಅಪಘಾತದಲ್ಲಿ ಆ ವಾಹನದ ಚಾಲಕನೂ ತೀವ್ರವಾಗಿ ಗಾಯಗೊಂಡಿದ್ದರೆ ಈ ಮೇಲಿನ ಎರಡೂ ಕರ್ತವ್ಯಗಳಿಗೆ ಅವನು ಬದ್ಧನಾಗಿರಬೇಕಿಲ್ಲ. ಅವುಗಳ ಉಲ್ಲಂಘನೆಯು ಅಪರಾಧವಾಗುವುದಿಲ್ಲ. ಇದಲ್ಲದೆ ಅಪಘಾತ ನಡೆದಾಗ ಜನ ಗುಂಪುಗೂಡಿ ಹಲ್ಲೆ ನಡೆಸುವ ಅಪಾಯದ ಸನ್ನಿವೇಶ ನಿರ್ಮಾಣವಾದರೆ, ಆ ಚಾಲಕ ಅಲ್ಲಿಂದ ಪರಾರಿಯಾಗಬಹುದು. ಆಗ ಅದು ಹಿಟ್ ಅಂಡ್ ರನ್ (ಅಪಘಾತ ಮಾಡಿ ಪರಾರಿ) ಎನಿಸಿಕೊಳ್ಳುವುದಿಲ್ಲ. ಚಾಲಕ ತನ್ನ ಜೀವ ಉಳಿಸಿಕೊಳ್ಳಲು ಕಾನೂನು ಮಾಡಿಕೊಟ್ಟಿದ್ದ ಅವಕಾಶವಿದು. ಆದರೆ ಕೇಂದ್ರದ ಬಿಜೆಪಿ ಸರ್ಕಾರವು ಜಾರಿಗೆ ತರಲು ಹೊರಟಿರುವ ನೂತನ ‘ಭಾರತೀಯ ನ್ಯಾಯ ಸಂಹಿತೆ’ಯು ಇಂತಹ ಅವಕಾಶವನ್ನು ಕಸಿದುಕೊಳ್ಳುತ್ತದೆ.

ಮೋಟಾರು ವಾಹನ ಕಾಯ್ದೆಯ 134ನೇ ಸೆಕ್ಷನ್‌ನಲ್ಲಿ ‘ಅಪಘಾತ ನಡೆದಾಗ ವಾಹನ ಚಾಲಕನ ಕರ್ತವ್ಯ’ಗಳನ್ನು ವಿವರಿಸಲಾಗಿದೆ. ಅಪಘಾತ ನಡೆದಾಗ ಯಾವುದೇ ವ್ಯಕ್ತಿ ಮತ್ತು ಯಾವುದೇ ಸ್ವತ್ತಿಗೆ ಹಾನಿಯಾದರೆ, ಅಪಘಾತಕ್ಕೆ ಕಾರಣವಾದ ವಾಹನದ ಚಾಲಕನಿಗೆ ಈ ನಿಯಮಗಳು ಅನ್ವಯವಾಗುತ್ತವೆ. ಅಪಘಾತಕ್ಕೆ ಕಾರಣವಾದ ವಾಹನದ ಚಾಲಕನು ಗಾಯಾಳುಗಳಿಗೆ ವೈದ್ಯಕೀಯ ನೆರವು ದೊರೆಯುವಂತೆ ಮಾಡಬೇಕು ಮತ್ತು ಪೊಲೀಸರಿಗೆ ಆ ಬಗ್ಗೆ ಮಾಹಿತಿ ನೀಡಬೇಕು. ಈ ಎರಡೂ ಕರ್ತವ್ಯಗಳನ್ನು ನಿರ್ವಹಿಸದೇ ಇರುವುದು ಶಿಕ್ಷಾರ್ಹ ಮತ್ತು ದಂಡಾರ್ಹ ಅಪರಾಧವಾಗುತ್ತದೆ.

ಈ ಕರ್ತವ್ಯಗಳಿಂದ ಚಾಲಕನಿಗೆ ವಿನಾಯಿತಿಯನ್ನೂ ಮೋಟಾರು ವಾಹನ ಕಾಯ್ದೆ ನೀಡುತ್ತದೆ. ಅಪಘಾತದ ಸ್ಥಳದಲ್ಲಿ ಜನ ಗುಂಪುಗೂಡಿ ವಾಹನಕ್ಕೆ ಹಾನಿ ಮಾಡುವ ಸಂದರ್ಭ ಎದುರಾದರೆ ಅಥವಾ ಚಾಲಕನ ಮೇಲೆ ಹಲ್ಲೆಗೆ ಮುಂದಾದಾರೆ ಆತ ಅಲ್ಲಿಂದ ತಪ್ಪಿಸಿಕೊಳ್ಳಬಹುದು. ಈ ಕಾಯ್ದೆಯ 134(ಎ) ಸೆಕ್ಷನ್‌ನಲ್ಲಿ ಇದನ್ನು ವಿವರಿಸಲಾಗಿದೆ. ಜತೆಗೆ ಮೇಲೆ ಹೇಳಿದ ಕಾರಣಗಳಿಂದಾಗಿ ಆತ ಪರಾರಿಯಾದರು, ಅಪಘಾತ ನಡೆದ 24 ಗಂಟೆಗಳ ಒಳಗೆ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಲೇಬೇಕು ಎಂದು 134(ಬಿ) ಸೆಕ್ಷನ್ ಹೇಳುತ್ತದೆ. 24 ಗಂಟೆಗಳ ಒಳಗೂ ಆತ ಮಾಹಿತಿ ನೀಡದೇ ಇದ್ದರೆ, ಆ ಕೃತ್ಯವನ್ನು ‘ಅಪಘಾತ ಮಾಡಿ ಪರಾರಿ’ ಎಂದು ಪರಿಗಣಿಸಲಾಗುತ್ತದೆ. ನಿರ್ಲಕ್ಷ್ಯ ಮತ್ತು ಅಜಾಗರೂಕ ಚಾಲನೆಯಿಂದ ನಡೆದ ಅಪಘಾತದಿಂದ ಅನ್ಯರ ಸಾವು ಸಂಭವಿಸಿದ್ದಾಗಲೂ ಚಾಲಕನಿಗೆ ಈ ಕರ್ತವ್ಯಗಳು ಮತ್ತು ಕರ್ತವ್ಯದಿಂದ ವಿನಾಯಿತಿ ಅನ್ವಯವಾಗುತ್ತದೆ. ಕೇಂದ್ರ ಸರ್ಕಾರದ ಸಂಚಾರ ನಿಯಂತ್ರಣ ಅಧಿನಿಯಮದಲ್ಲೂ ಇದನ್ನು ಸ್ಪಷ್ಟವಾಗಿ ವಿವರಿಸಲಾಗಿದೆ.

ಸಾರಿಗೆಯು ಸಮವರ್ತಿ ಪಟ್ಟಿಯಲ್ಲಿ ಬರುವುದರಿಂದ ಕೇಂದ್ರ ಸರ್ಕಾರವು ಕಾಯ್ದೆ ಮಾಡಿದರೂ, ರಾಜ್ಯಗಳೂ ಕಾಯ್ದೆ ಮಾಡಬೇಕಾಗುತ್ತದೆ. ಅಂತೆಯೇ ರಾಜ್ಯ ಸರ್ಕಾರಗಳು ಸಂಬಂಧಿಸಿದ ಕಾಯ್ದೆ–ನಿಯಮಗಳನ್ನು ಜಾರಿಯಲ್ಲಿಟ್ಟಿವೆ. ಕರ್ನಾಟಕ ಸಂಚಾರ ನಿಯಂತ್ರಣ ಅಧಿನಿಯಮದ 13ನೇ ಸೆಕ್ಷನ್‌ನಲ್ಲಿ ಇವನ್ನು ವಿವರಿಸಲಾಗಿದೆ.

ಈ ಕಾನೂನು ಮತ್ತು ನಿಯಮಗಳಲ್ಲಿ ಕೇಂದ್ರ ಸರ್ಕಾರವಾಗಲೀ ರಾಜ್ಯ ಸರ್ಕಾರಗಳಾಗಲೀ ಯಾವುದೇ ಬದಲಾವಣೆ ತಂದಿಲ್ಲ. ಆದರೆ, ಈ ಕಾನೂನುಗಳಿಗೆ ವ್ಯತಿರಿಕ್ತವಾಗಿರುವ ಅಂಶಗಳನ್ನು ಕೇಂದ್ರ ಸರ್ಕಾರವು ಭಾರತೀಯ ನ್ಯಾಯ ಸಂಹಿತೆಯಲ್ಲಿ ಸೇರಿಸಿದೆ. ‘ನಿರ್ಲಕ್ಷ್ಯದ ಮತ್ತು ಅಜಾಗರೂಕ ಚಾಲನೆಯ ಕಾರಣದಿಂದ ಸಂಭವಿಸಿದ ಅಪಘಾತದಲ್ಲಿ ಸಾವು ಸಂಭವಿಸಿದ್ದರೆ, ಆ ವಾಹನದ ಚಾಲಕನು ಅಪಘಾತ ನಡೆದ ಶೀಘ್ರದಲ್ಲೇ ಪೊಲೀಸರಿಗೆ ಅಥವಾ ಮ್ಯಾಜಿಸ್ಟ್ರೇಟ್‌ಗೆ ಮಾಹಿತಿ ನೀಡಬೇಕು. ಹಾಗೆ ಮಾಡದೇ ಇದ್ದರೆ ಆತನಿಗೆ 10 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗುತ್ತದೆ’ ಎಂದು ನ್ಯಾಯ ಸಂಹಿತೆಯಲ್ಲಿ ವಿವರಿಸಲಾಗಿದೆ. ಗುಂಪುಜನರ ಹಲ್ಲೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಚಾಲಕ ಪರಾರಿಯಾದರೂ ಅದಕ್ಕೆ, ಈ ಶಿಕ್ಷೆಯಾಗುತ್ತದೆ. ಅಪಘಾತ ನಡೆದ ನಂತರ ಎಂಥಹದ್ದೇ ಸ್ಥಿತಿ ಇದ್ದರೂ, ಪೊಲೀಸರಿಗೆ ಮಾಹಿತಿ ನೀಡಲೇಬೇಕಾದ ಅನಿವಾರ್ಯತೆಯನ್ನು ನ್ಯಾಯ ಸಂಹಿತೆ ಸೃಷ್ಟಿಸುತ್ತದೆ.

ಹೀಗೆ ಚಾಲಕನ ಸುರಕ್ಷತೆಗಾಗಿ ಒಂದು ಕಾನೂನು ವಿನಾಯಿತಿ ನೀಡಿದರೆ, ಮತ್ತೊಂದು ಕಾನೂನು ಆ ವಿನಾಯಿತಿಗೆ ಅರ್ಥವೇ ಇಲ್ಲದಂತೆ ಮಾಡುತ್ತದೆ. ಇದು ಕೇಂದ್ರದ ಬಿಜೆಪಿ ಸರ್ಕಾರವು ತರಲು ಹೊರಟಿರುವ ಭಾರತೀಯ ನ್ಯಾಯ ಸಂಹಿತೆಯು ತಂದೊಡ್ಡುತ್ತಿರುವ ಒಂದು ಅಪಾಯಕಾರಿ ಬೆಳವಣಿಗೆ.



₹7 ಲಕ್ಷ ದಂಡ?

ಅಪಘಾತ ಮಾಡಿ ಪರಾರಿಯಾಗುವ ಚಾಲಕರಿಗೆ ₹7 ಲಕ್ಷದವರೆಗೆ ದಂಡ ವಿಧಿಸಲು ಅವಕಾಶವಿದೆ ಎಂದು ಮುಷ್ಕರ ನಡೆಸುತ್ತಿರುವ ಟ್ರಕ್ ಚಾಲಕರು, ಅದನ್ನು ಬೆಂಬಲಿಸುತ್ತಿರುವ ಟ್ರಕ್ ಚಾಲಕರ ಮತ್ತು ಮಾಲೀಕರ ಸಂಘಟನೆಗಳು ಕಳವಳ ವ್ಯಕ್ತಪಡಿಸುತ್ತಿವೆ. ಆದರೆ ಭಾರತೀಯ ದಂಡ ಸಂಹಿತೆಯಲ್ಲಿ ಈ ಸ್ವರೂಪದ ಕೃತ್ಯಕ್ಕೆ ₹7 ಲಕ್ಷದವರೆಗೆ ದಂಡ ವಿಧಿಸಬಹುದು ಎಂಬ ಮಾಹಿತಿ ಇಲ್ಲ.

ಇಂತಹ ಕೃತ್ಯ ಎಸಗುವವರಿಗೆ 10 ವರ್ಷಗಳವರೆಗೆ ಜೈಲುಶಿಕ್ಷೆ ಮತ್ತು ದಂಡವನ್ನೂ ವಿಧಿಸಬಹುದು ಎಂದಷ್ಟೇ ನ್ಯಾಯ ಸಂಹಿತೆಯ 106(2)ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ನ್ಯಾಯ ಸಂಹಿತೆಯ ಈ ಸೆಕ್ಷನ್ ಬಗ್ಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಅಧಿಕಾರಿಯೊಬ್ಬರು ‘ಪಿಟಿಐ’ಗೆ ಮಾಹಿತಿ ನೀಡಿದ್ದಾರೆ. ‘ಅಪಘಾತ ನಡೆಸಿ ಪೊಲೀಸರಿಗೆ ಆ ಬಗ್ಗೆ ಮಾಹಿತಿ ನೀಡದೇ ಪರಾರಿಯಾಗುವ ಚಾಲಕರಿಗೆ ಮಾತ್ರ 10 ವರ್ಷಗಳ ಜೈಲುಶಿಕ್ಷೆಯಾಗುತ್ತದೆ’ ಎಂದಷ್ಟೇ ಅವರು ಹೇಳಿದ್ದಾರೆ. ₹7 ಲಕ್ಷ ದಂಡ ವಿಧಿಸಬಹುದು ಎಂಬುದರ ಬಗ್ಗೆ ಅವರೂ ಮಾತನಾಡಿಲ್ಲ. ಟ್ರಕ್ ಚಾಲಕರು ಮತ್ತು ಮಾಲೀಕರು ₹7 ಲಕ್ಷ ದಂಡದ ಬಗ್ಗೆ ವ್ಯಕ್ತಪಡಿಸುತ್ತಿರುವ ಕಳವಳವನ್ನು, ಕೇಂದ್ರ ಸರ್ಕಾರವೇ ಸ್ಪಷ್ಟಗೊಳಿಸಬೇಕಿದೆ.

ವಿವರಣೆ, ಶಿಕ್ಷೆಯಲ್ಲಿ ಭಾರಿ ಬದಲಾವಣೆ

ಭಾರತೀಯ ದಂಡ ಸಂಹಿತೆ

ನಿರ್ಲಕ್ಷ್ಯದಿಂದ ಉಂಟುಮಾಡಿದ ಸಾವು

ಸೆಕ್ಷನ್ 304ಎ: ನಿರ್ಲಕ್ಷ್ಯ ಮತ್ತು ಅಜಾಗರೂಕ ಕೃತ್ಯದಿಂದ ಸಾವನ್ನು ಉಂಟು ಮಾಡುವ ವ್ಯಕ್ತಿಗೆ ಎರಡು ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಬಹುದು ಅಥವಾ ದಂಡ ವಿಧಿಸಬಹುದು ಅಥವಾ ಶಿಕ್ಷೆ ಮತ್ತು ದಂಡ ಎರಡನ್ನೂ ವಿಧಿಸಬಹುದು

ಭಾರತೀಯ ನ್ಯಾಯ ಸಂಹಿತೆ

ನಿರ್ಲಕ್ಷ್ಯದಿಂದ ಉಂಟುಮಾಡಿದ ಸಾವು

ಸೆಕ್ಷನ್ 106(1): ನಿರ್ಲಕ್ಷ್ಯ ಮತ್ತು ಅಜಾಗರೂಕ ಕೃತ್ಯದಿಂದ ಸಾವನ್ನು ಉಂಟು ಮಾಡುವ ವ್ಯಕ್ತಿಗೆ ಐದು ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಬಹುದು ಮತ್ತು ದಂಡವನ್ನೂ ವಿಧಿಸಬಹುದು

ಸೆಕ್ಷನ್ 106(2): ವ್ಯಕ್ತಿಯೊಬ್ಬ ನಿರ್ಲಕ್ಷ್ಯ ಮತ್ತು ಅಜಾಗರೂಕ ಕೃತ್ಯದಿಂದ ಸಾವನ್ನು ಉಂಟು ಮಾಡಿದ್ದು, ಆ ಬಗ್ಗೆ ಪೊಲೀಸರಿಗೆ ಅಥವಾ ಮ್ಯಾಜಿಸ್ಟ್ರೇಟ್‌ಗೆ ಶೀಘ್ರವೇ ಮಾಹಿತಿ ನೀಡದೆ ಪರಾರಿಯಾದರೆ ಆತನಿಗೆ 10 ವರ್ಷಗಳವರೆಗೆ ಜೈಲುಶಿಕ್ಷೆ ಮತ್ತು ದಂಡವನ್ನೂ ವಿಧಿಸಬಹುದು

- ಭಾರತೀಯ ದಂಡ ಸಂಹಿತೆಯಲ್ಲಿ ಶಿಕ್ಷೆಯನ್ನು ಮಾತ್ರ ವಿವರಿಸಲಾಗಿತ್ತು. ಆದರೆ ಭಾರತೀಯ ನ್ಯಾಯ ಸಂಹಿತೆಯಲ್ಲಿ ಕೃತ್ಯವನ್ನೂ ವಿವರಿಸಲಾಗಿದೆ
- ನಿರ್ಲಕ್ಷ್ಯ ಮತ್ತು ಅಜಾಗರೂಕ ಕೃತ್ಯದಿಂದ ಸಾವನ್ನು ಉಂಟು ಮಾಡಿದ್ದಕ್ಕೆ ಭಾರತೀಯ ದಂಡ ಸಂಹಿತೆಯಲ್ಲಿ ಗರಿಷ್ಠ ಎರಡು ವರ್ಷಗಳ ಶಿಕ್ಷೆ ವಿಧಿಸಲಷ್ಟೇ ಅವಕಾಶವಿತ್ತು. ಆದರೆ ನ್ಯಾಯ ಸಂಹಿತೆಯಲ್ಲಿ ಇಂತಹ ಕೃತ್ಯಕ್ಕೆ ನೀಡಲಾಗುವ ಶಿಕ್ಷೆಯ ಪ್ರಮಾಣವನ್ನು 10 ವರ್ಷಗಳಿಗೆ ಏರಿಕೆ ಮಾಡಲಾಗಿದೆ
- ಬ್ರಿಟಿಷರ ಕಾಲದ ಭಾರತೀಯ ದಂಡ ಸಂಹಿತೆಯು ತಪ್ಪಿತಸ್ಥರಿಗೆ ಶಿಕ್ಷೆ ನೀಡುವುದನ್ನೇ ಪ್ರಧಾನ ಉದ್ದೇಶವಾಗಿರಿಸಿಕೊಂಡಿತ್ತು. ಇದನ್ನು ನಾವು ಬದಲಿಸುತ್ತೇವೆ. ನ್ಯಾಯ ಒದಗಿಸುವುದು ಕಾನೂನಿನ ಮೂಲಮಂತ್ರವಾಗಬೇಕು. ಹೀಗಾಗಿಯೇ ದಂಡ ಸಂಹಿತೆಯನ್ನು ನ್ಯಾಯ ಸಂಹಿತೆಯನ್ನಾಗಿ ಬದಲಿಸುತ್ತಿದ್ದೇವೆ. ಶಿಕ್ಷೆಯ ಬದಲಿಗೆ ನ್ಯಾಯ ಮತ್ತು ಸುಧಾರಣೆಗೆ ಒತ್ತು ನೀಡಿದ್ದೇವೆ ಎಂದು ಭಾರತೀಯ ನ್ಯಾಯ ಸಂಹಿತೆಯನ್ನು ಲೋಕಸಭೆಯಲ್ಲಿ ಮಂಡಿಸಿದ್ದಾಗ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದರು. ಆದರೆ ಅವರ ಹೇಳಿಕೆಗೆ ವ್ಯತಿರಿಕ್ತವಾಗಿ ನ್ಯಾಯ ಸಂಹಿತೆಯಲ್ಲಿ ಶಿಕ್ಷೆಯನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಲಾಗಿದೆ




ಟ್ರಕ್ ಚಾಲಕರಿಗಷ್ಟೇ ಅಲ್ಲ

ಭಾರತೀಯ ನ್ಯಾಯ ಸಂಹಿತೆಯಲ್ಲಿ ವಿವರಿಸಲಾಗಿರುವ ‘ಅಪಘಾತ ನಡೆಸಿ ಪರಾರಿ’ ಕೃತ್ಯಕ್ಕೆ ನೀಡಲಾಗುವ ಶಿಕ್ಷೆ ಮತ್ತು ದಂಡ ಪ್ರಮಾಣ ಟ್ರಕ್ ಚಾಲಕರಿಗಷ್ಟೇ ಅನ್ವಯವಾಗುವುದಿಲ್ಲ. ಸ್ಕೂಟರ್, ಮೋಟಾರು ಬೈಕ್, ರಿಕ್ಷಾ, ಟ್ರ್ಯಾಕ್ಟರ್, ಕಾರು, ಬಸ್ಸು ಚಾಲಕರಿಗೂ ಅನ್ವಯವಾಗುತ್ತದೆ. ಮೋಟಾರು ವಾಹನ ಕಾಯ್ದೆಯ ಪ್ರಕಾರ ಚಾಲಕ ಎಂದರೆ ಕೇವಲ ಚಾಲಕ ಮಾತ್ರನಲ್ಲ. ಬದಲಿಗೆ ವಾಹನದ ಮಾಲೀಕನನ್ನೂ ‘ಚಾಲಕ’ ಎಂದೇ ಪರಿಗಣಿಸಲಾಗುತ್ತದೆ. ಅಪಘಾತ ನಡೆಸಿ ಪರಾರಿ ಪ್ರಕರಣದಲ್ಲಿ ಚಾಲಕ ಪತ್ತೆಯಾಗದೇ ಇದ್ದರೆ, ವಾಹನದ ಮಾಲೀಕನೇ ಆರೋಪಿಯಾಗುತ್ತಾನೆ.

ಆಧಾರ: ಮೋಟಾರು ವಾಹನ ಕಾಯ್ದೆ–2019, ಸಂಚಾರ ನಿಯಂತ್ರಣ ಅಧಿನಿಯಮ, ಭಾರತೀಯ ದಂಡ ಸಂಹಿತೆ, ಭಾರತೀಯ ನ್ಯಾಯ ಸಂಹಿತೆ, ಪಿಟಿಐ

ಸಿನಿ ಬಿಟ್ಸ್



ಶಿವರಾಜ್‌ಕುಮಾರ್

‘ಕ್ಯಾಪ್ಟನ್ ಮಿಲ್ಲರ್’ ಜ.12ಕ್ಕೆ

ಸ್ಯಾಂಡಲ್‌ವುಡ್‌ನ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ನಟನೆಯ 2ನೇ ತಮಿಳು ಸಿನಿಮಾ ಬಿಡುಗಡೆಗೆ ದಿನಾಂಕ ನಿಗದಿಯಾಗಿದೆ. ಜ.12ರಂದು ಧನುಷ್-ಶಿವರಾಜ್‌ಕುಮಾರ್ ನಟನೆಯ ‘ಕ್ಯಾಪ್ಟನ್ ಮಿಲ್ಲರ್’ ಸಿನಿಮಾ ರಿಲೀಸ್ ಆಗಲಿದೆ.

ಕಳೆದ ವರ್ಷ ತೆರೆಕಂಡ ಸೂಪರ್‌ಸ್ಟಾರ್ ರಜನೀಕಾಂತ್ ನಟನೆಯ ‘ಜೈಲರ್’ ಸಿನಿಮಾ ಮೂಲಕ ತಮಿಳು ಚಿತ್ರರಂಗಕ್ಕೆ ಶಿವರಾಜ್‌ಕುಮಾರ್ ಹೆಜ್ಜೆ ಇಟ್ಟಿದ್ದರು. ಈ ಚಿತ್ರದಲ್ಲಿನ ‘ನರಸಿಂಹ’ ಎಂಬ ಅವರ ಪಾತ್ರ ಪ್ರೇಕ್ಷಕರನ್ನು ಸೆಳೆದಿತ್ತು. ಇದಾದ ಬಳಿಕ ತಮಿಳುನಾಡಿನಲ್ಲೂ ಶಿವರಾಜ್‌ಕುಮಾರ್ ಅವರಿಗೆ ಫ್ಯಾನ್ಸ್ ಹೆಚ್ಚಾಗಿದ್ದರು. ‘ಕ್ಯಾಪ್ಟನ್ ಮಿಲ್ಲರ್’ ಮೂಲಕ ಮತ್ತೊಂದು ಭಿನ್ನ ಪಾತ್ರದಲ್ಲಿ ಶಿವರಾಜ್‌ಕುಮಾರ್ ಅವರು ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ ಎಂದಿದೆ ಚಿತ್ರತಂಡ. ಧನುಷ್ ಅವರ 49ನೇ ಚಿತ್ರ ಇದಾಗಿದೆ.

ತಮಿಳುನಾಡಿನ ಪೊಂಗಲ್ ಹಬ್ಬಕ್ಕೆ ಧನುಷ್-ಶಿವರಾಜ್‌ಕುಮಾರ್ ಸಿನಿಮಾ ತೆರೆಗೆ ಬರಲಿದ್ದು, ಚಿತ್ರವನ್ನು ಅರುಣ್ ಮಾಥೇಶ್ವರನ್ ನಿರ್ದೇಶಿಸಿದ್ದಾರೆ. ಧನುಷ್ ಜೋಡಿಯಾಗಿ ಪ್ರಿಯಾಂಕಾ ಮೋಹನನ್ ನಟಿಸಿದ್ದಾರೆ. ಇದು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ತೆರೆದುಕೊಳ್ಳುವ ಕಥೆ ಎಂದಿದೆ ಚಿತ್ರತಂಡ. ಈಗಾಗಲೇ ಬಿಡುಗಡೆಯಾಗಿರುವ ಟೀಸರ್, ಚಿತ್ರದ ಕಥಾಹಂದರದ ಸಣ್ಣ ಝಲಕ್ ನೀಡಿದೆ. ಜಿ.ವಿ. ಪ್ರಕಾಶ್ ಈ ಸಿನಿಮಾಗೆ ಹಿನ್ನೆಲೆ ಸಂಗೀತ ನೀಡಿದ್ದಾರೆ. ಈ ಸಿನಿಮಾಗೆ ಸೆನ್ಸಾರ್ ಮಂಡಳಿಯು ಯು/ಎ ಪ್ರಮಾಣಪತ್ರ ನೀಡಿದೆ.



ನೀನಾಸಂ ಸತೀಶ್

ಬಾಟಲಿ ಹಿಡಿದ ನೀನಾಸಂ ಸತೀಶ್!

ಹೊಸ ವರ್ಷಕ್ಕೂ ಎಣ್ಣೆ ಬಾಟಲಿಗೂ ಅವಿನಾಭಾವ ಸಂಬಂಧ. ಹೀಗಾಗಿ ನಟ ನೀನಾಸಂ ಸತೀಶ್ ಹೊಸ ವರ್ಷಕ್ಕಾಗಿ ಬಾಟಲಿ ಹಿಡಿದಿದ್ದಾರೆ! ಆದರೆ ಹೊಸ ವರ್ಷದ ಸಂಭ್ರಮಕ್ಕಾಗಿ ಅಲ್ಲ. ‘ಮ್ಯಾಟ್ನಿ’ ಚಿತ್ರದ ‘ಬಾರೋ ಬಾರೋ ಬರುವಾಗ ಬಾಟಲ್ ತಾರೋ’ ಹಾಡು ಹೊಸ ವರ್ಷದ ಹೊಸ್ತಿಲಿನಲ್ಲಿಯೇ ಬಿಡುಗಡೆಗೊಂಡಿದೆ. ನಟ ಧನಂಜಯ್ ಈ ಹಾಡು ಬಿಡುಗಡೆಗೊಳಿಸುವ ಮೂಲಕ ಗೆಳೆಯನಿಗೆ ಸಾಥ್ ನೀಡಿದ್ದಾರೆ.

ಮನೋಹರ್ ನಿರ್ದೇಶನದ ಈ ಚಿತ್ರ ಬಿಡುಗಡೆಗೆ ಸಿದ್ಧವಿದೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ಸಂಯೋಜನೆಯ ಎಣ್ಣೆ ಸಾಂಗ್‌ಗೆ ಎಂದಿನಂತೆ ವಿಜಯ್ ಪ್ರಕಾಶ್ ಧ್ವನಿಯಿದೆ. ಈ ಹಿಂದೆ ಈ ಎಣ್ಣೆ ಸಾಂಗ್ ಅನ್ನು ಬೆಂಗಳೂರಿನ ಪಬ್‌ವೊಂದರಲ್ಲಿ ಚಿತ್ರೀಕರಿಸಲಾಗಿತ್ತು. ನೀನಾಸಂ ಸತೀಶ್, ರಚಿತಾ ರಾಮ್, ನಾಗಭೂಷಣ್, ಶಿವರಾಜ್ ಕೆ.ಆರ್ ಪೇಟೆ ಸೇರಿದಂತೆ ಹಲವರು ಈ ಹಾಡಿಗೆ ಹೆಜ್ಜೆಹಾಕಿದ್ದಾರೆ.

‘ಹೊಸ ವರ್ಷದಂದು ಪಾರ್ಟಿ ಪ್ರಿಯರಿಗಾಗಿ ಈ ಹಾಡು ಬಿಡುಗಡೆ ಮಾಡಿದ್ದೇವೆ. ಪಾರ್ಟಿಗೆ ಕಿಕ್ ನೀಡುವ ಈ ಹಾಡು ಕಥೆಗೆ ಪೂರಕವಾಗಿ ಸಿನಿಮಾದ ಪ್ರಮುಖ ಘಟ್ಟದಲ್ಲಿ ಬರುತ್ತದೆ. ಸತೀಶ್–ರಚಿತಾ ಜೋಡಿಯ ಹಾಡುಗಳು ಈ ಹಿಂದೆ ಹಿಟ್ ಆಗಿವೆ. ಅದೇ ರೀತಿ ಈ ಹಾಡಿಗೂ ಉತ್ತಮ ಪ್ರತಿಕ್ರಿಯೆ ಬರುತ್ತಿದೆ’ ಎಂದರು ನಿರ್ದೇಶಕ ಮನು.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಮಸೀದಿಯೊಂದನ್ನು** ಜೆಸಿಬಿಯಿಂದ ಕೆಡವಲಾಗುತ್ತಿರುವ ಹಾಗೂ ರಸ್ತೆಯಲ್ಲಿ ಹಲವು ವಾಹನಗಳು ನಿಂತಿರುವ ವಿಡಿಯೊವಿನ ಸ್ಕ್ರೀನ್‌ಶಾಟ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ‘ಉತ್ತರ ಪ್ರದೇಶದ ಸೈದಾಬಾದ್‌ನಲ್ಲಿ (ಪ್ರಯಾಗ್‌ರಾಜ್) ಮಸೀದಿಯೊಂದರ ಮೇಲೆ ಪಾಕಿಸ್ತಾನದ ಧ್ವಜ ಹಾರಾಡುತ್ತಿತ್ತು. ಯೋಗಿ ಆದಿತ್ಯನಾಥ ಅವರು ಇಡೀ ಮಸೀದಿಯನ್ನು ನೆಲಸಮಗೊಳಿಸಲು ಆದೇಶಿಸಿದರು. ಪಾಕಿಸ್ತಾನ ಧ್ವಜವನ್ನು ಕೆಳಗಿಸಿ ಎಂದು ಅವರು ಆದೇಶಿಸಬಹುದಿತ್ತು. ಆದರೆ, ಅವರು ಹಾಗೆ ಮಾಡಲಿಲ್ಲ. ದೇಶವಿರೋಧಿಗಳನ್ನು ಯೋಗಿ ಆದಿತ್ಯನಾಥ ಅವರು ಹೀಗೆಯೇ ನಡೆಸಿಕೊಳ್ಳುವುದು. ನಿಮ್ಮ ಧೈರ್ಯಕ್ಕೆ ಮೆಚ್ಚುಗೆ ಯೋಗಿಜೀ ಅವರೆ’ ಎಂದು ಹಲವರು ಸ್ಕ್ರೀನ್‌ಶಾಟ್‌ನೊಂದಿಗೆ ಬರಹವನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

✓ **ಇಂಥದ್ದೇ ಸ್ಕ್ರೀನ್‌ಶಾಟ್‌ಗಳು** ಹಾಗೂ ಇಂಥದ್ದೇ ಪೋಸ್ಟ್‌ಗಳು 2023ರ ಜನವರಿಯಲ್ಲಿಯೂ ಹರಿದಾಡಿದ್ದವು. ಇಲ್ಲಿ ಮಸೀದಿಯನ್ನು ನೆಲಸಮಗೊಳಿಸಲಾಗುತ್ತಿದೆ ನಿಜ. ಇದಕ್ಕೆ ಬೇರೆಯದೇ ಕಾರಣ ಇದೆ. ಪಶ್ಚಿಮ ಬಂಗಾಳದ ಹಲ್ದಿಯಾ ನಗರ ಹಾಗೂ ಪ್ರಯಾಗ್‌ರಾಜ್ ಅನ್ನು ಸಂಪರ್ಕಿಸುವ ಜಿಟಿ ರಸ್ತೆಯ ಅಗಲೀಕರಣ ಕಾರ್ಯಕ್ಕಾಗಿ ಮಸೀದಿಯನ್ನು ನೆಲಸಮಗೊಳಿಸಲಾಗಿತ್ತು. ಈ ವೇಳೆ ಮಸೀದಿ ಇರುವ ಪ್ರದೇಶದ ಸುತ್ತಲೂ ಬಿಗಿ ಭದ್ರತೆಯನ್ನು ನಿಯುಕ್ತಿಗೊಳಿಸಲಾಗಿತ್ತು. ನೆಲಸಮಗೊಳಿಸುವ ಬಗ್ಗೆ ಮಸೀದಿಗೆ ನೋಟಿಸ್ ಅನ್ನು ಮೊದಲೇ ನೀಡಲಾಗಿತ್ತು. ಈ ಕುರಿತು ‘ದೈನಿಕ್ ಭಾಸ್ಕರ್’ ಸೇರಿದಂತೆ ಹಲವು ಪತ್ರಿಕೆಗಳು ವರದಿಯನ್ನೂ ಮಾಡಿದ್ದವು. ಪೊಲೀಸರು ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. ಜೊತೆಗೆ, ಮಸೀದಿಯಲ್ಲಿ ಹಾರಿಸಿದ್ದು ಪಾಕಿಸ್ತಾನದ ಧ್ವಜವಾಗಿರಲಿಲ್ಲ. ಅದು ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಧಾರ್ಮಿಕ ಧ್ವಜವಾಗಿತ್ತು ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಮೂರ್ಖರೊಂದಿಗೆ ಬದುಕುವುದು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ತನಗನ್ನಿಸಿದಂತೆ ಮಾತಾಡುವ, ಸರಿ ಎನಿಸಿದಂತೆ ಬದುಕುವ ಮನುಷ್ಯನನ್ನು ಮೂರ್ಖ ಎನ್ನಬಹುದೇ? ಮತ್ತೊಬ್ಬರನ್ನು ಅರ್ಥ ಮಾಡಿಕೊಳ್ಳದೆ ತನಗೆ ತೋಚಿದ್ದೇ ಸರಿ ಎಂದು ಹಟ ಹಿಡಿಯುವ ದಡ್ಡನಿಗೆ ಮೂರ್ಖ ಎಂದು ಕರೆಯಬಹುದೇ?

ವಿಚಿತ್ರ ಹೆಡ್ಡತನ ಸಾಕಿಕೊಂಡಿರುವ ಇಂತಹವರಿಗೆ ತಮ್ಮ ಹೊರತು ಉಳಿದೆಲ್ಲವೂ ತಪ್ಪಾಗಿ ಕಾಣಿಸುತ್ತದೆ. ಇಲ್ಲದ್ದನ್ನು ಇದೆ ಎಂದೂ ಇರುವುದನ್ನು ಇಲ್ಲವೆಂದೂ ವಾದಿಸುವ ಚಾಳಿ ತುಸು ಜಾಸ್ತಿಯೇ ಇರುತ್ತದೆ. ಹೇಗಾದರೂ ಗೆಲ್ಲಬೇಕೆಂಬ ತುರುಸು ವರ್ತನೆ ಇವರಲ್ಲಿ ಸದಾ ಜಾಗೃತ. ತಿಳಿದ ವ್ಯಕ್ತಿಯೂ ಒಮ್ಮೊಮ್ಮೆ ಕಡುಮೂರ್ಖನಾಗಿ ವರ್ತಿಸಬಲ್ಲ. ಕೊನೆಯ ಪಕ್ಷ ಅವನಿಗೆ ಆನಂತರವಾದರೂ ನಾನು ಹೀಗೆ ನಡಕೊಂಡಿದ್ದು, ಮಾತಾಡಿದ್ದು ತಪ್ಪು ಎಂದೆನಿಸಿದರೆ ಅದು ಒಳ್ಳೆಯದು. ಆದರೆ ತನ್ನ ವಿತಂಡವಾದವೇ ಸರಿ ಎಂದು ಭಂಡತನಕ್ಕೆ ಬೀಳುವ ವ್ಯಕ್ತಿಗೆ ಮೂರ್ಖ ಎನ್ನದೆ ಬೇರೆ ದಾರಿಯಿಲ್ಲ.

‘ಮೂರ್ಖನಿಂದ ದೂರವೇ ಇರು. ನಿನಗರಿವಿಲ್ಲದಂತೆ ಆತ ನಿನ್ನನ್ನು ಆಕ್ರಮಿಸಿಕೊಂಡು ಬಿಡುತ್ತಾನೆ. ನಿನ್ನೊಳಗಿರುವ ಅರಿಯುವ ಶಕ್ತಿಯನ್ನು ಕಿತ್ತೆಸೆದು ಹುಂಬುತನ, ಮೊಂಡಾಟ, ಮತ್ತೊಬ್ಬರ ಮಾತನ್ನು ಕೇಳಿಸಿಕೊಳ್ಳದ ಹಟಮಾರಿತನ ನಿನ್ನೊಳಗೆ ತುಂಬುತ್ತಾನೆ’ ಎಂದು ಅನೇಕ ತತ್ವಜ್ಞಾನಿಗಳು ಇಲ್ಲೀತನಕ ಹೇಳುತ್ತಲೇ ಬಂದಿದ್ದಾರೆ. ಮೂರ್ಖರ ಗೆಳೆತನ ಮಾಡಬೇಡಿ. ಮೂರ್ಖರೊಂದಿಗೆ ವಾದ ಮಾಡಬೇಡಿ ಎಂದಿದ್ದಾರೆ ನಮ್ಮ ಜನಪದರು.

ವ್ಯಕ್ತಿಯೊಬ್ಬ ಮೂರ್ಖನೋ ತಿಳಿವಳಿಕಸ್ತನೋ ಎಂದು ಅರ್ಥವಾಗಬೇಕಾದರೆ ಅವನ ಸಂಗ ಮಾಡಲೇಬೇಕಲ್ಲ. ಅನೇಕ ಗಂಡ ಹೆಂಡಿರು ಪರಸ್ಪರ ಆರೋಪ ಮಾಡುವಾಗ ಇಪ್ಪತ್ತೈದು ವರುಷ ಇವರ ಜೊತೆ ಸಂಸಾರ ಮಾಡಿದ ಮೇಲೆ ಇವರಿಷ್ಟು ಮೂರ್ಖರು ಎಂದು ಗೊತ್ತಾಯಿತು ಎನ್ನುತ್ತಾರೆ. ಜೊತೆಗೇ ಬದುಕುವ ವ್ಯಕ್ತಿಯೊಳಗಿನ ಈ ಹಕೀಕತ್ತು ಅರ್ಥಮಾಡಿಕೊಳ್ಳಲು ಇಷ್ಟು ಸುದೀರ್ಘ ಸಮಯ ಬೇಕಾಯಿತೆಂದರೆ... ಇನ್ನೂ ಕೆಲವೇ ಗಂಟೆಗಳು ನಮ್ಮ ಜೊತೆ ಒಡನಾಡುವ ಸಹೋದ್ಯೋಗಿಗಳು, ಅಪರಿಚಿತರು, ಕೆಲ ಕ್ಷಣಗಳ ಪರಿಚಿತರ ಮನದಾಳದ ಮೂರ್ಖತೆ ಕಂಡು ಹಿಡಿಯಲು ಶತಮಾನಗಳೇ ಬೇಕಾಗಬಹುದು.

ಈ ಪ್ರಪಂಚವು ಮೂರ್ಖರಿಂದ ತುಂಬಿದೆ ನಿಜ. ಆದರೆ ನಾನು ಯಾವ ಮಟ್ಟದ ಮೂರ್ಖ ಎಂಬ ಅಳತೆಯೂ ನಡೆಯಬೇಕಲ್ಲವೇ? ಇನ್ನೊಬ್ಬರ ಹುಳುಕು ಹುಡುಕಲು ಬಳಸುವ ಕಣ್ಣುಗಾಜನ್ನು ನನ್ನೊಳಗಿನ ಕೊಳಕುಗಳನ್ನೂ ಶೋಧಿಸುವ ಕೆಲಸಕ್ಕೂ ಬಳಸಬೇಕು. ನಿಮ್ಮ ಕಣ್ಣುಗಳನ್ನು ಮುಚ್ಚಿ ಹತ್ತು ಸೆಕೆಂಡು ನಿಮ್ಮ ಬಗ್ಗೆ ಯೋಚಿಸಿರಿ. ಕಣ್ಣನ್ನು ತೆರೆದ ಬಳಿಕ ನಿಮ್ಮ ಮನಸ್ಸು ಒಬ್ಬ ಮೂರ್ಖನ ಬಗ್ಗೆ ಆಲೋಚಿಸಿ ನಿನ್ನ ಅಮೂಲ್ಯ ಹತ್ತು ಕ್ಷಣಗಳನ್ನು ಅನ್ಯಾಯವಾಗಿ ಹಾಳುಮಾಡಿಕೊಂಡೆ ಎಂದು ಹೇಳುತ್ತದೆ. ಆಗ ಈ ಜಗತ್ತಿನ ಮೂರ್ಖ ಯಾರೆಂದು ನಿಮಗೂ ಅರ್ಥವಾಗಿರುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜನವರಿ 3, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಸಪ್ತಮಿ ಗಂ. 19-49 ನಕ್ಷತ್ರ: ಉತ್ತರಫಲ್ಗುನಿ ಗಂ. 14-46 ಯೋಗ: ಶೋಭನಾ ಗಂ 30-21 ಕರಣ: ಬವ ಗಂ. 19-49, ಧನು ಮಾಸದ 18 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 2.
ರಾಹುಕಾಲ: ಮಧ್ಯಾಹ್ನ 12 – 1.30
ಸೂರ್ಯೋದಯ: 06-58 ಸೂರ್ಯಾಸ್ತ: 06-12
ಮುಸ್ಲಿಂ ದಿನಾಂಕ: 20 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 2, 9

ಮೇಷ: ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ಏರುಪೇರಾದರೂ ಆತಂಕವಾಗಬೇಕಾದ ಅವಶ್ಯಕತೆ ಇಲ್ಲ. ಅಭದ್ರತೆಯ ಭಾವ ಇಂದಿನಿಂದ ದೂರಾಗಲಿದೆ. ಸಿಟ್ಟಿನಿಂದ ಹೊರಬರಲು ಶನೈಶ್ಚರನ ಪ್ರಾರ್ಥಿಸಿ.

ವೃಷಭ: ಧಾರ್ಮಿಕ ಮಾರ್ಗದರ್ಶಕರ ಸಹಾಯದಿಂದ ಬದುಕನ್ನು ಅರ್ಥಪೂರ್ಣವಾಗಿಸುವ ಬಗ್ಗೆ ತಿಳಿದುಕೊಳ್ಳುವಿರಿ. ಆಲಸ್ಯ ಮನೋಭಾವ ದೂರವಾಗಿ ಚಟುವಟಿಕೆಯಿಂದಿರುತ್ತೀರಿ. ಉದ್ಯೋಗ ನಿಮಿತ್ತವಾಗಿ ಪ್ರಯಾಣ ಸಂಭವ.

ಮಿಥುನ: ಜಟಿಲ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಮಿತ್ರರೊಂದಿಗಿನ ಕಲಹ ಸಹನೆಯ ಪರೀಕ್ಷೆಯಾಗಿರುತ್ತದೆ. ಬಹಳ ಪ್ರಯತ್ನದಿಂದ ಗುತ್ತಿಗೆ ಕೆಲಸದ ಬಾಕಿ ಹಣ ಸಂದಾಯವಾಗುವುದು.

ಕರ್ಕಾಟಕ: ಮಂದಗತಿಯಲ್ಲಿ ಸಾಗುತ್ತಿದ್ದ ಕೆಲವು ಕೆಲಸಗಳನ್ನು ಶೀಘ್ರ ಪೂರೈಸಲು ಸಿಬ್ಬಂದಿಗೆ ತಾಕೀತು ಮಾಡಬೇಕಾಗುವುದು. ದವಸ-ಧಾನ್ಯಗಳ ವ್ಯಾಪಾರಸ್ಥರಿಗೆ ಅಧಿಕ ಲಾಭ ಉಂಟಾಗಲಿದೆ.

ಸಿಂಹ: ಕೆಲಸ ಕಾರ್ಯಗಳು ಕೈಗೂಡಲೆಂದು ದೇವರಲ್ಲಿ ಹರಕೆ ಹೊತ್ತಿರುವ ವಿಚಾರವನ್ನು ಮರೆಯದಿರಿ. ಕನಸುಗಳನ್ನು ಸಾಕಾರಗೊಳಿಸಲು ಅವಿರತ ಶ್ರಮ ಅಗತ್ಯ. ಭವಿಷ್ಯದ ಯೋಜನೆಗಳಿಗೆ ಹೆಚ್ಚು ಗಮನ ಕೊಡುವಿರಿ.

ಕನ್ಯಾ: ಅತಿ ಓಡಾಟದಿಂದ ದೇಹಕ್ಕೆ ದಣಿವಾದರೂ ಮನಸ್ಸಿಗೆ ಹಿತವೆನಿಸುವುದು. ನಿರೀಕ್ಷಿಸಿದ ಕಾರ್ಯಗಳು ನೆರವೇರಿ ನೆಮ್ಮದಿ ಉಂಟಾಗುವುದು. ಲೇವಾದೇವಿ ವ್ಯವಹಾರದಲ್ಲಿ ವಿಚಾರಿಸಿ ತೀರ್ಮಾನ ಕೈಗೊಳ್ಳಿ.

ತುಲಾ: ವಾಸ್ತವದಿಂದ ದೂರಾಗಿ ಭ್ರಮೆಯ ಲೋಕದಲ್ಲಿ ಬದುಕುವ ಪ್ರಯತ್ನ ಮಾಡಬೇಡಿ. ವಿದ್ಯಾರ್ಥಿ ಸಮೂಹಕ್ಕೆ ಉತ್ತಮ ಅವಕಾಶಗಳು ಲಭಿಸಲಿವೆ. ಎಲೆಕ್ಟ್ರಿಕಲ್ ಕಂಟ್ರಾಕ್ಟರ್‌ಗೆ ಉತ್ತಮ ಅವಕಾಶಗಳು ಸಿಗಲಿವೆ.

ವೃಶ್ಚಿಕ: ಜನರೊಂದಿಗೆ ಹೆಚ್ಚು ಬೆರೆಯುವುದನ್ನು ಅಭ್ಯಾಸ ಮಾಡಿಕೊಂಡಲ್ಲಿ ವ್ಯವಹಾರ ಸುಗಮ. ಸಹೋದ್ಯೋಗಿಗಳಿಂದ ಉತ್ತಮ ಸಹಕಾರ ಮತ್ತು ಮಾರ್ಗದರ್ಶನ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ.

ಧನು: ಹಿಂದಿನ ಪ್ರಯತ್ನಗಳು ವ್ಯರ್ಥವಾಗಿಲ್ಲ ಎಂಬುದು ಅರಿವಾಗುವುದು. ಉದ್ದಟತನ ನಿಮ್ಮ ಸೋಲಿಗೆ ಮುಖ್ಯ ಕಾರಣವಾಗುವುದು. ಅಜೀರ್ಣ ಅಥವಾ ಉದರ ಸಂಬಂಧವಾದ ಅನಾರೋಗ್ಯ ಎದುರಾಗಬಹುದು.

ಮಕರ: ಷೇರು ಮಾರುಕಟ್ಟೆ ಹಾಗೂ ಕಮಿಷನ್ ವ್ಯಾಪಾರಕ್ಕೆ ಸಂಬಂಧಿಸಿದ ವೃತ್ತಿಯಲ್ಲಿರುವವರಿಗೆ ಈ ದಿನ ನಷ್ಟ ಸಂಭವಿಸಲಿದೆ. ವಿದ್ಯುತ್ ಉಪಕರಣಗಳ ಮಾರಾಟದಿಂದ ಲಾಭ ಪಡೆಯುವಿರಿ.

ಕುಂಭ: ಕೆಲಸದ ಕ್ಷೇತ್ರದಲ್ಲಿ ಜವಾಬ್ದಾರಿಯುತ ಕಾರ್ಯವೈಖರಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಲಿದೆ. ಕೈಬಿಟ್ಟಿರುವ ಯೋಜನೆಗಳನ್ನು ಮತ್ತೆ ಮುಂದುವರಿಸಲು ಯೋಚಿಸಿ. ಬಿಡಿ ಯಂತ್ರೋಪಕರಣಗಳ ಮಾರಾಟದಿಂದ ಲಾಭ.

ಮೀನ: ಕೃಷಿ ಆಧಾರಿತ ಕುಟುಂಬದಲ್ಲಿ ಮಂಗಳ ಕಾರ್ಯ ನಡೆಯುವ ಮುನ್ಸೂಚನೆ ಸಿಗಲಿದೆ. ವಿದ್ಯಾರ್ಥಿಗಳು ಎಂಜಿನಿಯರಿಂಗ್ ಶಿಕ್ಷಣದಲ್ಲಿ ವಿಶೇಷ ಸಾಧನೆ ತೋರಲಿದ್ದಾರೆ. ಸಹೋದ್ಯೋಗಿಗಳ ಸಹಕಾರ ದೊರೆಯಲಿದೆ.

ಪದಬಂಧ 5549 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಾದದಲ್ಲಿ ಕೊನೆಗೊಂಡಿರುವ ಮಾತುಕತೆ (3)
5.ಕೆಟ್ಟ ವಾಸನೆಯಿದು (4)
6.ಬಾಳೆ ಹಣ್ಣಿನಿಂದ ಮಾಡಿದ ಖಾದ್ಯ (4)
8.ಕಣ್ಣಿನ ಪಿಚ್ಚು (3)
11.ಮುದುರಿ ಕುಳಿತಿರುವವ ವಯಸ್ಸಾದವನು! (3)
13.ಕಾಡಿನ ಅರಸನಿವನು (4)
17.ತಡವಾಗಿ ಗುಣಿಯಲ್ಲಿ ಬಿತ್ತಿದ ಅಲಸಂದೆ (4)
18.ಪೆದ್ದ ಇಲ್ಲಿದ್ದಾನೆ (3)

ಮೇಲಿಂದ ಕೆಳಕ್ಕೆ

1.ತೊಂದರೆ ಹೊಂದಿದ ವ್ಯಕ್ತಿ (3)
2.ಗದರಿಸಿ ಬಾಜಿ ಕಟ್ಟದ ಮೋಸಗಾರ! (4)
3.ವ್ಯತ್ಯಾಸ ಈ ತರ ಬಂದಿದೆ (3)
4.ಗರಳದಿಂದ ಕೂಡಿರುವ ಸಂಗತಿ (3)
7.ಬೆಳಗಿನ ಜಾವ (3)
9.ಕೊಡತಕ್ಕ ಹಣ (3)
10.ಈತ ದುಡ್ಡಿಲ್ಲದವನು (3)
12. ಲೆಕ್ಕ ಬರೆಯುವವನು ಇಲ್ಲಿದ್ದಾನೆ (4)
14.ಮಿನುಗುತ್ತಿರುವ ತಾರೆ (3)
15.ಜೋಪಾನ ಎಂದು ಹೀಗೆನ್ನಿ (3)
16.ಗಡಕ್ಕನೆ ಕಾಣಿಸಿದ ಗಂಡು ಕೋತಿ (3)

1		2	■	■	3	■	4	■
	■	5				■		■
	■		■	■	6			7
■	■	8		9	■	■	■	
10	■	■	■		■	■	■	
	■	■	■	11		12	■	■
13	14		15	■	■		■	16
■		■	17				■	
■		■		■	■	18		

5548ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಭ್ರಮನಿರಸನ 4.ಗುಣಾಕರ 5.ಚಾಲಕ 7.ರಸಿಕ 10.ಹಳದಿ 12.ಗಹ್ವರ 13.ಕರ್ನಾಟಕ 15.ವಿಗ್ರಹಾರಾಧನೆ

ಮೇಲಿಂದ ಕೆಳಕ್ಕೆ: 1.ಭ್ರಷ್ಟಾಚಾರ 2.ನಗು 3.ಭರವಸೆ 6.ಕಡುದಾಹ 7.ರಶೀದಿ 8.ಕವಾಡಿಗ 9.ಹರಕತ್ತು 11.ಅರಮನೆ 14.ಕವಿ

ಸುಡೊಕು 5934

3				8		9		1
	9						6	
	4		9			3		8
6								9
	5		7	6	9		8	
8						6		
9			2			7		6
	6			9	7		3	
		7				4		5


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5933 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ಷೇರುಪೇಟೆ ವಹಿವಾಟು 379



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,741
ಇಂದಿನ ಅಂತ್ಯ	21,665
▲	76
ದಿನದ ಕನಿಷ್ಠ	21,555

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹615
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹615

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹870 (870)
ಸೂರ್ಯಕಾಂತಿ (ರಿಫೈನ್ಡ್)	₹885 (890)
ಪಾಮೋಲಿನ್	₹823 (824)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹338-490
ದ್ವಿತಳಿ (ಬಿ.ವಿ)	₹309-582

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152.50
ಆರ್‌ಎಸ್‌ಎಸ್-5	₹148.50
ಗುಡ್ ಲಾಟ್	₹131.50

ವಿನಿಮಯ ದರ

$ ಡಾಲರ್	83.32
£ ಪೌಂಡ್	105.95
€ ಯುರೊ	91.77
¥ ಯೆನ್ (100ಕ್ಕೆ)	59

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-9720
ಕೆ.ಆರ್.ಪೇಟೆ	₹8200-8200
ತಿಪಟೂರು	₹8100-9300
ತುರುವೇಕೆರೆ	₹9300-9300

ಕೇಂದ್ರ ಸರ್ಕಾರದ ಕಠಿಣ ಕಾನೂನು ವಿರುದ್ಧ ಟ್ರಕ್, ಟ್ಯಾಂಕರ್ ಚಾಲಕರ ಪ್ರತಿಭಟನೆ

2 ಸಾವಿರ ಬಂಕ್‌ನಲ್ಲಿ ದಾಸ್ತಾನು ಖಾಲಿ

ನವದೆಹಲಿ (ಪಿಟಿಐ): ವಾಣಿಜ್ಯ ವಾಹನ, ಟ್ರಕ್ ಮತ್ತು ಟ್ಯಾಂಕರ್ ಚಾಲಕರು ನಡೆಸುತ್ತಿರುವ ಪ್ರತಿಭಟನೆಯ ಬಿಸಿ ಮಂಗಳವಾರ ಗ್ರಾಹಕರಿಗೆ ತಟ್ಟಿತು.

ಇಂಧನ ಪೂರೈಕೆ ಸೇರಿದಂತೆ ದಿನಬಳಕೆಯ ಅಗತ್ಯ ವಸ್ತುಗಳ ಸರಬರಾಜಿನಲ್ಲಿ ವ್ಯತ್ಯಯವಾಯಿತು.

‘ದೇಶದ ಪಶ್ಚಿಮ ಮತ್ತು ಉತ್ತರ ಭಾರತ ಭಾಗದಲ್ಲಿನ ಎರಡು ಸಾವಿರಕ್ಕೂ ಹೆಚ್ಚು ಪೆಟ್ರೋಲ್ ಬಂಕ್‌ಗಳಲ್ಲಿ ದಾಸ್ತಾನು ಖಾಲಿಯಾಗಿದ್ದು, ಗ್ರಾಹಕರು ಪರದಾಡುವಂತಾಗಿದೆ’ ಎಂದು ಸಾರಿಗೆ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ. ಕೆಲವು ಬಂಕ್‌ಗಳ ಮುಂಭಾಗ ‘ಇಂಧನ ಖಾಲಿಯಾಗಿದೆ’ ಎಂದು ಬರೆದಿರುವ ಫಲಕಗಳನ್ನು ತೂಗು ಹಾಕಲಾಗಿತ್ತು.

ಮಹಾರಾಷ್ಟ್ರದಲ್ಲಿ ಹೋರಾಟ ತೀವ್ರ: ಮಹಾರಾಷ್ಟ್ರದ ಮುಂಬೈ, ಥಾಣೆ, ನಾಗ್ಪುರದಲ್ಲಿ ಹೋರಾಟ ತೀವ್ರವಾಗಿತ್ತು.

‘ಸೋಮವಾರದಿಂದಲೇ ಚಾಲಕರು ಆರಂಭಿಸಿರುವ ಹೋರಾಟದಿಂದಾಗಿ ಇಂಧನ ಪೂರೈಕೆಗೆ ತೊಂದರೆಯಾಗಿದೆ’ ಎಂದು ಮುಂಬೈನ ಪೆಟ್ರೋಲ್ ಡೀಲರ್ಸ್ ಅಸೋಸಿಯೇಷನ್ ಅಧ್ಯಕ್ಷ ಚೇತನ್ ಮೋದಿ ತಿಳಿಸಿದ್ದಾರೆ.

ನಾಗ್ಪುರದಲ್ಲಿ ನಡೆದ ಹೋರಾಟಕ್ಕೆ ಶಿವಸೇನಾ (ಯುಬಿಟಿ) ಸ್ಥಳೀಯ ಘಟಕವು ಬೆಂಬಲ ಘೋಷಿಸಿದೆ. ವಿವಿಧ ಲಾರಿ ಚಾಲಕರ ಸಂಘಗಳು ಪಾಲ್ಗೊಂಡಿವೆ.

5 ಲಕ್ಷ ವಾಹನಗಳಿಗೆ ತೊಂದರೆ: ಮಧ್ಯಪ್ರದೇಶದ ಭೋಪಾಲ್, ಇಂದೋರ್, ಗ್ವಾಲಿಯರ್, ಜಬಲ್ಪುರದಲ್ಲೂ ಪ್ರತಿಭಟನೆ ಮುಂದುವರಿಯಿತು.

‘ಮಧ್ಯಪ್ರದೇಶದಲ್ಲಿ ದೊಡ್ಡ ಮತ್ತು ಸಣ್ಣ ಪ್ರಮಾಣದ ವಾಹನಗಳು ಸೇರಿದಂತೆ ಸುಮಾರು 5 ಲಕ್ಷ ವಾಹನಗಳು ರಸ್ತೆಗೆ ಇಳಿದಿಲ್ಲ. ಕೇಂದ್ರವು ಸಂಹಿತೆಯಡಿ ನಿಗದಿಪಡಿಸಿರುವ ಶಿಕ್ಷೆ ಮತ್ತು ದಂಡವನ್ನು ವಾಪಸ್ ಪಡೆಯಬೇಕು’ ಎಂದು ಆಲ್ ಇಂಡಿಯಾ ಮೋಟರ್ ಟ್ರಾನ್ಸ್‌ಪೋರ್ಟ್ ಕಾಂಗ್ರೆಸ್‌ನ ಮಾಜಿ ಉಪಾಧ್ಯಕ್ಷ (ಪಶ್ಚಿಮ ವಿಭಾಗ) ವಿಜಯ್ ಕಲ್ರಾ ಒತ್ತಾಯಿಸಿದ್ದಾರೆ.

ಗುಜರಾತ್‌ನ ಖೇಡಾ, ವಲ್ಸಾದ್, ಗಿರ್ ಸೋಮನಾಥ್ ಮತ್ತು ಮೆಹ್ಸಾನಾ ಜಿಲ್ಲೆಗಳಲ್ಲಿ ಚಾಲಕರು ಹೆದ್ದಾರಿ ತಡೆ ನಡೆಸಿದರು.

ಹೈದರಾಬಾದ್‌ನ ಕೆಲವು ಬಂಕ್‌ಗಳಲ್ಲೂ ಇಂಧನ ಸಮಸ್ಯೆ ತಲೆದೋರಿದೆ.

ಜಮ್ಮು ಮತ್ತು ಕಾಶ್ಮೀರ: ಕಾಶ್ಮೀರ ಕಣಿವೆಯಲ್ಲಿನ ಶೇ 90ರಷ್ಟು ಪೆಟ್ರೋಲ್ ಬಂಕ್‌ಗಳ ಮೇಲೆ ಹೋರಾಟವು ಪರಿಣಾಮ ಬೀರಿದೆ. ಜಮ್ಮು ಮತ್ತು ಕಾಶ್ಮೀರ, ಲಡಾಕ್‌ಗೆ ಇಂಧನ ಪೂರೈಸುವ 1,500 ಟ್ಯಾಂಕರ್‌ಗಳ ಸೇವೆ ಸ್ಥಗಿತಗೊಂಡಿದೆ.

ರಿಕ್ಷಾ ಚಾಲಕರ ಬೆಂಬಲ: ಹಿಮಾಚಲ ಪ್ರದೇಶದ ಧರ್ಮಶಾಲ, ಕುಲು–ಮನಾಲಿ, ಬಿಲಾಸ್‌ಪುರ, ಹಮೀರ್‌ಪುರ, ಚಂಬಾ, ಉನಾ ಮತ್ತು ಶಿಮ್ಲಾದಲ್ಲಿ ಪ್ರತಿಭಟನೆ ನಡೆಯಿತು.

ಹರಿಯಾಣದಲ್ಲಿ ನಡೆದ ಹೋರಾಟಕ್ಕೆ ಖಾಸಗಿ ಬಸ್ ಚಾಲಕರು ಸೇರಿದಂತೆ ಕೆಲವು ಆಟೊ ರಿಕ್ಷಾ ಚಾಲಕರ ಸಂಘಗಳು ಕೈಜೋಡಿಸಿವೆ.

‘ಪಂಜಾಬ್‌ನಲ್ಲಿ 4 ಸಾವಿರಕ್ಕೂ ಹೆಚ್ಚು ಬಂಕ್‌ಗಳ ಸೇವೆಯಲ್ಲಿ ವ್ಯತ್ಯಯವಾಗಿದೆ’ ಎಂದು ಪಂಜಾಬ್ ಪೆಟ್ರೋಲಿಯಂ ಡೀಲರ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ರಾಜೇಶ್ ಕುಮಾರ್ ತಿಳಿಸಿದ್ದಾರೆ.



ಹೈದರಾಬಾದ್‌ನ ಪೆಟ್ರೋಲ್ ಬಂಕ್‌ವೊಂದರ ಮುಂಭಾಗ ಇಂಧನ ತುಂಬಿಸಿಕೊಳ್ಳಲು ಸರದಿ ಸಾಲಿನಲ್ಲಿ ನಿಂತಿರುವ ಆಟೊ ರಿಕ್ಷಾಗಳು –ಪಿಟಿಐ ಚಿತ್ರ

ಹೋರಾಟ ಕೈಬಿಡಲು ಒಪ್ಪಿಗೆ

ನವದೆಹಲಿ (ಪಿಟಿಐ): ದೇಶದಲ್ಲಿ ಭಾರತೀಯ ನ್ಯಾಯ ಸಂಹಿತೆ ಅನುಷ್ಠಾನಕ್ಕೂ ಮೊದಲು ಲಾರಿ ಚಾಲಕರ ಸಂಘಟನೆಗಳ ಜೊತೆಗೆ ಚರ್ಚಿಸಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿದೆ.

ಸಂಘಟನೆಯ ಮುಖಂಡರ ಜೊತೆ ಎರಡು ಗಂಟೆ ಕಾಲ ಚರ್ಚಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಅವರು, ‘ಚಾಲಕರು ಮತ್ತೆ ಕೆಲಸಕ್ಕೆ ಮರಳುವುದಕ್ಕೆ ಸಂಬಂಧಿಸಿದಂತೆ ಲಾರಿ ಸಾಗಣೆಗಾರರು ಒಪ್ಪಿಕೊಂಡಿದ್ದಾರೆ. ಶೀಘ್ರವೇ ಹೋರಾಟ ಅಂತ್ಯಗೊಳ್ಳಲಿದೆ’ ಎಂದು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಎಐಎಂಟಿಸಿ ಅಧ್ಯಕ್ಷ ಅಮೃತಲಾಲ್ ಮದನ್, ‘ಭಾರತೀಯ ನ್ಯಾಯ ಸಂಹಿತೆಯಡಿ ತಪ್ಪಿತಸ್ಥ ಚಾಲಕರಿಗೆ 10 ವರ್ಷ ಶಿಕ್ಷೆ ಮತ್ತು ₹7 ಲಕ್ಷ ದಂಡ ವಿಧಿಸುವ ನಿಯಮವನ್ನು ಕೇಂದ್ರವು ಕೂಡಲೇ ಕೈಬಿಡಬೇಕು’ ಎಂದು ಆಗ್ರಹಿಸಿದರು.

> **ಸದ್ಯ ಶೇ 60ರಿಂದ 70ರಷ್ಟು ಚಾಲಕರು ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ. ಗೃಹ ಕಾರ್ಯದರ್ಶಿ ಜತೆಗೆ ಚರ್ಚಿಸಿದ ಬಳಿಕ ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ**
> **ಅಮೃತಲಾಲ್ ಮದನ್,** ಅಧ್ಯಕ್ಷ, ಎಐಎಂಟಿಸಿ

ಪೆಟ್ರೋಲ್, ಡೀಸೆಲ್ ಖರೀದಿಗೆ ನೂಕುನುಗ್ಗಲು

ಒಂದನೇ ಪುಟದಿಂದ

ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಇಂಧನದ ಅಭಾವ ತಲೆದೋರಬಹುದು ಎಂಬ ಭೀತಿಯಿಂದ ಗ್ರಾಹಕರು ಖರೀದಿಗೆ ಮುಗಿಬಿದ್ದಿದ್ದರಿಂದ ಪೆಟ್ರೋಲ್ ಬಂಕ್‌ಗಳ ಬಳಿ ನೂಕುನುಗ್ಗಲು ಉಂಟಾಗಿತ್ತು.

ದೇಶದಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಂದ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಸಿಲಿಂಡರ್ ಪೂರೈಸುವ ಒಂದು ಲಕ್ಷಕ್ಕೂ ಹೆಚ್ಚು ಟ್ರಕ್ ಮತ್ತು ಟ್ಯಾಂಕರ್‌ಗಳಿವೆ.

ಬುಧವಾರವರೆಗೆ ಹೋರಾಟ ನಡೆಸಲು ಚಾಲಕರು ನಿರ್ಧರಿಸಿದ್ದಾರೆ. ಅಲ್ಲದೇ, ಹೋರಾಟವು ರಾಷ್ಟ್ರ ವ್ಯಾಪಿ ವಿಸ್ತರಣೆಯಾಗುವ ಸಾಧ್ಯತೆಯಿದೆ. ಅನಿರ್ದಿಷ್ಟಾವಧಿವರೆಗೆ ಮುಂದುವರಿದರೆ ತರಕಾರಿ, ಹಣ್ಣುಗಳು, ಹಾಲು ಪೂರೈಕೆಯಲ್ಲಿ ವ್ಯತ್ಯಯವಾಗಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾಜಸ್ಥಾನ: ಪೊಲೀಸ್ ವಾಹನಕ್ಕೆ ಬೆಂಕಿ

ಜೈಪುರ (ಪಿಟಿಐ): ರಾಜಸ್ಥಾನದ ಕೆಕ್ರಿ ಜಿಲ್ಲೆಯಲ್ಲಿ ನಡೆದ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿತು. ಉದ್ರಿಕ್ತ ಗುಂಪೊಂದು ಪೊಲೀಸ್ ವಾಹನಕ್ಕೆ ಬೆಂಕಿ ಹಚ್ಚಿದೆ. ಈ ವೇಳೆ ನಡೆದ ಕಲ್ಲು ತೂರಾಟದಲ್ಲಿ ಮೂವರು ಪೊಲೀಸರು ಗಾಯಗೊಂಡಿದ್ದಾರೆ.

ಪ್ರತಿಭಟನಕಾರರು ಅಜ್ಮೀರ್-ಭಿಲ್ವಾರಾ ಹೆದ್ದಾರಿ ತಡೆ ನಡೆಸಿದ್ದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು. ಪರಿಸ್ಥಿತಿ ನಿಯಂತ್ರಿಸಲು ತೆರಳಿದ ಪೊಲೀಸರ ಮೇಲೆ ದುಷ್ಕರ್ಮಿಗಳು ಕಲ್ಲು ತೂರಾಟ ನಡೆಸಿದ್ದಾರೆ ಎಂದು ಪೊಲೀಸ್ ಅಧಿಕಾರಿ ಕೇಕ್ರಿ ಸಂಜಯ್ ಸಿಂಗ್ ತಿಳಿಸಿದ್ದಾರೆ.

ವಿಶ್ವದ ಅತ್ಯುತ್ತಮ ಕಾರ್ಯಕ್ಷಮತೆ ಪಟ್ಟಿ ಬಿಡುಗಡೆ

ಬೆಂಗಳೂರು ಏರ್‌ಪೋರ್ಟ್‌ಗೆ 3ನೇ ಸ್ಥಾನ

ನವದೆಹಲಿ (ಪಿಟಿಐ): ವಿಶ್ವದಲ್ಲಿ ಅತ್ಯುತ್ತಮ ಕಾರ್ಯಕ್ಷಮತೆ ಹೊಂದಿದ 10 ವಿಮಾನ ನಿಲ್ದಾಣಗಳ ಪಟ್ಟಿಯಲ್ಲಿ ದೇಶದ ಹೈದರಾಬಾದ್‌ನ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು, ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದಿವೆ.

2023ರಲ್ಲಿ ಜಾಗತಿಕ ಮಟ್ಟದಲ್ಲಿ ಅತ್ಯುತ್ತಮ ಕಾರ್ಯಕ್ಷಮತೆ ತೋರಿರುವ ವಿಮಾನ ನಿಲ್ದಾಣಗಳ ಪಟ್ಟಿಯನ್ನು ವಿಮಾನಯಾನ ವಿಶ್ಲೇಷಣಾ ಸಂಸ್ಥೆಯಾದ ಸಿರಿಯಮ್ ಮಂಗಳವಾರ ಬಿಡುಗಡೆಗೊಳಿಸಿದೆ. ಈ ಪಟ್ಟಿಯಲ್ಲಿ ಅಮೆರಿಕದ ಮಿನ್ನಿಯಾ-ಪೊಲೀಸ್‌ನ ಸೇಂಟ್ ಪಾಲ್ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವು ಮೊದಲ ಸ್ಥಾನ ಪಡೆದಿದೆ.



ಬೆಂಗಳೂರು ವಿಮಾನ ನಿಲ್ದಾಣ

ಮಧ್ಯಮ ವಿಭಾಗಗಳ ವಿಮಾನ ನಿಲ್ದಾಣಗಳ ಪಟ್ಟಿಯಲ್ಲಿ ಕೋಲ್ಕತ್ತದ ನೇತಾಜಿ ಸುಭಾಷ್ ಚಂದ್ರಬೋಸ್ ವಿಮಾನ ನಿಲ್ದಾಣವು ಒಂಬತ್ತನೇ ಸ್ಥಾನ ಪಡೆದಿದೆ. ಜಪಾನ್‌ನ ಒಸಕಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಈ ವಿಭಾಗದಲ್ಲಿ ಅಗ್ರಸ್ಥಾನ ಪಡೆದಿದೆ.

ಇಂಡಿಗೋಗೆ ಸ್ಥಾನ: ಕಡಿಮೆ ವೆಚ್ಚದ ಸಾಗಾಣಿಕೆ ವಿಭಾಗದಲ್ಲಿ ಭಾರತದ ಅತಿದೊಡ್ಡ ವಿಮಾನಯಾನ ಸಂಸ್ಥೆ ಇಂಡಿಗೊ ಎಂಟನೇ ಸ್ಥಾನ ಪಡೆದಿದೆ. ದಕ್ಷಿಣ ಆಫ್ರಿಕಾದ ಸಫೇರ್ ವಿಮಾನ ಸಂಸ್ಥೆಯು ಈ ವಿಭಾಗದಲ್ಲಿ ಮೊದಲ ಸ್ಥಾನ ಪಡೆದಿದೆ.

ಮುಂಬೈ ಧಾರಣೆ

ಶೇಂಗಾ
02-01-2024


ಜಾವಾ 70/80(ಹೊಸ)	12300-12400
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	830 (827)
ಪಾಮ್ ವಾರದ ಡೆಲಿವರಿ	825 (826)
ಸೂರ್ಯಕಾಂತಿ ಎಣ್ಣೆ ಕಚ್ಚಾ	810 (810)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
63,300 (63,100)
ಬೆಳ್ಳಿ ಕೆ.ಜಿ 74,200 (73,700)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಆರ್. ಲಕ್ಷ್ಮಯ್ಯ, ಕೋರಮಂಗಲ, ಬೆಂಗಳೂರು

• **ಪ್ರಶ್ನೆ:** ನಾನು ರಾಜ್ಯ ಸರ್ಕಾರಿ ಪತ್ರಾಂಕಿತ ನಿವೃತ್ತ ಅಧಿಕಾರಿ. ಪ್ರಸ್ತುತ ನನಗೆ ನಿವೃತ್ತಿ ವೇತನ ಹಾಗೂ ಖಾಸಗಿ ಉದ್ಯೋಗದಿಂದ ಮಾಸಿಕ ಆದಾಯ ಹಾಗೂ ಮನೆ ಬಾಡಿಗೆ ರೂಪದಲ್ಲಿ ₹22,000 ಹೀಗೆ ಒಟ್ಟಾರೆ ₹11.47 ಲಕ್ಷ ವಾರ್ಷಿಕ ಆದಾಯವಿದೆ. ಹಿರಿಯ ನಾಗರಿಕರ ಉಳಿತಾಯ ಯೋಜನೆಯಡಿ ಅಂಚೆ ಕಚೇರಿಯಲ್ಲಿ ₹1.50 ಲಕ್ಷ ಹೂಡಿಕೆ ಮಾಡಿದ್ದೇನೆ. ವಾಹನ ಖರೀದಿಗೆ ₹20 ಲಕ್ಷವನ್ನು ಬ್ಯಾಂಕಿನಿಂದ ಸಾಲ ಪಡೆದಿದ್ದೇನೆ. ಈ ಸಾಲಕ್ಕೆ ಸಂಬಂಧಿಸಿ, ಇದರ ಮಾಸಿಕ ಕಂತು ನನ್ನ ವೇತನ ಖಾತೆಯಿಂದ ಪಾವತಿಯಾಗುತ್ತದೆ. ಮೇಲ್ಕಂಡ ಮಾಹಿತಿಯ ಮೇರೆಗೆ ನನ್ನ ವರಮಾನ ತೆರಿಗೆ ಉಳಿಸಲು ಮಾಹಿತಿ ನೀಡಬೇಕಾಗಿ ಕೋರಿಕೆ.

ಉತ್ತರ: ನೀವು ನೀಡಿರುವ ಮಾಹಿತಿಯಂತೆ ನಿಮಗೆ ನಿವೃತ್ತಿ ವೇತನ ಹಾಗೂ ಪ್ರಸ್ತುತ ಉದ್ಯೋಗದಲ್ಲಿರುವ ಖಾಸಗಿ ಕಂಪನಿಯಿಂದಲೂ ವೇತನ ಬರುತ್ತಿದೆ. ಇದಲ್ಲದೆ, ಮಾಸಿಕ ಬಾಡಿಗೆ ಆದಾಯವೂ ಬರುತ್ತಿದೆ. ವೇತನ ಆದಾಯಕ್ಕೆ ಸಂಬಂಧಿಸಿ ನಿಮ್ಮ ಆಯ್ಕೆ ಹಳೆಯ ತೆರಿಗೆ ಪದ್ಧತಿಯಾಗಿದ್ದರೆ, ವೇತನದ ವಿವಿಧ ಅಂಶಗಳಿಗೆ ಸಂಬಂಧಿಸಿ ಸಂಸ್ಥೆ ಎಲ್ಲರಿಗೂ ಅನ್ವಯವಾಗುವ ರಿಯಾಯಿತಿಗಳನ್ನು (ಸೆಕ್ಷನ್ 10) ನಿಮಗೂ ನೀಡಿರುತ್ತದೆ. ಉದಾಹರಣೆಗೆ ರಜಾ ಬಾಕಿಯ ನಗದೀಕರಣ ಇತ್ಯಾದಿ. ಉಳಿದಂತೆ ಸೆಕ್ಷನ್ 80ಸಿ ವಿನಾಯಿತಿಗೆ ಸಂಬಂಧಿಸಿ ಈಗಾಗಲೇ ನೀವು ಗರಿಷ್ಠ ಹೂಡಿಕೆ ಮಾಡಿದ್ದೀರಿ. ಯಾವುದೇ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿದರೂ ನಿಮಗೆ ಒಟ್ಟಾರೆ ₹50 ಸಾವಿರದ ಸ್ಟ್ಯಾಂಡರ್ಡ್ ಡಿಡಕ್ಷನ್ ವಿನಾಯಿತಿ ಇದೆ.

ಸೆಕ್ಷನ್ 80ಸಿಸಿಡಿ (1ಬಿ) ಇದರಡಿ ಯಾವುದೇ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿದರೂ ಹೆಚ್ಚುವರಿ ₹50 ಸಾವಿರ ವಿನಾಯಿತಿ ಪಡೆಯುವುದಕ್ಕೆ ಇನ್ನೂ ಅವಕಾಶವಿದೆ. ಇದಕ್ಕೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಹೂಡಿಕೆದಾರ ವಯಸ್ಸು 18ರಿಂದ 70 ವರ್ಷದ ಒಳಗಿರಬೇಕು. ಇನ್ನು ನೀವು ಪಡೆದ ವಾಹನ ಸಾಲಕ್ಕೆ ಪ್ರಸ್ತುತ ಯಾವುದೇ ರಿಯಾಯಿತಿ ಇರುವುದಿಲ್ಲ.

ವಿಕಾಸ್ ಶರ್ಮಾ, ಬೆಂಗಳೂರು

• **ಪ್ರಶ್ನೆ:** ನಾನು ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದು ವೇತನ ನಂಬಿಕೊಂಡು ಬದುಕು ಸಾಗಿಸುತ್ತಿದ್ದೇನೆ. ನನಗೆ ಓರ್ವ ತಂಗಿ ಇದ್ದು ಆಕೆಗೆ ಜನ್ಮತಃ ಶ್ರವಣ ದೋಷದ ಸಮಸ್ಯೆಯಿದೆ. ಆಕೆಯ ವೈದ್ಯಕೀಯ ವೆಚ್ಚವನ್ನು ನಾನೇ ಭರಿಸುತ್ತಿದ್ದೇನೆ. ಸಾಮಾನ್ಯವಾಗಿ ವರ್ಷಕ್ಕೆ ₹25 ಸಾವಿರದಿಂದ ₹30 ಸಾವಿರವನ್ನು ಆಕೆಯ ತಪಾಸಣೆ, ಆರೈಕೆ ಹಾಗೂ ಶ್ರವಣ ಉಪಕರಣಗಳಿಗೆ ಖರ್ಚು ಮಾಡುತ್ತಿದ್ದೇನೆ. ನಾನು ವಾರ್ಷಿಕವಾಗಿ ₹10 ಲಕ್ಷ ಆದಾಯ ಪಡೆಯುತ್ತಿದ್ದೇನೆ.

ನನ್ನ ಪ್ರಶ್ನೆ ಏನೆಂದರೆ, ನನ್ನ ತಂಗಿಯ ವೈದ್ಯಕೀಯ ವೆಚ್ಚಕ್ಕೆ ನಾನು ಯಾವುದಾದರೂ ಆದಾಯ ತೆರಿಗೆಯ ಸೌಲಭ್ಯ ಪಡೆಯಬಹುದೇ? ಇದಕ್ಕೆ ಏನೆಲ್ಲಾ ಷರತ್ತುಗಳಿವೆ. ತೆರಿಗೆ ವಿನಾಯಿತಿಯನ್ನು ಕೇವಲ ಸ್ವತಃ ಸಮಸ್ಯೆ ಇದ್ದ ಸಂದರ್ಭದಲ್ಲಿ ಮಾತ್ರ ಪಡೆಯಬಹುದೇ ಅಥವಾ ನಮ್ಮ ಕುಟುಂಬದ ಮಂದಿಯ ಸಮಸ್ಯೆಗೂ ಅನ್ವಯಿಸುತ್ತದೆಯೇ? ಖರ್ಚು ಮಾಡಿದ ಬಗ್ಗೆ ಯಾವುದಾದರೂ ಬಿಲ್, ವರದಿ ಇತ್ಯಾದಿ ಇಟ್ಟುಕೊಳ್ಳಬೇಕೇ. ಈ ಬಗ್ಗೆ ತಿಳಿಸಿ.

ಉತ್ತರ: ಕೆಲವು ನಿರ್ದಿಷ್ಟ ಆರೋಗ್ಯ ಸಮಸ್ಯೆಗಳಿದ್ದ ಸಂದರ್ಭದಲ್ಲಿ ಆದಾಯ ತೆರಿಗೆ ಕಾನೂನಿನಡಿ ವಿನಾಯಿತಿ ಕಲ್ಪಿಸಲಾಗಿದೆ. ಇದು ಸ್ವತಃ ತೆರಿಗೆದಾರನಿಗೆ ಇರುವ ಆರೋಗ್ಯ ಸಮಸ್ಯೆ ಆಗಿರಬಹುದು ಅಥವಾ ಕುಟುಂಬದ ಸದಸ್ಯರಿಗೆ ಇರಬಹುದು. ಒಂದು ವೇಳೆ ಕುಟುಂಬದ ಮಂದಿಗೆ ಇರುವ ಆರೋಗ್ಯ ಸಮಸ್ಯೆಗೆ ತೆರಿಗೆ ವಿನಾಯಿತಿ ಪಡೆಯಲು ಅಂತಹ ವ್ಯಕ್ತಿಯನ್ನು ತೆರಿಗೆದಾರ ನೋಡಿಕೊಳ್ಳುತ್ತಿರಬೇಕು. ಈ ಎರಡೂ ಸೌಲಭ್ಯಗಳು ಕ್ರಮಾಗತವಾಗಿ ಸೆಕ್ಷನ್ 80ಯು ಹಾಗೂ ಸೆಕ್ಷನ್ 80ಡಿಡಿ ಇದರಡಿ ಲಭ್ಯವಿವೆ. ನಿಮಗೆ ಸಂಬಂಧಿಸಿದಂತೆ ಸೆಕ್ಷನ್ 80ಡಿಡಿ ಇದರಡಿ ತೆರಿಗೆ ಸೌಲಭ್ಯ ಸಿಗುತ್ತದೆ.

ನಿವಾಸಿ ಭಾರತೀಯನಾಗಿರುವ ಯಾವುದೇ ವ್ಯಕ್ತಿ ನಿರ್ದಿಷ್ಟ ಆರೋಗ್ಯ ಸಮಸ್ಯೆ ಇರುವ ತನ್ನ ಕುಟುಂಬದ ವ್ಯಕ್ತಿಗಳ ಆರೈಕೆ, ತಪಾಸಣೆ, ತರಬೇತಿ, ಪುನರ್ವಸತಿ ಇತ್ಯಾದಿಗೆ ಸಂಬಂಧಿಸಿ ವೆಚ್ಚ ಭರಿಸಿರಬೇಕು. ಅಥವಾ ಭಾರತೀಯ ವಿಮಾ ನಿಗಮ ಅಥವಾ ಇತರೆ ಮಾನ್ಯತೆ ಪಡೆದ ವಿಮಾ ಕಂಪನಿಗಳಲ್ಲಿ ಹಣ ನಿಕ್ಷೇಪಿಸಿ ಕುಟುಂಬದ ಸದಸ್ಯರನ್ನು ಮುಂದೆ ನೋಡಿಕೊಳ್ಳಲು ಯಾವುದೇ ಪಾವತಿ ಮಾಡಿದ್ದರೂ ಅಂತಹ ಮೊತ್ತಕ್ಕೆ ತೆರಿಗೆ ರಿಯಾಯಿತಿ ಇದೆ.

ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಂತೆ ಇಲ್ಲಿ ಹೇಳಿರುವ ಕುಟುಂಬದ ಸದಸ್ಯರೆಂದರೆ ಪತಿ–ಪತ್ನಿ, ಮಕ್ಕಳು, ಪೋಷಕರು, ವ್ಯಕ್ತಿಯ ಸಹೋದರರು ಮತ್ತು ಸಹೋದರಿಯರು ಒಳಗೊಳ್ಳುತ್ತಾರೆ. ನಿಮ್ಮ ಸನ್ನಿವೇಶದಲ್ಲಿ ನಿಮ್ಮ ತಂಗಿಯ ಶ್ರವಣದೋಷದ ನಿವಾರಣೆ ಬಗ್ಗೆ ಮಾಡುವ ವೆಚ್ಚಕ್ಕೆ ಈ ತೆರಿಗೆ ರಿಯಾಯಿತಿ ಸಿಗುತ್ತದೆ. ಅಂಗವೈಕಲ್ಯ ಶೇ 80ಕ್ಕಿಂತ ಹೆಚ್ಚಿದ್ದರೆ ₹1.25 ಲಕ್ಷದ ತನಕ ಆದಾಯದಲ್ಲಿ ವಿನಾಯಿತಿ ಲಭ್ಯ. ಈ ಪ್ರಮಾಣವು ಶೇ 40ಕ್ಕಿಂತ ಹೆಚ್ಚು ಇದ್ದ ಸಂದರ್ಭದಲ್ಲಿ ₹75 ಸಾವಿರ ವಿನಾಯಿತಿ ಪಡೆಯಬಹುದು. ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವಾಗ ನೀವು ನಿಗದಿತ ಫಾರಂ (ಫಾರಂ 10ಐಎ) ಭರ್ತಿ ಮಾಡಿರಬೇಕು. ಇಂತಹ ಸಮಸ್ಯೆ ಇರುವುದನ್ನು ಖಚಿತಪಡಿಸಿ ದೃಢೀಕರಿಸಿರುವ ವೈದ್ಯಕೀಯ ಪ್ರಮಾಣ ಪತ್ರದ ಪ್ರತಿಯನ್ನೂ ಹೊಂದಿರಬೇಕು.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಸಮಸ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ನಿಶ್ಚಿತ ರಿಯಾಯಿತಿ ಸಿಗುತ್ತದೆ. ಹಾಗಾಗಿ, ವೆಚ್ಚಕ್ಕೆ ನೇರ ಸಂಬಂಧ ಕಲ್ಪಿಸದೆ ಆರೋಗ್ಯ ಸಮಸ್ಯೆ ಮುಂದುವರಿಯುತ್ತಿರುವ ಹಿನ್ನೆಲೆ ಹಾಗೂ ಊರ್ಜಿತದಲ್ಲಿರುವ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ತೆರಿಗೆದಾರರಿಗೆ ರಿಯಾಯಿತಿ ಲಭ್ಯವಾಗುತ್ತದೆ. ನೀವು ಹೊಸ ತೆರಿಗೆ ಪದ್ಧತಿ ಅನುಸರಿಸುತ್ತಿದ್ದರೆ ಈ ತೆರಿಗೆ ಸೌಲಭ್ಯ ನಿಮಗೆ ಸಿಗುವುದಿಲ್ಲ ಎಂಬುದು ಗಮನದಲ್ಲಿ ಇರಲಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್:businessdesk@prajavani.co.in

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹14100
ಎಸಿ	₹7840
ಆರ್‌ಪಿ	₹11000
ಆರ್‌ಸಿ	₹6890

ಸಕ್ಕರೆ ಉತ್ಪಾದನೆ ಶೇ 7.7 ಇಳಿಕೆ



ನವದೆಹಲಿ (ಪಿಟಿಐ): 2023–24ನೇ ಸಾಲಿನ ಸಕ್ಕರೆ ಮಾರುಕಟ್ಟೆ ವರ್ಷದ ಮೊದಲ ಮೂರು ತಿಂಗಳ ಅವಧಿಯಲ್ಲಿ (ಅಕ್ಟೋಬರ್–ಡಿಸೆಂಬರ್) ದೇಶದಲ್ಲಿ ಸಕ್ಕರೆ ಉತ್ಪಾದನೆಯು ಶೇ 7.7ರಷ್ಟು ಇಳಿಕೆಯಾಗಿ, 112 ಲಕ್ಷ ಟನ್‌ಗೆ ತಲುಪಿದೆ ಎಂದು ಸಹಕಾರಿ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಯ ಒಕ್ಕೂಟ (ಎನ್‌ಎಫ್‌ಸಿಎಸ್‌ಎಫ್) ತಿಳಿಸಿದೆ.

ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಸಕ್ಕರೆ ಉತ್ಪಾದನೆ ಕಡಿಮೆಯಾಗಿರುವುದೇ ಇದಕ್ಕೆ ಕಾರಣ ಎಂದು ಹೇಳಿದೆ.

2022–23ರ ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ಉತ್ಪಾದನೆಯು 121.35 ಲಕ್ಷ ಟನ್ ಇತ್ತು.

2023–24ರ ಋತುವಿನಲ್ಲಿ ದೇಶದ ಒಟ್ಟು ಸಕ್ಕರೆ ಉತ್ಪಾದನೆಯು 305 ಲಕ್ಷ ಟನ್ ಆಗಲಿದೆ ಎಂದು ಒಕ್ಕೂಟವು ಅಂದಾಜಿಸಿದೆ.

ಕಳೆದ ಡಿಸೆಂಬರ್‌ವರೆಗೆ ದೇಶದಲ್ಲಿ ಒಟ್ಟು 511 ಕಾರ್ಖಾನೆಗಳು 1,223 ಲಕ್ಷ ಟನ್‌ನಷ್ಟು ಕಬ್ಬನ್ನು ಅರೆದಿವೆ ಎಂದು ಹೇಳಿದೆ. ಮಹಾರಾಷ್ಟ್ರದಲ್ಲಿ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ 38.20 ಲಕ್ಷ ಟನ್‌ನಷ್ಟು ಸಕ್ಕರೆ ಉತ್ಪಾದನೆ ಆಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 47.40 ಲಕ್ಷ ಟನ್ ಆಗಿತ್ತು. ಕರ್ನಾಟಕದಲ್ಲಿ 26.70 ಲಕ್ಷ ಟನ್ ಉತ್ಪಾದನೆಯಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 24 ಲಕ್ಷ ಟನ್ ಉತ್ಪಾದನೆಯಾಗಿತ್ತು. ಆದರೆ, ಉತ್ತರ ಪ್ರದೇಶದಲ್ಲಿ ಮಾತ್ರ ಉತ್ಪಾದನೆಯು 30.80 ಲಕ್ಷ ಟನ್‌ನಿಂದ 34.65 ಲಕ್ಷ ಟನ್‌ಗೆ ಏರಿಕೆ ಆಗಿದೆ.

ರನ್‌ವೇನಲ್ಲೇ ಹೊತ್ತಿ ಉರಿದ ವಿಮಾನ

ಡಿಕ್ಕಿ ಸಂಭವಿಸಿ ಅವಘಡ: ಐವರು ಸಾವು – 379 ಪ್ರಯಾಣಿಕರು ಪಾರು

ಟೋಕಿಯೊ (ರಾಯಿಟರ್ಸ್/ಎಪಿ): ಜಪಾನ್‌ನ ರಾಜಧಾನಿ ಟೋಕಿಯೊದ ಹನೆಡಾ ವಿಮಾನನಿಲ್ದಾಣದಲ್ಲಿ ಮಂಗಳವಾರ ಜಪಾನ್ ಏರ್‌ಲೈನ್ಸ್‌ನ ಏರ್‌ಬಸ್ ಎ–350 ವಿಮಾನ ರನ್‌ವೇನಲ್ಲಿ ಇದ್ದಾಗಲೇ ಹೊತ್ತಿ ಉರಿದಿದೆ.

ರನ್‌ವೇನಲ್ಲಿ ವಿಮಾನ ಇಳಿದ ಕೆಲ ಕ್ಷಣಗಳಲ್ಲಿ ಜಪಾನ್ ಕೋಸ್ಟ್‌ಗಾರ್ಡ್‌ನ ವಿಮಾನಕ್ಕೆ ಡಿಕ್ಕಿಯಾಗಿದ್ದರಿಂದ ಬೆಂಕಿ ಹೊತ್ತಿಕೊಂಡಿದೆ. ವಿಮಾನದಲ್ಲಿದ್ದ 367 ಪ್ರಯಾಣಿಕರು ಮತ್ತು 12 ಸಿಬ್ಬಂದಿ ಬೆಂಕಿಯು ವ್ಯಾಪಿಸುವ ಮೊದಲೇ ಸುರಕ್ಷಿತವಾಗಿ ಹೊರಗೆ ಬಂದಿದ್ದು, ಪಾರಾಗಿದ್ದಾರೆ. ಕನಿಷ್ಠ 17 ಪ್ರಯಾಣಿಕರು ಗಾಯಗೊಂಡಿದ್ದಾರೆ.



ರನ್‌ವೇಯಿಂದ ವಿಮಾನದ ಅವಶೇಷಗಳನ್ನು ತೆರವುಗೊಳಿಸಿದ ಸಿಬ್ಬಂದಿ –ಎಪಿ ಚಿತ್ರ

ಜಪಾನ್ ಕೋಸ್ಟ್‌ಗಾರ್ಡ್‌ನ ವಿಮಾನದಲ್ಲಿದ್ದ ಆರು ಸಿಬ್ಬಂದಿಗಳಲ್ಲಿ ಐವರು ಮೃತಪಟ್ಟಿದ್ದಾರೆ. ಭೂಕಂಪ ಬಾಧಿತ ಪ್ರದೇಶಗಳಿಗೆ ಪರಿಹಾರ ಕೊಂಡೊಯ್ಯಲು ಈ ವಿಮಾನ ಸಜ್ಜಾಗಿತ್ತು.

ಬೆಂಕಿ ಹೊತ್ತಿಕೊಳ್ಳುವ ಮೊದಲು ವಿಮಾನ ರನ್‌ವೇನಲ್ಲಿ ವೇಗವಾಗಿ ಚಲಿಸುತ್ತಿರುವ ದೃಶ್ಯವನ್ನು ಸರ್ಕಾರಿ ಟಿ.ವಿ. ವಾಹಿನಿ ‘ಎನ್‌ಎಚ್‌ಕೆ’ ಪ್ರಸಾರ ಮಾಡಿದೆ.

ಆದರೆ, ಟಿ.ವಿ. ವರದಿ ಪ್ರಕಾರ, ವಿಮಾನವು ಕೋಸ್ಟ್‌ಗಾರ್ಡ್ ನಿರ್ವಹಣೆಯ ವಿಮಾನವೊಂದಕ್ಕೆ ರನ್‌ವೇನಲ್ಲಿ ಡಿಕ್ಕಿ ಹೊಡೆದದ್ದೇ ಅವಘಡಕ್ಕೆ ಕಾರಣವಾಗಿದೆ. ಅಧಿಕಾರಿಗಳು ಈ ಸಂಬಂಧ ಯಾವುದೇ ಪ್ರತಿಕ್ರಿಯೆಯನ್ನು ನೀಡಿಲ್ಲ.

ವಿಮಾನದ ಕಿಟಕಿಗಳಿಂದ ಬೆಂಕಿಯ ಜ್ವಾಲೆಯು ಹೊರಹೊಮ್ಮುತ್ತಿರುವ ಹಾಗೂ ರಕ್ಷಣಾ ಕಾರ್ಯಕರ್ತರು ಬೆಂಕಿಯನ್ನು ನಂದಿಸುವ ಕಾರ್ಯದಲ್ಲಿ ನಿರತರಾಗಿರುವ ದೃಶ್ಯಗಳನ್ನೂ ಟಿ.ವಿ.ವಾಹಿನಿ ಪ್ರಸಾರ ಮಾಡಿದೆ. ಜಪಾನ್ ಕೋಸ್ಟ್‌ಗಾರ್ಡ್ ವಿಮಾನದ ಐವರು ಸಿಬ್ಬಂದಿ ಮೃತಪಟ್ಟಿರುವುದನ್ನು ಸಾರಿಗೆ ಸಚಿವ ಟೆಸುವೊ ಸೈಟೊ ದೃಢಪಡಿಸಿದ್ದಾರೆ. ಜಪಾನ್ ಕೋಸ್ಟ್‌ಗಾರ್ಡ್ ವಿಮಾನದ ಕ್ಯಾಪ್ಟನ್ ಗಾಯಗೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಸಿಪ್ಪೆಗೋಟು	20200-20200	**ಶಿರಸಿ**	
ಬಂಟ್ವಾಳ		**ಶಿವಮೊಗ್ಗ**		ಬೆಟ್ಟೆ	39499-45529
ಕೋಕ	15000-27500	ಗೊರಬಲು	20000-38609	ಬಿಳಿಗೋಟು	28699-35999
ಹೊಸತು	27500-36000	ಹೊಸತು	43009-48399	ಚಾಲಿ	37251-39249
ಹಳತು	41000-43000	ರಾಶಿ	35009-48799	ಕೆಂಪುಗೋಟು	31099-34699
ಕಾರ್ಕಳ		**ಸಿದ್ದಾಪುರ**		ರಾಶಿ	43119-47699
ಹೊಸತು	25000-36500	ಬಿಳಿಗೋಟು	31899-33409	**ಯಲ್ಲಾಪುರ**	
ಹಳತು	30000-44000	ಚಾಲಿ	37139-38419	ಅಪಿ	56700-62369
ಸಾಗರ		ಕೋಕ	30000-33100	ಬಿಳಿಗೋಟು	24899-34360
ಬಿಳಿಗೋಟು	31809-31809	ಹೊಸಚಾಲಿ	32709-32709	ಚಾಲಿ	36609-38919
ಚಾಲಿ	29299-37109	ಕೆಂಪುಗೋಟು	31089-32609	ಕೋಕ	23899-31699
ಕೋಕ	33989-33989	ರಾಶಿ	43199-48199	ಕೆಂಪುಗೋಟು	26899-36919
ಕೆಂಪುಗೋಟು	36099-38666	ತಟ್ಟಿಬೆಟ್ಟೆ	39899-47789	ರಾಶಿ	46750-54469
ರಾಶಿ	43199-47989			ತಟ್ಟಿಬೆಟ್ಟೆ	37029-45209

ಗುಂಡಿನ ಚಕಮಕಿ ಏಳು ಮಂದಿಗೆ ಗಾಯ

ಗುವಾಹಟಿ: ಕುಕಿ ಸಮುದಾಯದವರು ಪ್ರಬಲರಾಗಿರುವ ಮಣಿಪುರದ ತೆಂಗ್‌ನೌಪಾಲ್ ಜಿಲ್ಲೆಯಲ್ಲಿ ಈ ಸಮುದಾಯದ ಬಂಡುಕೋರರು ಮತ್ತು ಭದ್ರತಾ ಪಡೆಗಳ ನಡುವೆ ಮಂಗಳವಾರ ನಡೆದ ಗುಂಡಿನ ಚಕಮಕಿಯಲ್ಲಿ ಮಣಿಪುರ ಪೊಲೀಸ್‌ನ ನಾಲ್ವರು ಕಮಾಂಡೊಗಳು ಸೇರಿದಂತೆ ಒಟ್ಟು ಏಳು ಮಂದಿ ಗಾಯಗೊಂಡಿದ್ದಾರೆ.

ಇಬ್ಬರು ನಾಗರಿಕರನ್ನು ಕರೆದೊಯ್ಯಲು ಭದ್ರತಾ ಸಿಬ್ಬಂದಿ ಯತ್ನಿಸಿದ್ದಾಗ, ಸ್ಥಳೀಯರು ಅದನ್ನು ತೀವ್ರವಾಗಿ ವಿರೋಧಿಸಿದ್ದು ಗುಂಡಿನ ಚಕಮಕಿಗೆ ಕಾರಣವಾಗಿದೆ. ಹಲವು ಗಂಟೆಗಳ ಕಾಲ ಗುಂಡಿನ ಚಕಮಕಿ ನಡೆದಿದೆ.

ಇದರಿಂದಾಗಿ ಪಟ್ಟಣದಲ್ಲಿ ಬಿಗುವಿನ ಪರಿಸ್ಥಿತಿ ತಲೆದೋರಿತ್ತು. ಮೇ ತಿಂಗಳಿನಿಂದಲೂ ಇಲ್ಲಿ ಘರ್ಷಣೆ ನಡೆಯುತ್ತಿದೆ. ಗಾಯಗೊಂಡಿದ್ದ ನಾಲ್ವರು ಪೊಲೀಸ್ ಕಮಾಂಡೊಗಳು ಮತ್ತು ಬಿಎಸ್‌ಎಫ್ ಸಿಬ್ಬಂದಿಯನ್ನು ವಿಮಾನದಲ್ಲಿ ಇಂಫಾಲ್‌ಗೆ ಕರೆತರಲಾಗಿದ್ದು, ಪ್ರಾದೇಶಿಕ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಚಿಕಿತ್ಸೆಗಾಗಿ ದಾಖಲು ಮಾಡಲಾಗಿದೆ. ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಘರ್ಷಣೆಯಿಂದಾಗಿ ಇದುವರೆಗೂ ಸುಮಾರು 200 ಜನರು ಮೃತ ಪಟ್ಟಿದ್ದಾರೆ. 60 ಸಾವಿರಕ್ಕೂ ಅಧಿಕ ಜನರು ಅತಂತ್ರರಾಗಿದ್ದಾರೆ. ಸೋಮವಾರ ನಡೆದಿದ್ದ ಗುಂಡಿನ ಚಕಮಕಿಯಲ್ಲಿ ಮೈತೇಯಿ ಸಮುದಾಯಕ್ಕೆ ಸೇರಿದ್ದ ನಾಲ್ವರು ಮೃತಪಟ್ಟಿದ್ದು, ಇತರೆ ಐವರು ಗಾಯಗೊಂಡಿದ್ದರು.

ಭೂಕಂಪ: 55 ಜನರ ಸಾವು

ವಾಜಿಮಾ, ಜಪಾನ್ (ಎಎಫ್‌ಪಿ): ಜಪಾನ್‌ನಲ್ಲಿ ಸೋಮವಾರ ಸಂಭವಿಸಿದ್ದ 7.5 ತೀವ್ರತೆಯ ಭೂಕಂಪದಿಂದ 55 ಮಂದಿ ಸತ್ತಿದ್ದಾರೆ. ಭಾರಿ ಪ್ರಮಾಣದಲ್ಲಿ ಆಸ್ತಿ ನಷ್ಟವಾಗಿದೆ. ಕುಸಿದ ಕಟ್ಟಡಗಳಡಿ ಸಿಲುಕಿರುವವರ ರಕ್ಷಣೆಗೆ ಶೋಧ ನಡೆದಿದೆ.

ದ್ವೀಪ ಪ್ರದೇಶ ಹೊನ್ಶುವಿನ ಇಶಿಕಾವಾ ವಲಯದಲ್ಲಿ ಭೂಕಂಪದ ತೀವ್ರತೆಯು ಹೆಚ್ಚಾಗಿದೆ. ಬಹುಮಹಡಿ ಕಟ್ಟಡ ಸೇರಿದಂತೆ ಹಲವು ಮನೆಗಳು ಉರುಳಿವೆ. ಹೆಚ್ಚಿನ ರಸ್ತೆಗಳು ಬಿರುಕುಬಿಟ್ಟಿವೆ. ಅಲ್ಲಲ್ಲಿ ಬೆಂಕಿ ಅವಘಡಗಳು ವರದಿಯಾಗಿದ್ದವು.

55 ಜನರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಆಡಳಿತ ತಿಳಿಸಿದೆ. ಆದರೆ, ಅವಶೇಷಗಳಡಿ ಸಿಲುಕಿರುವವರ ರಕ್ಷಣೆಗಾಗಿ ಶೋಧ ಕಾರ್ಯ ಚುರುಕಿನಿಂದ ಸಾಗಿದ್ದು, ಸಾವಿನ ಸಂಖ್ಯೆ ಇನ್ನಷ್ಟು ಏರಿಕೆಯಾಗುವ ಸಾಧ್ಯತೆಗಳಿವೆ.

ಸಂಕ್ಷಿಪ್ತ ಸುದ್ದಿ

‘ಆಧಾರ್ ಜೋಡಣೆ: ರಾಜ್ಯ ಸರ್ಕಾರಗಳ ವಿರುದ್ಧ ಕ್ರಮ’

ನವದೆಹಲಿ (ಪಿಟಿಐ): ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಕಾರ್ಮಿಕರ ಜಾಬ್ ಕಾರ್ಡ್ ವಿವರಗಳು ಆಧಾರ್ ಆಧಾರಿತ ಪಾವತಿ ವ್ಯವಸ್ಥೆ (ಎಬಿಪಿಎಸ್) ಜೊತೆ ಜೋಡಣೆ ಆಗದಿದ್ದರೆ, ರಾಜ್ಯ ಸರ್ಕಾರಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆಯೇ ಹೊರತು ಕಾರ್ಮಿಕರ ವಿರುದ್ಧ ಅಲ್ಲ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಹೇಳಿದ್ದಾರೆ.

ಎಬಿಪಿಎಸ್‌ಅನ್ನು ಪಾರದರ್ಶಕತೆ ಕಾಯ್ದುಕೊಳ್ಳುವ ಸಲುವಾಗಿ ಕಡ್ಡಾಯಗೊಳಿಸಲಾಗಿದೆ ಎಂದಿದ್ದಾರೆ.

‘ಎಬಿಪಿಎಸ್ ಜೊತೆ ಬ್ಯಾಂಕ್ ಖಾತೆ ಜೋಡಣೆ ಆಗದ ಕಾರ್ಮಿಕರ ವೇತನ ಪಾವತಿ ಕುರಿತು ಕೇಳಿದ ಪ್ರಶ್ನೆಗೆ, ‘ಈ ಕುರಿತು ನಾವು ರಾಜ್ಯಗಳ ಜೊತೆ ಮಾತನಾಡಲಿದ್ದೇವೆ. ಸಮಸ್ಯೆಗಳು ಕಂಡುಬಂದರೆ, ಮುಂದಿನ ಕ್ರಮಗಳ ಕುರಿತು ನಿರ್ಧಾರ ತೆಗೆದುಕೊಳ್ಳುತ್ತೇವೆ’ ಎಂದರು.

ಜನವರಿ 2ಕ್ಕೆ ಅನ್ವಯಿಸಿ ಗ್ರಾಮೀಣಾಭಿವೃದ್ಧಿ ಸಚಿವಾಲಯ ಒದಗಿಸಿರುವ ದತ್ತಾಂಶದ ಪ್ರಕಾರ, ಸುಮಾರು 14.32 ಕೋಟಿ ಸಕ್ರಿಯ ನರೇಗಾ ಕಾರ್ಮಿಕರಿದ್ದಾರೆ. ಅವರಲ್ಲಿ 14.08 ಕೋಟಿ (ಶೇ 98.31) ಕಾರ್ಮಿಕರ ಬ್ಯಾಂಕ್ ಖಾತೆಗಳು ಆಧಾರ್‌ಗೆ ಜೋಡಣೆ ಆಗಿವೆ. 12.54 ಕೋಟಿ ಕಾರ್ಮಿಕರು ಆಧಾರ್ ಆಧರಿತ ಪಾವತಿ ವ್ಯವಸ್ಥೆ ಅಡಿ ವೇತನ ಪಡೆಯಲು ಅರ್ಹರಿದ್ದಾರೆ.

ಜಾತಿ ಸಮೀಕ್ಷೆಯ ವಿವರ ಪ್ರಕಟಿಸಲು ಸೂಚನೆ

ನವದೆಹಲಿ (ಪಿಟಿಐ): ಜಾತಿ ಸಮೀಕ್ಷೆಯಲ್ಲಿ ಇರುವ ಜಾತಿವಾರು ವಿವರಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಬೇಕು ಎಂದು ಬಿಹಾರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ಸೂಚಿಸಿದೆ. ವಿವರಗಳನ್ನು ಸಾರ್ವಜನಿಕವಾಗಿ ಪ್ರಕಟಿಸಿದಾಗ, ಅದರ ಬಗ್ಗೆ ತಕರಾರುಗಳು ಇದ್ದವರು ಅದನ್ನು ಪ್ರಶ್ನಿಸಲು ಸಾಧ್ಯವಾಗುತ್ತದೆ ಎಂದು ಕೋರ್ಟ್ ಹೇಳಿದೆ.

ಜಾತಿ ಸಮೀಕ್ಷೆಯ ದತ್ತಾಂಶದ ವಿವರಗಳು ಸಾರ್ವಜನಿಕರಿಗೆ ಲಭ್ಯವಿಲ್ಲದೆ ಇರುವುದರ ಬಗ್ಗೆ ತಾನು ಕಳವಳ ಹೊಂದಿರುವುದಾಗಿ ಕೋರ್ಟ್ ಹೇಳಿದೆ.

ಜಾತಿ ಸಮೀಕ್ಷೆಯನ್ನು ಹಾಗೂ ಜಾತಿ ಸಮೀಕ್ಷೆ ನಡೆಸುವ ಬಿಹಾರ ಸರ್ಕಾರದ ತೀರ್ಮಾನವನ್ನು ಎತ್ತಿಹಿಡಿದ ಪಟ್ನಾ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿಗಳನ್ನು ಸಲ್ಲಿಸಲಾಗಿದೆ. ಇವುಗಳ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರಿದ್ದ ವಿಭಾಗೀಯ ಪೀಠವು ನಡೆಸಿತು.

ಜಾತಿ ಸಮೀಕ್ಷೆಗೆ ಸಂಬಂಧಿಸಿದಂತೆ ವರದಿಯನ್ನು ಕೋರ್ಟ್‌ಗೆ ಸಲ್ಲಿಸಲು ಬಿಹಾರ ಸರ್ಕಾರಕ್ಕೆ ಸೂಚಿಸಿರುವ ನ್ಯಾಯಪೀಠವು, ವಿಚಾರಣೆಯನ್ನು ಫೆಬ್ರುವರಿ 5ಕ್ಕೆ ಮುಂದೂಡಿದೆ.

ಸಂಸತ್ ಭದ್ರತಾ ಲೋಪ: ಬಂಧಿತರ ವಿಚಾರಣೆ

ನವದೆಹಲಿ (ಪಿಟಿಐ): ಸಂಸತ್‌ನಲ್ಲಿ ಭದ್ರತಾ ಲೋಪದ ಪ್ರಕರಣದಲ್ಲಿ ಬಂಧಿಸಲಾಗಿರುವ ಆರು ಮಂದಿಯನ್ನು ದೆಹಲಿ ಪೊಲೀಸರು ಎರಡನೇ ಬಾರಿಗೆ ಮುಖಾಮುಖಿ ತನಿಖೆಗೆ ಒಳಪಡಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣದ ಸಂಬಂಧ ಸಾಗರ್ ಶರ್ಮಾ, ಮನೋರಂಜನ್ ಡಿ., ನೀಲಂ ಆಜಾದ್, ಅಮೋಲ್ ಶಿಂದೆ, ಲಲಿತ್ ಝಾ ಮತ್ತು ಮಹೇಶ್ ಕುಮಾವತ್ ಅವರನ್ನು ಬಂಧಿಸಲಾಗಿದ್ದು, ಜನವರಿ 5ರವರೆಗೂ ಪೊಲೀಸರ ವಶದಲ್ಲಿ ಇರುತ್ತಾರೆ. ‘ರಕ್ಷಣೆ ಭೇದಿಸಿ ಲೋಕಸಭೆಯ ಸದನ ಪ್ರವೇಶಿಸಿದ್ದರ ಹಿಂದಿನ ಉದ್ದೇಶ ಏನು ಎಂಬುದನ್ನು ತಿಳಿಯಲು ಮತ್ತೊಮ್ಮೆ ವಿಚಾರಣೆಗೆ ಒಳಪಡಿಸಲಾಗುತ್ತಿದೆ. ಬಂಧಿತರ ವಿಚಾರಣೆಯನ್ನು ಪ್ರತ್ಯೇಕ ತಂಡಗಳು ನಡೆಸುತ್ತಿವೆ’ ಎಂದು ತಿಳಿಸಿದ್ದಾರೆ.

ಆಯ್ಕೆ ಮುನ್ನ ಮೂರ್ತಿಯ ದೀರ್ಘಾವಧಿ ಬಾಳಿಕೆ ಕುರಿತು ತಾಂತ್ರಿಕ ವರದಿ ಪರಿಶೀಲನೆ ● ರಾಮ ಮಂದಿರ ಟ್ರಸ್ಟ್‌ನಿಂದ ಸ್ಪಷ್ಟನೆ

‘ರಾಮಲಲ್ಲಾ ಮೂರ್ತಿ: ಅಂತಿಮ ಆಯ್ಕೆ ಆಗಿಲ್ಲ’

ಅಯೋಧ್ಯೆ (ಪಿಟಿಐ): ‘ಅಯೋಧ್ಯೆಯ ರಾಮ ಮಂದಿರದಲ್ಲಿ ಪ್ರತಿಷ್ಠಾಪಿಸಬೇಕಿರುವ ರಾಮಲಲ್ಲಾ ಮೂರ್ತಿ ಆಯ್ಕೆ ಕುರಿತು ಇನ್ನೂ ಅಂತಿಮ ತೀರ್ಮಾನ ಕೈಗೊಂಡಿಲ್ಲ’ ಎಂದು ರಾಮ ಮಂದಿರ ಟ್ರಸ್ಟ್ ಮಂಗಳವಾರ ಸ್ಪಷ್ಟಪಡಿಸಿದೆ.

‘ಪ್ರತಿಷ್ಠಾಪನೆಗೆ ಮೂರು ಮೂರ್ತಿಗಳು ಸಿದ್ಧವಾಗಿವೆ. ಶಂಕರಾಚಾರ್ಯ ವಿಜಯೇಂದ್ರ ಸರಸ್ವತಿ ಮತ್ತು ಇತರೆ ಸ್ವಾಮೀಜಿಗಳ ಜತೆಗೆ ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದು ಟ್ರಸ್ಟ್ ಪದಾಧಿಕಾರಿಗಳು ತಿಳಿಸಿದ್ದಾರೆ.

‘ಟ್ರಸ್ಟ್ ಈ ಸಂಬಂಧ ತೆಗೆದುಕೊಳ್ಳುವ ತೀರ್ಮಾನವನ್ನು ಸೂಕ್ತ ಕಾಲದಲ್ಲಿ ಸಾರ್ವಜನಿಕವಾಗಿ ಪ್ರಕಟಿಸಲಾಗುವುದು’ ಎಂದು ಟ್ರಸ್ಟ್‌ನ ಕಚೇರಿ ಉಸ್ತುವಾರಿಯಾಗಿರುವ ಪ್ರಕಾಶ್ ಗುಪ್ತಾ ಅವರು ತಿಳಿಸಿದ್ದಾರೆ.

ಅಂತಿಮವಾಗಿ ಆಯ್ಕೆಯಾಗುವ ಮೂರ್ತಿಯನ್ನು ಜನವರಿ 22ರಂದು ನಡೆಯಲಿರುವ ಸಮಾರಂಭದಲ್ಲಿ ಪ್ರತಿಷ್ಠಾಪಿಸಲಾಗುತ್ತದೆ.

ರಾಮ ಮಂದಿರದಲ್ಲಿ ಪ್ರತಿಷ್ಠಾಪಿಸಲು, ಶಿಲ್ಪಿಗಳಾದ ಕರ್ನಾಟಕದ ಅರುಣ್ ಯೋಗಿರಾಜ್, ಗಣೇಶ್ ಭಟ್ ಮತ್ತು ಜೈಪುರದ ಸತ್ಯನಾರಾಯಣ ಪಾಂಡೆ ಅವರು ಮೂರ್ತಿ ಕೆತ್ತನೆ ಮಾಡಿದ್ದಾರೆ. ಕರ್ನಾಟಕ ಇಬ್ಬರು ಶಿಲ್ಪಿಗಳು ರಾಜ್ಯದ್ದೇ ಕಲ್ಲು ಬಳಕೆ ಮಾಡಿದ್ದಾರೆ. ಪಾಂಡೆ ಅವರು ರಾಜಸ್ಥಾನದಿಂದ ತರಿಸಲಾಗಿದ್ದ ಕಲ್ಲು ಬಳಕೆ ಮಾಡಿದ್ದಾರೆ.

ಅಂತಿಮವಾಗಿ ಪ್ರತಿಷ್ಠಾಪಿಸಬೇಕಾದ ಮೂರ್ತಿಯನ್ನು ಆಯ್ಕೆ ಮಾಡುವ ಮುನ್ನ, ಮೂರ್ತಿಯ ದೀರ್ಘಾವಧಿ ಬಾಳಿಕೆ ಕುರಿತು ತಾಂತ್ರಿಕ ವರದಿಯನ್ನು ಪಡೆಯಲಾಗುವುದು ಎಂದು ಟ್ರಸ್ಟ್ ಅಧಿಕಾರಿಗಳು ತಿಳಿಸಿದ್ದಾರೆ.

ಅಂತಿಮ ಪ್ರತಿಷ್ಠಾಪನೆಗಾಗಿ ಮೈಸೂರಿನ ಅರುಣ್ ಯೋಗಿರಾಜ್ ಅವರು ರೂಪಿಸಿದ್ದ ಮೂರ್ತಿ ಆಯ್ಕೆಯಾಗಿದೆ ಎಂದು ಬಿಜೆಪಿಯ ಹಲವು ಮುಖಂಡರು ಸೋಮವಾರ ಜಾಲತಾಣಗಳಲ್ಲಿ ಅಭಿನಂದನಾ ಸಂದೇಶ ಪೋಸ್ಟ್ ಮಾಡಿದ್ದರು.

ಆದರೆ, ಸ್ವತಃ ಅರುಣ್ ಯೋಗಿರಾಜ್ ಅವರು, ‘ಮೂರ್ತಿ ಆಯ್ಕೆಗೆ ಕುರಿತಾಗಿ ನನಗೆ ಅಧಿಕೃತವಾಗಿ ಯಾವುದೇ ಮಾಹಿತಿ ಬಂದಿಲ್ಲ. ಆದರೆ, ಮೂವರು ಶಿಲ್ಪಿಗಳಲ್ಲಿ ನಾನೂ ಒಬ್ಬ ಎಂಬುದು ನನಗೆ ಖುಷಿ ನೀಡಿದೆ’ ಎಂದಿದ್ದರು.



ತಮಿಳುನಾಡು ಬಿಜೆಪಿ ನಾಯಕರು ನಟ ರಜನಿಕಾಂತ್ ಅವರನ್ನು ಮಂಗಳವಾರ ಭೇಟಿ ಆಗಿ, ಅಯೋಧ್ಯೆಯಲ್ಲಿ ಜ.22ರಂದು ನಡೆಯಲಿರುವ ರಾಮ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಆಹ್ವಾನಿಸಿದರು —ಪಿಟಿಐ ಚಿತ್ರ

‘ಪ್ರಾಣ ಪ್ರತಿಷ್ಠಾಪನೆ, ಚುನಾವಣೆ ಎರಡೂ ಶುಭಪ್ರದ’



ಸತ್ಯೇಂದ್ರ ದಾಸ್

ಅಯೋಧ್ಯೆ (ಪಿಟಿಐ): ‘2024ನೇ ವರ್ಷವು ಮಹತ್ವದ್ದಾಗಿದೆ. ಈ ವರ್ಷವೇ ರಾಮ ಮಂದಿರದ ಗರ್ಭ ಗುಡಿಯಲ್ಲಿ ರಾಮಲಲ್ಲಾ ಕುಳಿತುಕೊಳ್ಳಲಿದ್ದಾನೆ. ಜೊತೆಗೆ, ಲೋಕಸಭೆ ಚುನಾವಣೆಯೂ ನಡೆಯಲಿದೆ. ಎರಡೂ ಶುಭ ಪ್ರದವಾಗಲಿವೆ’ ಎಂದು ಅಯೋಧ್ಯೆ ರಾಮ ಮಂದಿರದ ಮುಖ್ಯ ಅರ್ಚಕ ಸತ್ಯೇಂದ್ರ ದಾಸ್ ಅವರು ಹೇಳಿದ್ದಾರೆ.

ಪಿಟಿಐ ಸುದ್ದಿಸಂಸ್ಥೆ ಜೊತೆ ಮಾತನಾಡಿದ ಅವರು, ‘ಕೇವಲ ಶಾಂತಿಯಲ್ಲ. ರಾಮ ರಾಜ್ಯವೇ ಬರುತ್ತಿದೆ. ದುಃಖ, ನೋವು, ಉದ್ವೇಗ ಎಲ್ಲವೂ ದೂರಾಗಿ, ಎಲ್ಲರೂ ಸಂತೋಷದಿಂದ ಇರುತ್ತಾರೆ’ ಎಂದು ಅವರು ಭವಿಷ್ಯದ ಕುರಿತು ಹೇಳಿದರು.

ಅಯೋಧ್ಯೆಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆ. ವಿಮಾನ ನಿಲ್ದಾಣ ಸಿದ್ಧವಾಗುತ್ತಿದೆ. ಹೊಸ ರೈಲ್ವೆ ನಿಲ್ದಾಣ ನಿರ್ಮಿಸಲಾಗಿದೆ. ರಾಮಪಥವನ್ನು ಅಭಿವೃದ್ಧಿಪಡಿಸಲಾಗಿದೆ. ಅದೇರೀತಿ ಹಲವು ರಸ್ತೆಗಳನ್ನು ಅಭಿವೃದ್ಧಿಗೊಳಿಸುವ ಪ್ರಸ್ತಾವವಿದೆ. ಅಯೋಧ್ಯೆಯು ಅದ್ದೂರಿಯಾಗಿ ಕಾಣಲಿದೆ. ಜನರು ಅಯೋಧ್ಯೆಗೆ ಬಂದು ರಾಮನ ದರ್ಶನ ಪಡೆಯಲಿದ್ದಾರೆ ಎಂದು ಹೇಳಿದರು.

ರಾಮ ಮಂದಿರದ ಮರದ ಪ್ರತಿಕೃತಿಗಳಿಗೆ ಬೇಡಿಕೆ

ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ರಾಮ ಮಂದಿರದಲ್ಲಿ ಮೂರ್ತಿ ಪ್ರತಿಷ್ಠಾಪನೆ ದಿನ ಹತ್ತಿರವಾಗುತ್ತಿದ್ದಂತೆ, ರಾಮ ಮಂದಿರದ ಮರದ ಪ್ರತಿಕೃತಿಗಳಿಗೆ ಬೇಡಿಕೆ ಹೆಚ್ಚಾಗಿದೆ. ಅಮೆರಿಕ, ನ್ಯೂಜಿಲೆಂಡ್ ದೇಶಗಳಿಂದಲೂ ಪ್ರತಿಕೃತಿಗೆ ಬೇಡಿಕೆ ಬರುತ್ತಿದೆ ಎಂದು ತಯಾರಿಕಾ ಘಟಕವೊಂದರ ಮಾಲೀಕರೊಬ್ಬರು ಹೇಳಿದ್ದಾರೆ.

ಮರದ ಪ್ರತಿಕೃತಿಗಳಲ್ಲದೇ, ‘ಶ್ರೀ ರಾಮ’ ಎಂದು ಬರೆಯಲಾಗಿರುವ ಲೋಹದ ಉಂಗುರಗಳು, ಲಾಕೆಟ್‌ಗಳು, ಕೈಕಡಗಗಳು ಮತ್ತು ವಸ್ತ್ರಗಳಿಗೆ ಭಾರಿ ಬೇಡಿಕೆಯಿದೆ ಎಂದು ಅಯೋಧ್ಯೆಯ ಅಂಗಡಿಯ ಮಾಲೀಕರೊಬ್ಬರು ಹೇಳಿದ್ದಾರೆ.

ರಾಮ ಮಂದಿರದ ಮರದ ಪ್ರತಿಕೃತಿಗಳಿಗೆ ಬೇಡಿಕೆ ಹೆಚ್ಚಾಗಿದೆ. ಅದರಲ್ಲೂ 4 ಇಂಚು ಉದ್ದ, 5 ಇಂಚು ಅಗಲದ ಚಿಕ್ಕ ಗಾತ್ರದ ರಾಮಮಂದಿರದ ಪ್ರತಿಕೃತಿಗಳಿಗೆ ಸ್ಥಳೀಯವಾಗಿ ಹೆಚ್ಚಿನ ಬೇಡಿಕೆ ಇದೆ. ಹೊರ ರಾಜ್ಯಗಳು, ದೇಶಗಳಿಂದಲೂ ಬೇಡಿಕೆ ಬರುತ್ತಿದೆ. ಚಿಕ್ಕ ಗಾತ್ರದ ರಾಮಮಂದಿರದ ಮಾದರಿಯು ₹100ನಂತೆ ಮಾರಾಟವಾಗುತ್ತಿದೆ. ಅತ್ಯಂತ ದೊಡ್ಡ ಗಾತ್ರದ ಪ್ರತಿಕೃತಿಯ ಬೆಲೆ ₹8000 ಇದೆ ಎಂದು ಪ್ರತಿಕೃತಿಗಳ ತಯಾರಿಕೆಯಲ್ಲಿ ತೊಡಗಿರುವ ಅವಧ್ ಆದಿತ್ಯ ಸಂಸ್ಥೆಯ ಮಾಲೀಕ ಆದಿತ್ಯ ಸಿಂಗ್ ಹೇಳಿದ್ದಾರೆ.

ಅಯೋಧ್ಯೆಯ ರಾಮಪಥ ರಸ್ತೆಯ ಇಕ್ಕೆಲಗಳಲ್ಲಿರುವ ಹಲವು ಅಂಗಡಿಗಳಲ್ಲಿ ಮಂದಿರದ ಪ್ರತಿಕೃತಿಗಳನ್ನು ಮಾರಾಟ ಮಾಡಲಾಗುತ್ತಿದೆ. ರಾಮನ ಹೆಸರಿರುವ ಎಲ್ಲಾ ವಸ್ತುಗಳಿಗೂ ಈಗ ಭಾರಿ ಬೇಡಿಕೆಯಿದೆ ಎಂದು ವ್ಯಾಪಾರಿ ಹೃತಿಕ್ ಗುಪ್ತಾ ಹೇಳಿದ್ದಾರೆ.

‘ಮಹಾರಾಷ್ಟ್ರ, ಗೋವಾ, ದೆಹಲಿ, ಹರಿಯಾಣ, ಪಂಜಾಬ್, ಗುಜರಾತ್ ಮತ್ತಿತರ ಸ್ಥಳಗಳಿಂದ ಮಂದಿರದ ಪ್ರತಿಕೃತಿಗೆ ಬೇಡಿಕೆ ಇದೆ. ಕೆಲವರು 100 ಪ್ರತಿಕೃತಿಗಾಗಿ ಬೇಡಿಕೆ ಇರಿಸುತ್ತಿದ್ದಾರೆ. ನಮ್ಮಲ್ಲಿ ಮಾನವ ಸಂಪನ್ಮೂಲದ ಕೊರತೆ ಇದೆ. ಹಿಗಾಗಿ ಪ್ರತಿ ಗ್ರಾಹಕನಿಗೆ ಗರಿಷ್ಠ 10 ಪ್ರತಿಕೃತಿಗಳಿಗೆ ಮಾತ್ರ ಒದಗಿಸಲು ಸಾಧ್ಯವಾಗುತ್ತಿದೆ. ಒಂದು ದಿನದಲ್ಲಿ ಒಬ್ಬ ಕಾರ್ಮಿಕನಿಂದ ಕೇವಲ ಐದು ಪ್ರತಿಕೃತಿಗಳನ್ನು ಜೋಡಿಸಲು ಸಾಧ್ಯವಾಗುತ್ತದೆ’ ಎಂದು ಅವಧ್ ಆದಿತ್ಯ ಸಂಸ್ಥೆಯ ಉದ್ಯೋಗಿಯೊಬ್ಬರು ಹೇಳಿದ್ದಾರೆ.





ಅಯೋಧ್ಯೆ ರಾಮಮಂದಿರದ ಮರದ ಪ್ರತಿಕೃತಿಯನ್ನು ಕುಶಲಕರ್ಮಿಯೊಬ್ಬರು ಪ್ರದರ್ಶಿಸಿದರು (ಎಡಚಿತ್ರ) ಅಂಗಡಿಯೊಂದರಲ್ಲಿ ಮಾರಾಟಕ್ಕಿಟ್ಟಿದ್ದ ರಾಮಮಂದಿರ ಆಕೃತಿಯ ಕೀ ಚೈನ್ —ಪಿಟಿಐ ಚಿತ್ರ

ರಾಮ ಮಂದಿರ ಭೇಟಿಗೆ ಬಿಜೆಪಿ ಕಾರ್ಯಕರ್ತರಿಂದ ನೆರವು

ನವದೆಹಲಿ (ಪಿಟಿಐ): ಅಯೋಧ್ಯೆಯ ರಾಮ ಮಂದಿರದಲ್ಲಿ ರಾಮನ ಮೂರ್ತಿಯ ಪ್ರತಿಷ್ಠಾಪನೆಯು ಜನವರಿ 22ರಂದು ಪೂರ್ಣಗೊಂಡ ನಂತರದಲ್ಲಿ, ಮಂದಿರಕ್ಕೆ ಭೇಟಿ ನೀಡಲು ಬಯಸುವ ಭಕ್ತರಿಗೆ ಬಿಜೆಪಿ ಕಾರ್ಯಕರ್ತರು ನೆರವು ಒದಗಿಸಲಿದ್ದಾರೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಪಕ್ಷದ ನಾಯಕರ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಕಾರ್ಯತಂತ್ರ ಏನಿರಬೇಕು ಹಾಗೂ ಚುನಾವಣೆಗೆ ಪಕ್ಷವು ಎಷ್ಟರಮಟ್ಟಿಗೆ ಸಿದ್ಧವಾಗಿದೆ ಎಂಬ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆದಿದೆ ಎಂದು ಗೊತ್ತಾಗಿದೆ.

‘ಜನವರಿ 25ರಿಂದ ಮಾರ್ಚ್ 25ರ ನಡುವೆ ರಾಮ ಮಂದಿರಕ್ಕೆ ಭೇಟಿ ನೀಡಲು ಬಯಸುವವರಿಗೆ ಬಿಜೆಪಿ ಕಾರ್ಯಕರ್ತರು ನೆರವು ನೀಡಲಿದ್ದಾರೆ’ ಎಂದು ಪಕ್ಷದ ನಾಯಕರೊಬ್ಬರು ಸಭೆಯ ನಂತರ ತಿಳಿಸಿದರು. ರಾಮನ ಮೂರ್ತಿಯ ಪ್ರಾಣಪ್ರತಿಷ್ಠಾಪನೆಗೆ ಸಂಬಂಧಿಸಿದ ಪ್ರತಿ ಕಾರ್ಯಕ್ರಮದಲ್ಲಿಯೂ ಬಿಜೆಪಿ ಕಾರ್ಯಕರ್ತರು ಭಾಗಿಯಾಗಲಿದ್ದಾರೆ ಎಂದು ಅವರು ತಿಳಿಸಿದರು.

ರಾಮ ಮಂದಿರಕ್ಕೆ ಭೇಟಿ ನೀಡಲು ಬಯಸುವವರಿಗೆ ಪ್ರತಿ ಬೂತ್ ಮಟ್ಟದಲ್ಲಿ ಕಾರ್ಯಕರ್ತರು ನೆರವು ಒದಗಿಸಬೇಕು ಎಂಬ ಸ್ಪಷ್ಟ ಸಂದೇಶ ನೀಡಲಾಗಿದೆ ಎಂದು ಮೂಲಗಳು ಹೇಳಿವೆ. ಜನವರಿ 22ರ ದಿನವನ್ನು ಬಿಜೆಪಿ ಕಾರ್ಯಕರ್ತರು ದೀಪಾವಳಿಯ ಮಾದರಿಯಲ್ಲಿ ಸಂಭ್ರಮದಿಂದ ಆಚರಿಸಬೇಕು ಎಂಬ ಸಂದೇಶವನ್ನು ಕೂಡ ರವಾನಿಸಲಾಗಿದೆ.

‘ತಮಿಳುನಾಡಿಗೆ ನೆರವು: ಕೇಂದ್ರ ಬದ್ಧ’

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಚೆನ್ನೈ: ಲೋಕಸಭೆ ಚುನಾವಣೆಗೆ ಕೆಲವೇ ತಿಂಗಳುಗಳಿರುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ತಮಿಳುನಾಡಿಗೆ ಭೇಟಿ ನೀಡಿ ಜನರ ಮನಗೆಲ್ಲುವ ಯತ್ನ ನಡೆಸಿದರು.

ಪೂರ್ಣಗೊಂಡಿರುವ ಯೋಜನೆಗಳ ಉದ್ಘಾಟನೆ ಮತ್ತು ಹೊಸ ಯೋಜನೆಗಳಿಗೆ ಚಾಲನೆ ನೀಡಲು ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಅವರು ತಮಿಳುನಾಡಿನ ಸಂಸ್ಕೃತಿಯನ್ನು ಕೊಂಡಾಡಿದರು. ಈ ರಾಜ್ಯ ‘ಮೇಕ್ ಇನ್ ಇಂಡಿಯಾ’ ಪರಿಕಲ್ಪನೆಯ ‘ಪ್ರಮುಖ ರಾಯಭಾರಿ’ ಎಂದೂ ಬಣ್ಣಿಸಿದರು.

ಮಳೆ ಸಂಬಂಧಿ ಅನಾಹುತ ಮತ್ತು ಪ್ರವಾಹದಿಂದ ಈಚೆಗೆ ಸಂಕಷ್ಟ ಎದುರಿಸಿದ್ದ ತಮಿಳುನಾಡಿಗೆ ಅಗತ್ಯ ನೆರವು ನೀಡಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು. ‘ಪ್ರವಾಹದಿಂದ ಸಾಕಷ್ಟು ನಷ್ಟ ಉಂಟಾಗಿದ್ದು, ಈ ಅನಾಹುತವನ್ನು ರಾಷ್ಟ್ರೀಯ ದುರಂತವಾಗಿ ಘೋಷಿಸಬೇಕು’ ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಇದಕ್ಕೂ ಮುನ್ನ ಪ್ರಧಾನಿಗೆ ಮನವಿ ಮಾಡಿದ್ದರು.

ಈ ಹಿಂದೆ ತಮಿಳುನಾಡು ಭೇಟಿಯ ವೇಳೆ ಪ್ರತಿಭಟನೆಯ ಬಿಸಿ ಎದುರಿಸಿದ್ದ ಪ್ರಧಾನಿ ಅವರಿಗೆ ಈ ಬಾರಿ ಅದ್ದೂರಿ ಸ್ವಾಗತ ಲಭಿಸಿತು. ತಮಿಳುನಾಡು ಬಿಜೆಪಿ ಘಟಕವು ಮೋದಿ ಅವರ ಸ್ವಾಗತಕ್ಕೆ ಭರ್ಜರಿ ಸಿದ್ಧತೆ ನಡೆಸಿತ್ತು. ತಿರುಚಿರಾಪಳ್ಳಿ ವಿಮಾನ ನಿಲ್ದಾಣದಿಂದ ಭಾರತೀದಾಸನ್ ವಿಶ್ವವಿದ್ಯಾಲಯದವರೆಗೆ 11 ಕಿ.ಮೀ. ದಾರಿಯುದ್ದಕ್ಕೂ ಬಿಜೆಪಿ ಬಾವುಟಗಳು ರಾರಾಜಿಸಿದವು.

ತಿರುಚಿರಾಪಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್ ಉದ್ಘಾಟನಾ ಸಮಾರಂಭದಲ್ಲಿ ಸ್ಟಾಲಿನ್ ಮಾತು ಆರಂಭಿಸುತ್ತಿರುವಂತೆಯೇ ‘ಮೋದಿ... ಮೋದಿ...’ ಘೋಷಣೆ ಮೊಳಗಿತು. ಸ್ಟಾಲಿನ್ ಭಾಷಣಕ್ಕೆ ಅನುವು ಮಾಡಿಕೊಡಲು, ಘೋಷಣೆ ನಿಲ್ಲಿಸುವಂತೆ ಪ್ರಧಾನಿ ಸೂಚಿಸಬೇಕಾಯಿತು.

ತಾವು ಜತೆಯಾಗಿ ಭಾಗವಹಿಸಿದ ಎರಡು ಕಾರ್ಯಕ್ರಮಗಳಲ್ಲೂ ಮೋದಿ ಮತ್ತು ಸ್ಟಾಲಿನ್ ‘ಆತ್ಮೀಯತೆ’ ಪ್ರದರ್ಶಿಸಿದರು. ಪ್ರಧಾನಿ ಅವರು ತಮ್ಮ ಭಾಷಣದ ಬಹುಪಾಲು ಭಾಗವನ್ನು, ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳನ್ನು ಬಿಜೆಪಿ ಕಡೆಗಣಿಸುತ್ತಿದೆ ಎಂಬ ಟೀಕೆಗಳಿಗೆ ಪ್ರತ್ಯುತ್ತರ ನೀಡಲಿಕ್ಕಾಗಿಯೇ ಮೀಸಲಿಟ್ಟರು. ಸ್ಟಾಲಿನ್ ಅವರು ಸಾಮಾಜಿಕ ನ್ಯಾಯ ಮತ್ತು ಶಿಕ್ಷಣ ಕ್ಷೇತ್ರದ ಸುಧಾರಣೆ ಬಗ್ಗೆ ಮಾತನಾಡಿದರು.



ಪ್ರಧಾನಿ ನರೇಂದ್ರ ಮೋದಿ ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಪರಸ್ಪರ ಶುಭಾಶಯ ಕೋರಿದರು —ಪಿಟಿಐ ಚಿತ್ರ

ಮುಖ್ಯಾಂಶಗಳು

- ₹ 20,140 ಕೋಟಿ ಮೊತ್ತದ ಯೋಜನೆಗಳಿಗೆ ಚಾಲನೆ
- ತಿರುಚಿರಾಪಳ್ಳಿ ವಿಮಾನ ನಿಲ್ದಾಣದ ಟರ್ಮಿನಲ್–2 ಉದ್ಘಾಟನೆ

ತಮಿಳುನಾಡಿನ ಪ್ರಗತಿಯೊಂದಿಗೆ ಭಾರತವೂ ಪ್ರಗತಿ ಹೊಂದಲಿದೆ. ಕೇಂದ್ರ ಸರ್ಕಾರವು ತಮಿಳುನಾಡಿನ ಜನರೊಂದಿಗಿದೆ

ನರೇಂದ್ರ ಮೋದಿ, ಪ್ರಧಾನಿ

ವಿಜಯಕಾಂತ್ ನೆನಪು: ಈಚೆಗೆ ನಿಧನರಾದ ಡಿಎಂಡಿಕೆ ಪಕ್ಷದ ಸಂಸ್ಥಾಪಕ, ತಮಿಳು ನಟ ವಿಜಯಕಾಂತ್ ಅವರನ್ನು ತಮ್ಮ ಭಾಷಣದಲ್ಲಿ ನೆನಪಿಸಿಕೊಂಡ ಮೋದಿ, ‘ಅವರು ರಾಷ್ಟ್ರೀಯ ಹಿತಾಸಕ್ತಿಗೆ ಎಲ್ಲಕ್ಕಿಂತ ಹೆಚ್ಚಿನ ಆದ್ಯತೆ ನೀಡುತ್ತಿದ್ದರು’ ಎಂದು ಶ್ಲಾಘಿಸಿದರು.

ವಿಮಾನ ನಿಲ್ದಾಣ, ಬಂದರು, ರೈಲ್ವೆ, ಹೆದ್ದಾರಿ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಕ್ಷೇತ್ರಗಳಿಗೆ ಸಂಬಂಧಿಸಿದ ₹ 20,140 ಕೋಟಿ ಮೊತ್ತದ ಯೋಜನೆಗಳಿಗೆ ಪ್ರಧಾನಿ ಚಾಲನೆ ನೀಡಿದರು. ಪೂರ್ಣಗೊಂಡ ಕೆಲವು ಯೋಜನೆಗಳನ್ನು ಉದ್ಘಾಟಿಸಿದರು.

ಪೌರತ್ವ ಕಾಯ್ದೆ: ಲೋಕಸಭಾ ಚುನಾವಣೆಗೂ ಮೊದಲೇ ಜಾರಿ

ನವದೆಹಲಿ (ಪಿಟಿಐ): ಪೌರತ್ವ (ತಿದ್ದುಪಡಿ) ಕಾಯ್ದೆ 2019ರ ನಿಯಮಗಳನ್ನು ಲೋಕಸಭಾ ಚುನಾವಣೆ ಘೋಷಣೆ ಆಗುವ ಬಹಳ ಮೊದಲೇ ಅಧಿಸೂಚನೆಯಲ್ಲಿ ಪ್ರಕಟಿಸಲಾಗುವುದು ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಜಾರಿಗೆ ತಂದಿರುವ ಈ ಕಾಯ್ದೆಯು, ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದಿಂದ 2014ರ ಡಿಸೆಂಬರ್ 31ಕ್ಕೆ ಮೊದಲು ಭಾರತಕ್ಕೆ ಬಂದ ಮುಸ್ಲಿಮೇತರ (ಹಿಂದೂ, ಸಿಖ್, ಜೈನ, ಬೌದ್ಧ ಮತ್ತು ಪಾರ್ಸಿ) ವಲಸಿಗರಿಗೆ ಭಾರತದ ಪೌರತ್ವ ನೀಡಲು ಅವಕಾಶ ಕಲ್ಪಿಸುತ್ತದೆ.

ಕಾಯ್ದೆಯನ್ನು ವಿರೋಧಿಸಿ ದೇಶದಾದ್ಯಂತ ಭಾರಿ ಪ್ರತಿಭಟನೆಗಳು ನಡೆದಿದ್ದವು. ‘ತಿದ್ದುಪಡಿ ಕಾಯ್ದೆಗೆ ಸಂಬಂಧಿಸಿದ ನಿಯಮಗಳನ್ನು ಶೀಘ್ರವೇ ಅಧಿಸೂಚನೆಯಲ್ಲಿ ಪ್ರಕಟಿಸಲಾಗುವುದು. ಇದಾದ ನಂತರದಲ್ಲಿ, ಕಾಯ್ದೆಯನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗುತ್ತದೆ ಮತ್ತು ಅರ್ಹರಿಗೆ ಭಾರತದ ಪೌರತ್ವ ನೀಡಲು ಸಾಧ್ಯವಾಗುತ್ತದೆ’ ಎಂದು ಅಧಿಕಾರಿ ವಿವರಿಸಿದ್ದಾರೆ.

ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸುವವರೆಗೆ ಈ ಕಾಯ್ದೆಯ ಅನುಷ್ಠಾನ ಸಾಧ್ಯವಿಲ್ಲ. ‘ನಿಯಮಗಳು ಸಿದ್ಧವಾಗಿವೆ. ಆನ್‌ಲೈನ್ ಪೋರ್ಟಲ್ ಕೂಡ ಸಿದ್ಧವಿದೆ. ಪೌರತ್ವ ಕೋರುವ ಇಡೀ ಪ್ರಕ್ರಿಯೆಯು ಆನ್‌ಲೈನ್ ಮೂಲಕ ನಡೆಯಲಿದೆ. ವಲಸಿಗರು ತಾವು ಪ್ರಯಾಣ ದಾಖಲೆಗಳು ಇಲ್ಲದೆ ಭಾರತಕ್ಕೆ ಬಂದ ವರ್ಷವನ್ನು ನಮೂದಿಸಬೇಕು. ಪೌರತ್ವ ಕೋರಿ ಅರ್ಜಿ ಸಲ್ಲಿಸುವವರಿಂದ ಯಾವುದೇ ದಾಖಲೆಯನ್ನು ಕೇಳುವುದಿಲ್ಲ’ ಎಂದು ಅಧಿಕಾರಿ ವಿವರಿಸಿದರು.

ಪೌರತ್ವ ತಿದ್ದುಪಡಿ ಕಾಯ್ದೆಯ ಅನುಷ್ಠಾನವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಡಿಸೆಂಬರ್‌ನಲ್ಲಿ ಹೇಳಿದ್ದರು.

ಜೆಎಂಎಂ ನೇತೃತ್ವದ ಮೈತ್ರಿಕೂಟದ ಸಭೆ ಇಂದು

ಜಾರ್ಖಂಡ್ ಮುಖ್ಯಮಂತ್ರಿ ಸೊರೇನ್ ಭವಿಷ್ಯ ಅತಂತ್ರ?

ರಾಂಚಿ (ಪಿಟಿಐ): ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಪತ್ನಿಯನ್ನು ಮುಖ್ಯಮಂತ್ರಿಯಾಗಿ ನೇಮಕ ಮಾಡಲಾಗುವುದು ಎಂಬ ವದಂತಿಗಳ ನಡುವೆಯೇ ಆಡಳಿತಾರೂಢ ಜೆಎಂಎಂ (ಜಾರ್ಖಂಡ್ ಮುಕ್ತಿ ಮೋರ್ಚಾ) ನೇತೃತ್ವದ ಮೈತ್ರಿಕೂಟವು ಬುಧವಾರ ತನ್ನ ಶಾಸಕರ ಸಭೆ ಕರೆದಿದೆ.

ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ಈಚೆಗೆ ಸಮನ್ಸ್ ನೀಡಿದ ಬಳಿಕ ಜೆಎಂಎಂನ ಗಾಂಡೆಯ್ ಕ್ಷೇತ್ರದ ಶಾಸಕ ಸರ್ಫರಾಜ್ ಅಹ್ಮದ್ ಅವರು ಸೋಮವಾರ ದಿಢೀರ್ ರಾಜೀನಾಮೆ ನೀಡಿದ್ದಾರೆ.

ಸೊರೇನ್ ವಿರುದ್ಧ ಜಾರಿ ನಿರ್ದೇಶನಾಲಯ ಕ್ರಮ ಕೈಗೊಂಡರೆ, ಮುಖ್ಯಮಂತ್ರಿಯವರ ಪತ್ನಿ ಕಲ್ಪನಾ ಸೊರೇನ್ ಅವರು ಗಾಂಡೆಯ್ ಸ್ಥಾನದಿಂದ ಸ್ಪರ್ಧಿಸುವ ಅವಕಾಶ ಮಾಡಿಕೊಡಲೆಂದೇ ಸರ್ಫರಾಜ್ ರಾಜೀನಾಮೆ ನೀಡುವಂತೆ ಮಾಡಲಾಗಿದೆ ಎಂದು ಬಿಜೆಪಿ ಆರೋಪಿಸಿದೆ.

‘ಬುಧವಾರ ಸಂಜೆ 4.30ಕ್ಕೆ ಮುಖ್ಯಮಂತ್ರಿಯವರ ನಿವಾಸದಲ್ಲಿ ಮೈತ್ರಿಕೂಟದ ಪಾಲುದಾರ ಪಕ್ಷಗಳ ಶಾಸಕರ ಸಭೆ ಏರ್ಪಡಿಸಲಾಗಿದೆ. ಸಭೆಗೆ ಸಕಾಲದಲ್ಲಿ ಹಾಜರಿರಬೇಕು’ ಎಂದು ಜೆಎಂಎಂ ಪ್ರಧಾನ ಕಾರ್ಯದರ್ಶಿ ವಿನೋದ್ ಕುಮಾರ್ ಪಾಂಡೆ ಅವರು ಸಂಬಂಧಿಸಿದ ಸಚಿವರಿಗೆ ಮತ್ತು ಶಾಸಕರಿಗೆ ಮಂಗಳವಾರ ಬರೆದ ಪತ್ರದಲ್ಲಿ ಕೋರಿದ್ದಾರೆ.

ಸೊರೇನ್ ಅವರಿಗೆ ಜಾರಿ ನಿರ್ದೇಶನಾಲಯದ ಸಮನ್ಸ್ ಜಾರಿ ಮಾಡಿದ ಹಿನ್ನೆಲೆಯಲ್ಲಿ ಪ್ರಸಕ್ತ ರಾಜಕೀಯ ಸನ್ನಿವೇಶದ ಬಗ್ಗೆ ಚರ್ಚಿಸಲು ಮತ್ತು ಕಾರ್ಯತಂತ್ರ ರೂಪಿಸಲು ಸಭೆ ಕರೆಯಲಾಗಿದೆ ಎಂದು ಮೂಲಗಳು ಹೇಳಿವೆ.

ಸರ್ಫರಾಜ್ ಅವರು ಯಾವುದೇ ಕಾರಣ ನೀಡದೆ ರಾಜೀನಾಮೆ ನೀಡಿರುವುದು ಅನುಮಾನಗಳಿಗೆ ಕಾರಣವಾಗಿದೆ. ಸೊರೇನ್ ಅವರು ಅಧಿಕಾರದಿಂದ ಕೆಳಗಿಳಿದು ಪತ್ನಿ ಕಲ್ಪನಾ ಅವರನ್ನು ಮುಖ್ಯಮಂತ್ರಿಯನ್ನಾಗಿ ನೇಮಕ ಮಾಡಬಹುದು. ಅವರು ಗಾಂಡೆಯ್ ಕ್ಷೇತ್ರದಿಂದ ಸ್ಪರ್ಧಿಸಬಹುದು ಎಂದು ಶಂಕಿಸಲಾಗಿದೆ.

ಇ.ಡಿ ನೀಡಿದ ಸಮನ್ಸ್‌ನಲ್ಲಿ, ತಮಗೆ ಅನುಕೂಲಕರವಾಗುವ ದಿನಾಂಕ, ಸ್ಥಳ ಮತ್ತು ವೇಳೆಯನ್ನು ತನಿಖಾಧಿಕಾರಿಗೆ ತಿಳಿಸಬೇಕು ಎಂದು ಸೊರೇನ್ ಅವರಿಗೆ ತಿಳಿಸಲಾಗಿದೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯಿದೆ ಅಡಿ ಹೇಳಿಕೆ ದಾಖಲು ಮಾಡಲಾಗುವುದು. ಜಾರ್ಖಂಡ್‌ನಲ್ಲಿ ಭೂಮಿ ಒಡೆತನವನ್ನು ಮಾಫಿಯಾಗಳು ಅಕ್ರಮವಾಗಿ ಬದಲಿಸಿರುವುದಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲಾಗುವುದು ಎಂದು ಇ.ಡಿ ಹೇಳಿದೆ. ಹೇಮಂತ್ ಸೊರೇನ್ ಅವರಿಗೆ ಈ ಹಿಂದೆ ಆರು ಸಮನ್ಸ್‌ಗಳನ್ನು ನೀಡಿದ್ದು ಅವರು ವಿಚಾರಣೆಗೆ ಹಾಜರಾಗಿರಲಿಲ್ಲ. ಏಳನೇ ಸಮನ್ಸ್ ಅನ್ನು ಡಿಸೆಂಬರ್‌ನಲ್ಲಿ ನೀಡಲಾಗಿದೆ.

ಜಾರ್ಖಂಡ್‌ನಲ್ಲಿ ಈ ವರ್ಷದ ಕೊನೆಯಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಗಾಂಡೆಯ್‌ಗೆ ಈಗ ಉಪಚುನಾವಣೆ ನಡೆಸಲು ಆಗುವುದಿಲ್ಲ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ತಮ್ಮ ಅಭಿಪ್ರಾಯಕ್ಕೆ ಆಧಾರವಾಗಿ ಮುಂಬೈ ಹೈಕೋರ್ಟ್ ಆದೇಶವನ್ನು ಅವರು ಉಲ್ಲೇಖಿಸಿದ್ದಾರೆ.

81 ಸದಸ್ಯರ ಜಾರ್ಖಂಡ್ ವಿಧಾನಸಭೆಗೆ ನವೆಂಬರ್– ಡಿಸೆಂಬರ್‌ನಲ್ಲಿ ಚುನಾವಣೆ ನಡೆಯಲಿದೆ. ಜಾರ್ಖಂಡ್ ವಿಧಾನಸಭೆಯಲ್ಲಿ ಆಡಳಿತರೂಢ ಮೈತ್ರಿಕೂಟವು 47 ಸದಸ್ಯರನ್ನು (ಜೆಎಂಎಂ– 29, ಕಾಂಗ್ರೆಸ್–17 ಮತ್ತು ಆರ್‌ಜೆಡಿ–1) ಹೊಂದಿದೆ.

ವದಂತಿ ಅಲ್ಲಗಳೆದ ಸಿ.ಎಂ

ಗಾಂಡೆಯ್ ಕ್ಷೇತ್ರದಿಂದ ತಮ್ಮ ಪತ್ನಿ ಕಲ್ಪನಾ ಸೊರೇನ್ ಸ್ಪರ್ಧಿಸಬಹುದು ಎಂದು ಹಬ್ಬಿರುವ ವದಂತಿಗಳನ್ನು ಮುಖ್ಯಮಂತ್ರಿ ಹೇಮಂತ್ ಸೊರೇನ್ ಅಲ್ಲಗಳೆದಿದ್ದಾರೆ.

ಇದು ಬಿಜೆಪಿಯ ಕಲ್ಪನೆ ಮಾತ್ರ. ಇದರಲ್ಲಿ ಸ್ವಲ್ಪವೂ ನಿಜಾಂಶವಿಲ್ಲ ಎಂದು ಅವರು ಪಿಟಿಐಗೆ ಹೇಳಿದ್ದಾರೆ.

ಭೂಮಿ ಮತ್ತು ಹಣ ಅಕ್ರಮ ವರ್ಗಾವಣೆಯಲ್ಲಿ ಭಾಗಿಯಾದ ಆರೋಪ ಹೊತ್ತಿರುವ ಸೊರೇನ್ ಅವರು ಪತ್ನಿಯನ್ನು ಮುಖ್ಯಮಂತ್ರಿಯಾಗಿ ನೇಮಕ ಮಾಡುವ ಯತ್ನವು ಪ್ರಜಾಪ್ರಭುತ್ವವನ್ನು ಅಣಕಿಸಿದಂತೆ ಆಗುತ್ತದೆ

ಬಾಬುಲಾಲ್ ಮರಾಂಡಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯದ ಅಧಿಸೂಚನೆ

ಸಂಗಾತಿ ಬದಲು ಮಕ್ಕಳಿಗೆ ಪಿಂಚಣಿ: ಅವಕಾಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಮಹಿಳಾ ಉದ್ಯೋಗಿಗಳು ತಮ್ಮ ಕುಟುಂಬ ಪಿಂಚಣಿಗೆ ಪತಿಯ ಬದಲು ಮಕ್ಕಳ ಹೆಸರನ್ನು ನಾಮನಿರ್ದೇಶನ ಮಾಡಲು ಅವಕಾಶ ನೀಡಲಾಗಿದೆ. ಕೇಂದ್ರ ಸರ್ಕಾರದಿಂದ ಪಿಂಚಣಿ ಪಡೆಯುತ್ತಿರುವ ಮಹಿಳೆಯು ಕೌಟುಂಬಿಕ ದೌರ್ಜನ್ಯ ಪ್ರಕರಣ ದಾಖಲಿಸಿದ್ದರೆ ಅಥವಾ ವಿವಾಹ ವಿಚ್ಛೇದನಕ್ಕೆ ಮುಂದಾಗಿದ್ದಲ್ಲಿ, ಆ ಮಹಿಳೆಯು ತನ್ನ ಕುಟುಂಬ ಪಿಂಚಣಿ ಮೊತ್ತಕ್ಕೆ ಮಕ್ಕಳ ಹೆಸರನ್ನು ನಾಮನಿರ್ದೇಶನ ಮಾಡಲು ಅವಕಾಶ ಸಿಗಲಿದೆ.

ಪತಿಯ ಬದಲು ಮಕ್ಕಳ ಹೆಸರನ್ನು ನಾಮನಿರ್ದೇಶನ ಮಾಡಲು ಅವಕಾಶ ಕಲ್ಪಿಸಿ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಸಚಿವಾಲಯವು ಅಧಿಸೂಚನೆ ಹೊರಡಿಸಿದೆ. ಬೇರೆ ಸಚಿವಾಲಯಗಳ ಜೊತೆ ಸಮಾಲೋಚನೆ ನಡೆಸಿ ಈ ಅಧಿಸೂಚನೆ ಹೊರಡಿಸಲಾಗಿದೆ. ಇದು ‘ಪ್ರಗತಿಪರವಾಗಿದೆ, ಮಹಿಳಾ ಉದ್ಯೋಗಿಗಳು ಹಾಗೂ ಪಿಂಚಣಿದಾರರ ಸಬಲೀಕರಣಕ್ಕೆ ಅವಕಾಶ ಮಾಡಿಕೊಡುತ್ತದೆ’ ಎಂದು ಪ್ರಕಟಣೆ ತಿಳಿಸಿದೆ.



ಮಹಿಳಾ ಉದ್ಯೋಗಿ ಅಥವಾ ಮಹಿಳಾ ಪಿಂಚಣಿದಾರರು ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದಾಗ, ಕೌಟುಂಬಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣ ದಾಖಲಿಸಿದ್ದಾಗ ತಮ್ಮ ಕುಟುಂಬ ಪಿಂಚಣಿಗೆ ಪತಿಯ ಬದಲು ಮಕ್ಕಳ ಹೆಸರನ್ನು ನಾಮನಿರ್ದೇಶನ ಮಾಡಬಹುದೇ ಎಂಬ ಬಗ್ಗೆ ಸಲಹೆ ನೀಡುವಂತೆ ಪಿಂಚಣಿ ಮತ್ತು ಪಿಂಚಣಿದಾರರ ಕಲ್ಯಾಣ ಇಲಾಖೆಗೆ ಬೇರೆ ಬೇರೆ ಇಲಾಖೆಗಳು ಮತ್ತು ಸಚಿವಾಲಯಗಳಿಂದ ಮನವಿಗಳು ಬಂದಿದ್ದವು.

ಈಗಿರುವ ನಿಯಮಗಳ ಅನ್ವಯ, ಕೇಂದ್ರ ಸರ್ಕಾರದ ನೌಕರ ಅಥವಾ ಪಿಂಚಣಿದಾರ ಮೃತಪಟ್ಟ ಸಂದರ್ಭದಲ್ಲಿ, ಕುಟುಂಬ ಪಿಂಚಣಿಯನ್ನು ಮೊದಲಿಗೆ ಸಂಗಾತಿಗೆ ನೀಡಲಾಗುತ್ತದೆ. ಸಂಗಾತಿಯು ಈ ಪಿಂಚಣಿ ಪಡೆಯಲು ಅನರ್ಹ ಆದಲ್ಲಿ ಅಥವಾ ಮೃತಪಟ್ಟಲ್ಲಿ ಮಾತ್ರ ನೌಕರ ಅಥವಾ ಪಿಂಚಣಿದಾರರ ಕುಟುಂಬ ಪಿಂಚಣಿಯ ಮೊತ್ತಕ್ಕೆ ಮಕ್ಕಳು ಹಾಗೂ ಕುಟುಂಬದ ಇತರ ಸದಸ್ಯರು ಅರ್ಹತೆ ಪಡೆಯುತ್ತಾರೆ.

ಮಹಿಳಾ ಉದ್ಯೋಗಿಯು ಹಾಗೂ ಪಿಂಚಣಿದಾರರು ವಿಚ್ಛೇದನಕ್ಕೆ ಸಂಬಂಧಿಸಿದ ಪ್ರಕರಣ ಬಾಕಿ ಇದ್ದಾಗ, ಪತಿಯ ವಿರುದ್ಧ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ ಅಥವಾ ಭಾರತೀಯ ದಂಡ ಸಂಹಿತೆಯ (ಐಪಿಸಿ) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರೆ, ಆಕೆಯು ತನ್ನ ಮರಣದ ನಂತರ ಕುಟುಂಬ ಪಿಂಚಣಿಯು ತನ್ನ ಅರ್ಹ ಮಗುವಿಗೆ ಮೊದಲು ಸಿಗಬೇಕು ಎಂಬ ಮನವಿ ಸಲ್ಲಿಸಬಹುದು.

ಆದರೆ, ಮಹಿಳಾ ಉದ್ಯೋಗಿಯ ಅಥವಾ ಪಿಂಚಣಿದಾರಳ ಮರಣದ ನಂತರ ಆಕೆಯ ಮಕ್ಕಳು ಕುಟುಂಬ ಪಿಂಚಣಿಗೆ ಅರ್ಹರಾಗಿರದಿದ್ದರೆ ಪಿಂಚಣಿಯನ್ನು ಪತಿಗೇ ನೀಡಬೇಕು ಎಂದು ನಿಯಮದಲ್ಲಿ ಹೇಳಲಾಗಿದೆ.

ಮೃತ ಮಹಿಳಾ ಉದ್ಯೋಗಿ, ಪಿಂಚಣಿದಾರಳ ಮಕ್ಕಳು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರೆ ಅಥವಾ ಮಕ್ಕಳಿಗೆ ಮಾನಸಿಕ ಕಾಯಿಲೆ ಇದ್ದಲ್ಲಿ, ಕುಟುಂಬ ಪಿಂಚಣಿಯನ್ನು ಪತಿಗೆ ನೀಡಬೇಕು. ಪತಿಯು, ಆ ಮಕ್ಕಳ ಪೋಷಕ ಆಗಿರಬೇಕು. ಆತ ಪೋಷಕನ ಜವಾಬ್ದಾರಿಯನ್ನು ತೊರೆದರೆ, ಕುಟುಂಬ ಪಿಂಚಣಿಯ ಮೊತ್ತವು ಮಕ್ಕಳ ನಿಜವಾದ ಪೋಷಕನ ಮೂಲಕ ಪಾವತಿ ಆಗಬೇಕು. ಮಕ್ಕಳಿಗೆ 18 ವರ್ಷ ವಯಸ್ಸು ಆದ ನಂತರದಲ್ಲಿ ಕುಟುಂಬ ಪಿಂಚಣಿಯನ್ನು ಅವರಿಗೇ ನೇರವಾಗಿ ಪಾವತಿ ಮಾಡಲಾಗುತ್ತದೆ.

‘ಮಕ್ಕಳು ಕುಟುಂಬ ಪಿಂಚಣಿಗೆ ಅರ್ಹತೆಯನ್ನು ಕಳೆದುಕೊಂಡ ನಂತರದಲ್ಲಿ, ಪಿಂಚಣಿ ಮೊತ್ತವನ್ನು ಪತಿಗೆ ಆತನ ಜೀವಿತಾವಧಿಯವರೆಗೆ ಅಥವಾ ಆತ ಇನ್ನೊಂದು ಮದುವೆ ಆಗುವವರೆಗೆ (ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ) ಪಾವತಿಸಬೇಕು’ ಎಂದು ಹೇಳಲಾಗಿದೆ.

ನೀಟ್ ವಿರುದ್ಧ ಸಹಿ ಅಭಿಯಾನ ವಿರೋಧಿಸಿದ್ದ ಅರ್ಜಿ ವಜಾ

ನವದೆಹಲಿ: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ವಿರುದ್ಧ ಪ್ರತಿಭಟನಾದ್ಯೋತಕವಾಗಿ ಸಹಿ ಅಭಿಯಾನ ನಡೆಸುವುದಾಗಿ ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಅವರು ಘೋಷಣೆ ಮಾಡಿದ್ದರು. ಇದನ್ನು ವಿರೋಧಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ವಿದ್ಯಾರ್ಥಿಗಳು ಮುಗ್ಧರಲ್ಲ. ಅಭಿಯಾನದ ಹಿಂದಿರುವ ಉದ್ದೇಶವನ್ನು ಅವರು ಅರ್ಥ ಮಾಡಿಕೊಳ್ಳುತ್ತಾರೆ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಕೆ.ವಿ. ವಿಶ್ವನಾಥನ್ ಅವರಿದ್ದ ನ್ಯಾಯಪೀಠವು ಅರ್ಜಿದಾರ ಎಂ.ಎಲ್. ರವಿ ಅವರಿಗೆ ಹೇಳಿದೆ. ಈ ರೀತಿಯ ವಿಷಯಗಳು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಅಡಿ ಬರುವುದಿಲ್ಲ ಎಂದೂ ಹೇಳಿದೆ. ನೀಟ್ ವಿರುದ್ಧ 50 ದಿನಗಳಲ್ಲಿ 50 ಲಕ್ಷ ಸಹಿ ಸಂಗ್ರಹಿಸುವುದು ಈ ಅಭಿಯಾನದ ಉದ್ದೇಶವಾಗಿದೆ.

ಶಾಲಾ ಮಕ್ಕಳು ಈಗಾಗಲೇ ಒತ್ತಡದಲ್ಲಿದ್ದಾರೆ. ಅವರು ಪರೀಕ್ಷೆ ಬರೆಯಬೇಕಿದೆ. ಈ ಅಭಿಯಾನವು ಅವರನ್ನು ಬಾಧಿಸುತ್ತದೆ. ಆಡಳಿತಾರೂಢ ಪಕ್ಷವು ಈ ಪರಿಸ್ಥಿತಿಯ ಅನುಕೂಲ ಪಡೆಯುತ್ತಿದೆ ಮತ್ತು ಮಕ್ಕಳನ್ನು ಬೆದರಿಸುತ್ತಿದೆ ಎಂದು ಅರ್ಜಿದಾರರು ಅರ್ಜಿಯಲ್ಲಿ ಹೇಳಿದ್ದರು.

‘ಇಂತಹ ಅಭಿಯಾನಗಳು ಯಾವ ನೀತಿಗಳ ಮೇಲೂ ಪರಿಣಾಮ ಬೀರುವುದಿಲ್ಲ. ಈ ರೀತಿಯ ಪ್ರವೇಶ ಪರೀಕ್ಷೆಗಳನ್ನು ಅಖಿಲ ಭಾರತ ಮಟ್ಟದಲ್ಲೇ ಏರ್ಪಡಿಸಬೇಕು’ ಎಂದು ನ್ಯಾಯಪೀಠ ಹೇಳಿದೆ.

‘ಅದೃಷ್ಟವಶಾತ್, ಈ ತಲೆಮಾರಿನ ಮಕ್ಕಳು ಸಾಕಷ್ಟು ತಿಳಿದುಕೊಂಡಿದ್ದಾರೆ. ಇಂಥ ಅಭಿಯಾನದ ಹಿಂದಿರುವ ಉದ್ದೇಶ ಅವರಿಗೆ ತಿಳಿಯುತ್ತದೆ. ಸಹಿ ಅಭಿಯಾನ ಕೈಗೊಳ್ಳುವುದು ಎಲ್ಲಾ ಪಕ್ಷಗಳ ಹಕ್ಕು. ಆದರೆ ಈ ರೀತಿಯ ಚಟುವಟಿಕೆಗಳಲ್ಲಿ ಮಕ್ಕಳನ್ನು ಬಳಸಿಕೊಳ್ಳಬಾರದು ಎಂದು ಹೇಳಿದೆ.

ಕಾನ್‌ಸ್ಟೆಬಲ್‌ನಿಂದ ಮಹಿಳೆ ಮೇಲೆ ಅತ್ಯಾಚಾರ, ಕೊಲೆ

ಆಗ್ರಾ (ಪಿಟಿಐ): ಪೊಲೀಸ್ ಕಾನ್‌ಸ್ಟೆಬಲ್‌ವೊಬ್ಬ ದಲಿತ ಸಮುದಾಯದ 25 ವರ್ಷದ ಮಹಿಳೆ ಮೇಲೆ ಅತ್ಯಾಚಾರ ಎಸಗಿ, ಕತ್ತು ಹಿಸುಕಿ ಕೊಂದಿರುವ ಕೃತ್ಯ ಉತ್ತರ ಪ್ರದೇಶದ ಆಗ್ರಾದಲ್ಲಿ ನಡೆದಿದೆ.

ಬೆಲನ್‌ಗಂಜ್‌ನಲ್ಲಿರುವ ಕಾನ್‌ಸ್ಟೆಬಲ್‌ನ ಬಾಡಿಗೆ ಕೊಠಡಿಯಲ್ಲಿ ಡಿ.29ರಂದು ಮಹಿಳೆಯ ಶವವು ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಪೊಲೀಸರ ಪ್ರಕಾರ, ಮಹಿಳೆಯು ಕೃತ್ಯ ನಡೆದ ಹಿಂದಿನ ದಿನ ಕಾನ್‌ಸ್ಟೆಬಲ್‌ನ ಬಾಡಿಗೆ ಕೊಠಡಿಗೆ ತೆರಳಿದ್ದರು. ಈ ಸಂಬಂಧ ಆಗ್ರಾ ಠಾಣೆಯ ಕಾನ್‌ಸ್ಟೆಬಲ್ ರಾಘವೇಂದ್ರ ಸಿಂಗ್ (27)ನನ್ನು ಬಂಧಿಸಲಾಗಿದೆ ಎಂದು ಎಸಿಪಿ ಆರ್‌.ಕೆ.ಸಿಂಗ್ ತಿಳಿಸಿದರು. ಬಂಧಿತನ ವಿರುದ್ಧ ವಿವಿಧ ಐಪಿಸಿ ಸೆಕ್ಷನ್ ಹಾಗೂ ಪರಿಶಿಷ್ಟ ಜಾತಿ, ಪಂಗಡದ ದೌರ್ಜನ್ಯ ತಡೆ ಕಾಯ್ದೆ ಅನ್ವಯ ಮೊಕದ್ದಮೆ ದಾಖಲಿಸಲಾಗಿದೆ.

ಕಾನ್‌ಸ್ಟೆಬಲ್ ಮತ್ತು ಮಹಿಳೆ ಪರಸ್ಪರ ಪರಿಚಿತರಾಗಿದ್ದು, ಮಹಿಳೆಯು ಗುರುಗ್ರಾಮದ ‘ಕಿಡ್ನಿ ಸೆಂಟರ್’ವೊಂದರಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತ–ದಕ್ಷಿಣ ಆಫ್ರಿಕಾ 2ನೇ ಟೆಸ್ಟ್ ಇಂದಿನಿಂದ: ಹೊಸ ವರ್ಷಕ್ಕೆ ಜಯದ ರಂಗು ತುಂಬುವ ಛಲ

ರೋಹಿತ್ ಬಳಗಕ್ಕೆ ಗೆಲುವಿನ ತುಡಿತ

ಪ್ರಜಾವಾಣಿ ವಾರ್ತೆ

ಕೇಪ್‌ಟೌನ್: ಹೊಸ ವರ್ಷವನ್ನು ಜಯದ ಸಿಹಿಯೊಂದಿಗೆ ಆರಂಭಿಸುವ ಅವಕಾಶ ಈಗ ರೋಹಿತ್ ಶರ್ಮಾ ನಾಯಕತ್ವದ ಭಾರತ ಕ್ರಿಕೆಟ್ ತಂಡದ ಮುಂದಿದೆ.

ನ್ಯೂಲ್ಯಾಂಡ್ಸ್ ಕ್ರೀಡಾಂಗಣದಲ್ಲಿ ಬುಧವಾರ ದಕ್ಷಿಣ ಆಫ್ರಿಕಾ ಎದುರು ಆರಂಭವಾಗಲಿರುವ ಎರಡನೇ ಟೆಸ್ಟ್ ಪಂದ್ಯದಲ್ಲಿ ಜಯಿಸುವುದರೊಂದಿಗೆ ಹೋದ ವರ್ಷದ ಸೋಲುಗಳ ಕಹಿ ಮರೆಯಬಹುದು. ಅಲ್ಲದೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಅಂಕಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿರುವ ತಂಡವು ಒಂದಿಷ್ಟು ಸ್ಥಾನಗಳ ಏರಿಕೆಯನ್ನೂ ಕಾಣಬಹುದು. ಸದ್ಯ ಪಟ್ಟಿಯಲ್ಲಿರುವ ಒಂಬತ್ತು ತಂಡಗಳ ಪೈಕಿ ಭಾರತದ ಖಾತೆಯಲ್ಲಿ 14 ಅಂಕಗಳು (38.89%) ಇವೆ.

ಹೋದ ವಾರ ಸೆಂಚುರಿಯನ್‌ನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಇನಿಂಗ್ಸ್ ಮತ್ತು 32 ರನ್‌ಗಳ ಅಂತರದಿಂದ ಸೋತಿತ್ತು. ಆ ಕಹಿಯನ್ನು ಮರೆತು ಸರಣಿಯ ಕೊನೆ ಪಂದ್ಯದಲ್ಲಿ ಜಯಿಸುವ ಒತ್ತಡ ರೋಹಿತ್ ಬಳಗದ ಮೇಲಿದೆ. ಒಂದು ವೇಳೆ ಈ ಪಂದ್ಯವು ಡ್ರಾದಲ್ಲಿ ಮುಕ್ತಾಯವಾದರೂ ಆತಿಥೇಯರಿಗೆ ಸರಣಿ ಗೆಲುವು ಒಲಿಯಲಿದೆ. ನ್ಯೂಲ್ಯಾಂಡ್ಸ್‌ನಲ್ಲಿ ಇದುವರೆಗೆ ಆಡಿರುವ ಪಂದ್ಯಗಳಲ್ಲಿ ಭಾರತವು ಒಂದು ಬಾರಿಯೂ ಜಯಿಸಿಲ್ಲ. ಮಹೇಂದ್ರಸಿಂಗ್ ಧೋನಿ ನಾಯಕತ್ವದ ತಂಡವು 13 ವರ್ಷಗಳ ಹಿಂದೆ ಇಲ್ಲಿ ಡ್ರಾ ಸಾಧಿಸಿತ್ತು. ಆಗ ತಂಡದಲ್ಲಿದ್ದ ರಾಹುಲ್ ದ್ರಾವಿಡ್ ಈಗ ಮುಖ್ಯ ಕೋಚ್ ಆಗಿದ್ದಾರೆ.

ಈ ಪಂದ್ಯಕ್ಕಾಗಿ ತಂಡ ಸಂಯೋಜನೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲು ವ್ಯವಸ್ಥಾಪಕರು ಚಿತ್ತ ಹರಿಸಿದ್ದಾರೆ. ಗಾಯದಿಂದ ಚೇತರಿಸಿಕೊಂಡಿರುವ ಎಡಗೈ ಆಲ್‌ರೌಂಡರ್ ರವೀಂದ್ರ ಜಡೇಜ ಈ ಪಂದ್ಯದಲ್ಲಿ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ. ಇದರಿಂದಾಗಿ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಬಲ ಹೆಚ್ಚಾದಂತಾಗಿದೆ. ಕುಕಬುರಾ ಚೆಂಡಿನಲ್ಲಿ ತಮ್ಮ ಸ್ಪಿನ್ ಕೈಚಳಕವನ್ನೂ ಅವರು ತೋರಿಸಬಹುದು.

ಆದರೆ ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಅವರೊಂದಿಗೆ ವೇಗದ ಹೊಣೆ ಹಂಚಿಕೊಳ್ಳುವ ಮೂರನೇ ವೇಗಿಯ ಆಯ್ಕೆ ರೋಹಿತ್ ಮುಂದಿರುವ ಸವಾಲಾಗಿದೆ. ಸೆಂಚುರಿಯನ್‌ನಲ್ಲಿ ಪದಾರ್ಪಣೆ ಮಾಡಿದ್ದ ಕನ್ನಡಿಗ ಪ್ರಸಿದ್ಧ ಕೃಷ್ಣ, ಶಾರ್ದೂಲ್ ಠಾಕೂರ್, ಆವೇಶ್ ಖಾನ್ ಮತ್ತು ಮುಕೇಶ್ ಕುಮಾರ್ ಅವರಲ್ಲಿ ಯಾರಿಗೆ ಅವಕಾಶ ಸಿಗುವುದೆಂದು ಕಾದು ನೋಡಬೇಕಿದೆ.



ಭಾರತ ತಂಡದ ನಾಯಕ ರೋಹಿತ್ ಶರ್ಮಾ –ಪಿಟಿಐ ಚಿತ್ರ



ದಕ್ಷಿಣ ಆಫ್ರಿಕಾ ತಂಡದ ನಾಯಕ ಡೀನ್ ಎಲ್ಗರ್

ಮುಖ್ಯಾಂಶಗಳು

- ವಿದಾಯದ ಪಂದ್ಯದಲ್ಲಿ ಡೀನ್ ಎಲ್ಗರ್‌ಗೆ ನಾಯಕತ್ವ
- ಕಣಕ್ಕಿಳಿಯಲಿರುವ ಭಾರತದ ಆಲ್‌ರೌಂಡರ್ ರವೀಂದ್ರ ಜಡೇಜ
- ರಾಹುಲ್, ವಿರಾಟ್ ಕೊಹ್ಲಿ ಮೇಲೆ ಕಣ್ಣು

ಬಲಾಬಲ

43 ಪಂದ್ಯಗಳು	15 ಭಾರತ ಜಯ
18 ದ.ಅಫ್ರಿಕಾ ಜಯ	10 ಡ್ರಾ

ರೋಹಿತ್ ಸೇರಿದಂತೆ ಅಗ್ರಕ್ರಮಾಂಕದ ಬ್ಯಾಟರ್‌ಗಳಾದ ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್ ಮತ್ತು ಶ್ರೇಯಸ್ ಅಯ್ಯರ್ ಅವರು ಲಯಕ್ಕೆ ಮರಳಿದರೆ ದೊಡ್ಡ ಮೊತ್ತ ಕಲೆಹಾಕುವುದು ಸುಲಭ. ಸೆಂಚುರಿಯನ್‌ನಲ್ಲಿ ವೇಗಿಗಳ ಬೌನ್ಸರ್‌ಗಳನ್ನು ಸಮರ್ಥವಾಗಿ ಎದುರಿಸುವಲ್ಲಿ ಕೆ.ಎಲ್. ರಾಹುಲ್ ಮತ್ತು ವಿರಾಟ್ ಕೊಹ್ಲಿ ಅವರಿಬ್ಬರು ಯಶಸ್ವಿಯಾಗಿದ್ದರು. ಆದರೆ ಉಳಿದವರಿಂದ ಅಂತಹ ಆಟ ಮೂಡಿಬರಲಿಲ್ಲ.

ಭಾರತ ತಂಡವು ಈ ಬಾರಿಯ ಡಬ್ಲ್ಯುಟಿಸಿಯಲ್ಲಿ ಮೂರು ಟೆಸ್ಟ್ ಆಡಿದೆ. ಅದರಲ್ಲಿ ಒಂದು ಜಯ, ಒಂದು ಸೋಲು ಮತ್ತು ಇನ್ನೊಂದು ಪಂದ್ಯದಲ್ಲಿ ಡ್ರಾ ಮಾಡಿಕೊಂಡಿದೆ.

ಆದರೆ ತಮ್ಮ ವೃತ್ತಿಜೀವನದ ಕೊನೆಯ ಟೆಸ್ಟ್ ಆಡುತ್ತಿರುವ ದಕ್ಷಿಣ ಆಫ್ರಿಕಾದ ಬ್ಯಾಟರ್ ಡೀನ್ ಎಲ್ಗರ್, ರೋಹಿತ್ ಪಡೆಗೆ ಅಡ್ಡಗಾಲು ಹಾಕಲು ಸಿದ್ಧರಾಗಿದ್ದಾರೆ. ಮೊದಲ ಪಂದ್ಯದಲ್ಲಿಯೂ ಅವರು ಶತಕ ಗಳಿಸಿ ಭಾರತದ ಕೈಯಿಂದ ಗೆಲುವಿನ ಅವಕಾಶ ಕಸಿದುಕೊಂಡಿದ್ದರು. ತೆಂಬಾ ಬವುಮಾ ಗಾಯಗೊಂಡಿರುವುದರಿಂದ ಎಲ್ಗರ್ ತಂಡವನ್ನು ಮುನ್ನಡೆಸುವರು.

ಕೇಪ್‌ಟೌನ್‌ನಲ್ಲಿ ಉತ್ತಮ ವಾತಾವರಣವಿದೆ. ಮಳೆ ಬರುವ ಸಾಧ್ಯತೆ ಕಡಿಮೆ. ಹದವಾದ ಬಿಸಿಲಿಗೆ ಮೈಯೊಡ್ಡಿರುವ ಪಿಚ್‌ನಲ್ಲಿ ಸಮಪ್ರಮಾಣದಲ್ಲಿ ಕತ್ತರಿಸಿರುವ ಹಸಿರು ಗರಿಕೆಗಳು ಇವೆ. ಮೇಲ್ನೋಟಕ್ಕೆ ಬ್ಯಾಟರ್‌ಗಳ ಸ್ವರ್ಗದಂತೆ ಕಾಣುತ್ತಿದೆ.

ಈ ಪಿಚ್‌ನಲ್ಲಿ ಆತಿಥೇಯ ತಂಡದ ಕಗಿಸೊ ರಬಾಡ, ನಾಂದ್ರೆ ಬರ್ಗರ್ ಮತ್ತು ಮಾರ್ಕೊ ಯಾನ್ಸೆನ್ ಅವರ ಬಿರುಗಾಳಿ ವೇಗದ ಎಸೆತಗಳನ್ನು ಭಾರತ ತಂಡವು ಎದುರಿಸಿ ನಿಲ್ಲುವುದೇ ಎಂಬ ಕುತೂಹಲ ಗರಿಗೆದರಿದೆ.

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ (ವಿಕೆಟ್‌ಕೀಪರ್), ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಆವೇಶ್ ಖಾನ್, ಪ್ರಸಿದ್ಧ ಕೃಷ್ಣ, ಆರ್. ಅಶ್ವಿನ್, ಕೋನಾ ಭರತ್, ಅಭಿಮನ್ಯು ಈಶ್ವರನ್.

ದಕ್ಷಿಣ ಆಫ್ರಿಕಾ: ಡೀನ್ ಎಲ್ಗರ್ (ನಾಯಕ), ಏಡನ್ ಮರ್ಕರಂ, ಟೋನಿ ಡಿ ಝೋರ್ಜಿ, ಕೀಗನ್ ಪೀಟರ್ಸನ್, ಡೇವಿಡ್ ಬೆಡಿಂಗ್‌ಹ್ಯಾಮ್, ಕೈಲ್ ವೆರೆಯನ್ (ವಿಕೆಟ್‌ಕೀಪರ್), ಮಾರ್ಕೊ ಯಾನ್ಸೆನ್, ಕಗಿಸೊ ರಬಾಡ, ಲುಂಗಿ ಗಿಡಿ, ನಾಂದ್ರೆ ಬರ್ಗರ್, ಕೇಶವ್ ಮಹಾರಾಜ್, ವಿಯಾನ್ ಮುಲ್ಡರ್, ಜುಬೇರ್ ಹಮ್ಜಾ, ಟ್ರಿಸ್ಟನ್ ಸ್ಟಬ್ಸ್.

ಪಂದ್ಯ ಆರಂಭ: ಮಧ್ಯಾಹ್ನ 1.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪ್ರೊ ಕಬಡ್ಡಿ: ಮಿಂಚಿದ ಆಶು ಮಲಿಕ್, ಮಂಜಿತ್

ದಬಂಗ್ ಡೆಲ್ಲಿಗೆ ಮಣಿದ ಜೈಂಟ್ಸ್

ನೊಯ್ಡಾ: ಆಶು ಮಲಿಕ್ ಮತ್ತು ಮಂಜಿತ್ ಅವರ ಚುರುಕಿನ ದಾಳಿಯಿಂದ ದಬಂಗ್ ಡೆಲ್ಲಿ ತಂಡವು ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ 35–28ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ನೊಯ್ಡಾ ಒಳಾಂಗಣ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಈ ಪಂದ್ಯದಲ್ಲಿ ವಿರಾಮದ ವೇಳೆ 16–14ರಿಂದ ಮುನ್ನಡೆಯಲ್ಲಿದ್ದ ಜೈಂಟ್ಸ್ ತಂಡವು ನಂತರ ಎಡವಿತು. ರೇಡಿಂಗ್‌ನಲ್ಲಿ ಮಿಂಚಿದ ಮಲಿಕ್ ದಬಂಗ್ ತಂಡಕ್ಕೆ 11 ಅಂಕ ತಂದುಕೊಟ್ಟು ಗೆಲುವಿನ ರೂವಾರಿಯಾದರು. ಜತೆಗೆ ಈ ಆವೃತ್ತಿಯಲ್ಲಿ ನಾಲ್ಕನೇ ಬಾರಿ 'ಸೂಪರ್ ಟೆನ್' ಸಾಧನೆ ಮಾಡಿದರು. ಅವರಿಗೆ ಮಂಜಿತ್ (9) ಸಾಥ್ ನೀಡಿದರು.

ಜೈಂಟ್ಸ್ ಪರವಾಗಿ ಪಾರ್ಥಿಕ್ ದಹಿಯಾ (9) ಏಕಾಂಗಿ ಹೋರಾಟ ನಡೆಸಿದರು. ತಂಡದ ನಾಯಕ ಇರಾನ್‌ನ ಫಜಲ್ ಅತ್ರಾಚಲಿ ಮೂರು ಪಾಯಿಂಟ್ ಗಳಿಸುವ ಮೂಲಕ ಪ್ರೊ ಕಬಡ್ಡಿ ಲೀಗ್‌ನಲ್ಲಿ ಟ್ಯಾಕಲ್‌ನಲ್ಲಿ 450 ಅಂಕ ಗಳಿಸಿದ ಮೊದಲ ಆಟಗಾರ ಎಂಬ ದಾಖಲೆ ಬರೆದರು. ಈ ಪಂದ್ಯದಲ್ಲಿ ಎರಡೂ ತಂಡಗಳು ತಲಾ ಒಂದು ಬಾರಿ ಆಲೌಟ್ ಆದವು.

ಡೆಲ್ಲಿ ತಂಡವು ಆಡಿರುವ 9 ಪಂದ್ಯಗಳಲ್ಲಿ ಐದರಲ್ಲಿ ಗೆಲುವು ಸಾಧಿಸಿದರೆ, ಮೂರರಲ್ಲಿ ಸೋತಿದೆ. ಒಂದರಲ್ಲಿ ಡ್ರಾ ಸಾಧಿಸಿ 30 ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಜೈಂಟ್ಸ್ ತಂಡವು ಆಡಿರುವ 10 ಪಂದ್ಯಗಳಲ್ಲಿ ಆರರಲ್ಲಿ ಗೆದ್ದು, ನಾಲ್ಕರಲ್ಲಿ ಪರಾಭವಗೊಂಡು 34 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಪುಣೇರಿ ಜೈಂಟ್ಸ್ ತಂಡವು 36 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ.

ಇಂದಿನ ಪಂದ್ಯಗಳು

ಹರಿಯಾಣ ಸ್ಟೀಲರ್ಸ್– ಜೈಪುರ ಪಿಂಕ್ ಪ್ಯಾಂಥರ್ಸ್ (ರಾತ್ರಿ 8)

ಯುಪಿ ಯೋಧಾಸ್– ಪುಣೇರಿ ಪಲ್ಟನ್ (ರಾತ್ರಿ 9)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ದಬಂಗ್ ಡೆಲ್ಲಿ ಮತ್ತು ಗುಜರಾತ್ ಜೈಂಟ್ಸ್ ತಂಡಗಳ ನಡುವೆ ಹಣಾಹಣಿ –ಪ್ರೊ ಕಬಡ್ಡಿ ಎಕ್ಸ್ ಚಿತ್ರ

ರೋಹಿತ್, ವಿರಾಟ್ ಜತೆ ಅಗರ್ಕರ್ ಮಾತುಕತೆ?

ಕೇಪ್‌ಟೌನ್ (ಪಿಟಿಐ): ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿಯು ಅಫ್ಗಾನಿಸ್ತಾನ ವಿರುದ್ಧದ ಟಿ20 ಪಂದ್ಯಕ್ಕೆ ತಂಡವನ್ನು ಆಯ್ಕೆ ಮಾಡುವ ಮೊದಲು ಅನುಭವಿ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರೊಂದಿಗೆ ಸಮಾಲೋಚನೆ ನಡೆಸುವ ಸಾಧ್ಯತೆ ಇದೆ.

ಇಬ್ಬರೂ ಆಟಗಾರರು ಜೂನ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲು ಉತ್ಸುಕರಾಗಿದ್ದಾರೆ. 2022ರ ನವೆಂಬರ್‌ನಲ್ಲಿ ಇಂಗ್ಲೆಂಡ್ ವಿರುದ್ಧದ ಟಿ20 ವಿಶ್ವಕಪ್ ಸೆಮಿಫೈನಲ್ ನಂತರ ಈ ಇಬ್ಬರೂ ಭಾರತದ ಪರ ಚುಟುಕು ಮಾದರಿಯಲ್ಲಿ ಆಡಿಲ್ಲ. ಆಯ್ಕೆ ಸಮಿತಿ ಸದಸ್ಯರಾದ ಶಿವಸುಂದರ್ ದಾಸ್, ಸಲೀಲ್ ಅಂಕೋಲಾ ಇಲ್ಲಿಗೆ ಆಗಮಿಸಿದ್ದಾರೆ. ಎರಡನೇ ಟೆಸ್ಟ್ ವೇಳೆಗೆ ಆಯ್ಕೆ ಸಮಿತಿ ಮುಖ್ಯಸ್ಥ ಅಗರ್ಕರ್ ಅವರೊಂದಿಗೆ ಸೇರಿಕೊಳ್ಳಲಿದ್ದಾರೆ.

ಅಫ್ಗಾನಿಸ್ತಾನ ವಿರುದ್ಧದ ತಂಡ ಪ್ರಕಟಿಸುವ ಮೊದಲು ಅಗರ್ಕರ್ ಅವರು ಮುಖ್ಯ ಕೋಚ್ ರಾಹುಲ್ ದ್ರಾವಿಡ್, ರೋಹಿತ್, ಕೊಹ್ಲಿ ಅವರೊಂದಿಗೆ ಚರ್ಚಿಸಲಿದ್ದಾರೆಂದು ತಿಳಿದುಬಂದಿದೆ.

'ಸೂರ್ಯಕುಮಾರ್ ಯಾದವ್ ಮತ್ತು ಹಾರ್ದಿಕ್ ಪಾಂಡ್ಯ ಫಿಟ್ ಆಗಿಲ್ಲ. ಅಫ್ಗನ್ ವಿರುದ್ಧದ ಸರಣಿಯ ನಂತರ, ಐಪಿಎಲ್ ಟೂರ್ನಿಯ ಮೊದಲ ತಿಂಗಳ ಆಧಾರದ ಮೇಲೆ ಎಲ್ಲವನ್ನೂ ನಿರ್ಧರಿಸಲಾಗುವುದು' ಎಂದು ಬಿಸಿಸಿಐನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಟಿಟಿ: ಕರ್ನಾಟಕ ತಂಡದಲ್ಲಿ ನೀತಿ

ಬೆಂಗಳೂರು: ಕೋಲ್ಕತ್ತದಲ್ಲಿ ಇದೇ 6ರಿಂದ 14ರವರೆಗೆ ನಡೆಯಲಿರುವ 85ನೇ ಅಂತರ ರಾಜ್ಯ ಜೂನಿಯರ್ ಮತ್ತು ಯೂತ್ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ರಾಜ್ಯ ತಂಡವನ್ನು ಪ್ರಕಟಿಸಲಾಗಿದೆ.

ತಂಡಗಳು – 17 ವರ್ಷದೊಳಗಿನ ಬಾಲಕಿಯರು: ನೀತಿ ಅಗರ್‌ವಾಲ್, ಪ್ರೇಕ್ಷಾ ತಿಲಾವತ್, ಪ್ರಣವಿ ಎಚ್.ಎ, ಹಿಮಾಂಶಿ ಚೌಧರಿ. **17 ವರ್ಷದೊಳಗಿನ ಬಾಲಕರು:** ಅಭಿನವ್ ಕೆ.ಮೂರ್ತಿ, ವರುಣ್ ಬಿ.ಕಶ್ಯಪ್, ತೇಶುಬ್ ದಿನೇಶ್, ವಿಭಾಸ್ ವಿ.ಜಿ. **19 ವರ್ಷದೊಳಗಿನ ಬಾಲಕಿಯರು:** ತೃಪ್ತಿ ಪುರೋಹಿತ್, ಸಹನಾ ಎಚ್.ಮೂರ್ತಿ, ದೇಶ್ನಾ ಎಂ.ವಂಶಿಕಾ, ಹಿಮಾಂಶಿ ಚೌಧರಿ. 19 ವರ್ಷದೊಳಗಿನ ಬಾಲಕರು: ರೋಹಿತ್ ಶಂಕರ್, ಆಕಾಶ್ ಕೆ.ಜೆ, ವರುಣ್ ಬಿ. ಕಶ್ಯಪ್, ಅಭಿನವ್ ಕೆ. ಮೂರ್ತಿ. ಮ್ಯಾನೇಜರ್/ಕೋಚ್: ಅನಿರ್ಬನ್ ತರಫ್ದಾರ್

ಜಗ್ರೆಬ್ ಓಪನ್: ಭಾರತದ 13 ಪೈಲ್ವಾನರು

ನವದೆಹಲಿ (ಪಿಟಿಐ); ಕ್ರೊವೇಷ್ಯಾದಲ್ಲಿ ನಡೆಯಲಿರುವ ಜಗ್ರೆಬ್ ಓಪನ್ ಕುಸ್ತಿಗೆ ಭಾರತದ 13 ಪೈಲ್ವಾನರ ತಂಡವನ್ನು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಡ್‌ಹಾಕ್ ಸಮಿತಿ ಮಂಗಳವಾರ ಪ್ರಕಟಿಸಿದೆ.

ವೀಸಾಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಶೀಲಿಸಿದ ಬಳಿಕ ತಂಡವನ್ನು ಘೋಷಿಸಲಾಗಿದೆ. ಕ್ರೊವೇಷ್ಯಾ ರಾಜಧಾನಿಯಲ್ಲಿ ಮೊದಲ ವಿಶ್ವ ರ‍್ಯಾಂಕಿಂಗ್ ಟೂರ್ನಿಯು ಜನವರಿಗೆ 10 ರಿಂದ 14ರ ವರೆಗೆ ನಡೆಯಲಿದೆ.

'ವೀಸಾ ಪಡೆಯಲು ಇದ್ದ ಅಡೆತಡೆಯನ್ನು ವಿದೇಶಾಂಗ ಸಚಿವಾಲಯವು ಬಗೆಹರಿಸಿದೆ. ಸಚಿವಾಲಯದ ಸಮಯೋಚಿತ ಮಧ್ಯಪ್ರವೇಶಕ್ಕೆ ಧನ್ಯವಾದಗಳು. ಜಗ್ರೆಬ್‌ಗೆ ಪ್ರಯಾಣಿಸಲಿರುವ ಕುಸ್ತಿಪಟುಗಳು ಮತ್ತು ನೆರವು ಸಿಬ್ಬಂದಿ ಸೇರಿ 25 ಮಂದಿ ಇರುವ ತಂಡವು ಬುಧವಾರ ವೀಸಾಗೆ ಸಂಬಂಧಿಸಿದ ಔಪಚಾರಿಕತೆ ಪೂರ್ಣಗೊಳಿಸಲಿದೆ' ಎಂದು ಅಡ್‌ಹಾಕ್ ಸಮಿತಿ ಅಧ್ಯಕ್ಷ ಭೂಪೇಂದರ್ ಸಿಂಗ್ ಬಾಜ್ವಾ ಮಂಗಳವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಕ್ರೊವೇಷ್ಯಾ ಕುಸ್ತಿ ಫೆಡರೇಶನ್ ಪ್ರಧಾನ ಕಾರ್ಯದರ್ಶಿ ಟಿನ್ ಬ್ರೆಗೊವಿಚ್ ಅವರು 13 ಕುಸ್ತಿಪಟುಗಳು, ಒಂಬತ್ತು ತರಬೇತುದಾರರು, ಸಹಾಯಕ ಸಿಬ್ಬಂದಿ ಮತ್ತು ಮೂವರು ರೆಫರಿಗಳಿಗೆ ಆಹ್ವಾನ ಪತ್ರ ಕಳುಹಿಸಿದ್ದಾರೆ. ತಂಡವು ನಿಗದಿತ ಸಮಯದಲ್ಲಿ ಜಗ್ರೆಬ್ ತಲುಪುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲ ಕ್ರಮಗಳನ್ನೂ ತೆಗೆದುಕೊಂಡಿದ್ದೇವೆ' ಎಂದು ಬಾಜ್ವಾ ಹೇಳಿದರು.

ತಂಡಗಳು: ಪುರುಷರ ಫ್ರೀಸ್ಟೈಲ್: ಅಮನ್ (57ಕೆಜಿ), ಯಶ್ (74 ಕೆಜಿ), ದೀಪಕ್ ಪೂನಿಯಾ (86 ಕೆಜಿ), ವಿಕ್ಕಿ (97ಕೆಜಿ) ಮತ್ತು ಸುಮಿತ್ (125 ಕೆಜಿ) **ಗ್ರೀಕೊ ರೋಮನ್:** ಜ್ಞಾನೇಂದರ್ (60ಕೆಜಿ), ನೀರಜ್ (67ಕೆಜಿ), ವಿಕಾಸ್ (77ಕೆಜಿ), ಸುನಿಲ್ ಕುಮಾರ್ (87ಕೆಜಿ), ನರೀಂದರ್ ಚೀಮಾ (97ಕೆಜಿ) ಮತ್ತು ನವೀನ್ (130 ಕೆಜಿ) **ಮಹಿಳೆಯರು:** ಸೋನಮ್ (62ಕೆಜಿ) ಮತ್ತು ರಾಧಿಕಾ (68ಕೆಜಿ)

ಕೋಚಿಂಗ್ ಮತ್ತು ನೆರವು ಸಿಬ್ಬಂದಿ: ಕುಲದೀಪ್ ಸಿಂಗ್ (ಮುಖ್ಯಸ್ಥ ಮತ್ತು ಕೋಚ್), ವಿನೋದ್ ಕುಮಾರ್, ಸುಜಿತ್, ಶಶಿಭೂಷಣ್ ಪ್ರಸಾದ್, ಮನೋಜ್ ಕುಮಾರ್, ವೀರೇಂದರ್ ಸಿಂಗ್ ಮತ್ತು ಅಲ್ಕಾ ತೋಮರ್ (ತರಬೇತುದಾರರು): ವಿಶಾಲ್ ಕುಮಾರ್ ರೈ (ಫಿಜಿಯೊಥೆರಪಿಸ್ಟ್) ಮತ್ತು ನೀರಜ್ (ಮಸಾಜ್) **ರೆಫರಿಗಳು:** ಸತ್ಯದೇವ್ ಮಲ್ಲಿಕ್, ದಿನೇಶ್ ಧೋಂಡಿಬಾ ಗುಂಡ್ ಮತ್ತು ಸಂಜಯ್ ಕುಮಾರ್.

ಹೊರಗುಳಿದ ಬಜರಂಗ್, ಅಂತಿಮ್



ಬಜರಂಗ್

ನವದೆಹಲಿ(ಪಿಟಿಐ): ಜಗ್ರೆಬ್ ಓಪನ್ ಕುಸ್ತಿಯ ಐದು ವಿಭಾಗಗಳಲ್ಲಿ ಭಾರತ ತಂಡದ ಸ್ಪರ್ಧಿಗಳಿಲ್ಲ. ಖ್ಯಾತನಾಮ ಕುಸ್ತಿಪಟುಗಳು ಈ ಟೂರ್ನಿಯಿಂದ ಹೊರಗುಳಿಯಲು ನಿರ್ಧರಿಸಿದ್ದಾರೆ.

ಒಲಿಂಪಿಯನ್ ಕುಸ್ತಿಪಟು ಬಜರಂಗ್ ಪೂನಿಯಾ, ಏಷ್ಯನ್ ಗೇಮ್ಸ್ ಪದಕ ವಿಜೇತೆ ಅಂತಿಮ್ ಪಂಘಲ್, ಪೂಜಾ ಗೆಹಲೋತ್, ಮಾನ್ಸಿ ಅಹ್ಲಾವತ್ ಮತ್ತು ಕಿರಣ್ ಟೂರ್ನಿಯಿಂದ ಹೊರಗೆ ಉಳಿದಿದ್ದಾರೆ.

'ಈಚೆಗೆ ಹೆಬ್ಬೆರಳಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದೇನೆ. ಇನ್ನೂ ತರಬೇತಿ ಪ್ರಾರಂಭಿಸಿಲ್ಲ. ಸರಿಯಾದ ಅಭ್ಯಾಸವಿಲ್ಲದೆ ಟೂರ್ನಿಗೆ ಹೋಗುವುದರಲ್ಲಿ ಅರ್ಥವಿಲ್ಲ. ಆದರೂ ನಾನು ಫಿಟ್‌ನೆಸ್ ತರಬೇತಿ ಆರಂಭಿಸಿದ್ದೇನೆ' ಎಂದು ಬಜರಂಗ್ ಹೇಳಿದ್ದಾರೆ.

ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ವಿಜೇತೆ ಅಂತಿಮ್ ಅವರು ಪ್ರತಿಷ್ಠಿತ ಅರ್ಜುನ ಪ್ರಶಸ್ತಿಯನ್ನು ಸ್ವೀಕರಿಸುವ ಸಮಾರಂಭದಲ್ಲಿ ಭಾಗವಹಿಸಲು ಬಯಸಿದ್ದರಿಂದ ಅವರು ಟೂರ್ನಿಗೆ ಅಲಭ್ಯರಾಗಿದ್ದಾರೆ.

'ನಾವು ಏಷ್ಯನ್ ಕ್ರೀಡಾಕೂಟದಲ್ಲಿ ತಂಡದ ಭಾಗವಾಗಿದ್ದ ಕುಸ್ತಿಪಟುಗಳ ಒಪ್ಪಿಗೆಯನ್ನು ಕೋರಿದ್ದೆವು. ಕೇವಲ 13 ಮಂದಿ ಮಾತ್ರ ತಮ್ಮ ಒಪ್ಪಿಗೆಯನ್ನು ನೀಡಿದರು. ಇತರ ಐದು ಮಂದಿ ಒಪ್ಪಿಗೆ ನೀಡಲಿಲ್ಲ' ಎಂದು ಅಡ್ ಹಾಕ್ ಸಮಿತಿಯ ಮುಖ್ಯಸ್ಥ ಭೂಪಿಂದರ್ ಸಿಂಗ್ ಬಾಜ್ವಾ ತಿಳಿಸಿದ್ದಾರೆ.

ನಡಾಲ್ ಶುಭಾರಂಭ

ಟೆನಿಸ್: ಡೊಮಿನಿಕ್ ಥೀಮ್‌ಗೆ ಆಘಾತ

ಬ್ರಿಸ್ಬೇನ್ (ಎಎಫ್‌ಪಿ): ಗಾಯದ ಕಾರಣದಿಂದ ಒಂದು ವರ್ಷ ಅಂಕಣದಿಂದ ದೂರ ಉಳಿದಿದ್ದ ಸ್ಪೇನ್‌ನ ರಫೆಲ್ ನಡಾಲ್ ಅವರು ಮಂಗಳವಾರ ಬ್ರಿಸ್ಬೇನ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿಯಲ್ಲಿ ಕಣಕ್ಕೆ ಇಳಿದರು. ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಮೂರನೇ ಶ್ರೇಯಾಂಕದ ಡೊಮಿನಿಕ್ ಥೀಮ್ ಅವರಿಗೆ ಆಘಾತ ನೀಡಿದರು.

22 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ನಡಾಲ್, ಆರಂಭಿಕ ಸುತ್ತಿನಲ್ಲಿ 7–5, 6–1ರಿಂದ ಅಮೆರಿಕ ಓಪನ್ ಮಾಜಿ ಚಾಂಪಿಯನ್ ಆಗಿರುವ ಡೊಮಿನಿಕ್ (ಆಸ್ಟ್ರಿಯಾ) ಅವರನ್ನು ಮಣಿಸಿ ಎರಡನೇ ಸುತ್ತು ಪ್ರವೇಶಿಸಿದರು. 89 ನಿಮಿಷದಲ್ಲಿ ನೇರ ಗೇಮ್‌ಗಳ ಮೂಲಕ ನಡಾಲ್ ಶುಭಾರಂಭ ಮಾಡಿದರು.

ನಡಾಲ್ ಸದ್ಯ 672ನೇ ಕ್ರಮಾಂಕ ಹೊಂದಿದ್ದು, ಬ್ರಿಸ್ಬೇನ್ ನಲ್ಲಿ ವೈಲ್ಡ್ ಕಾರ್ಡ್‌ನಲ್ಲಿ ಆಡುತ್ತಿದ್ದಾರೆ. ಕಳೆದ ಜನವರಿಯಲ್ಲಿ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಸೋತ ನಂತರ ನಡಾಲ್ ಯಾವುದೇ ಪಂದ್ಯದಲ್ಲಿ ಆಡಿಲ್ಲ. ನೊವಾಕ್ ಜೊಕೊವಿಚ್ (24 ಪ್ರಮುಖ ಪ್ರಶಸ್ತಿ) ಮಾತ್ರ ನಡಾಲ್ ಅವರಿಗಿಂತ ಹೆಚ್ಚು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿದ್ದಾರೆ.

'ಇಂದು ನನಗೆ ಪ್ರಾಮಾಣಿಕವಾಗಿ ಭಾವನಾತ್ಮಕ ದಿನವಾಗಿದೆ. ಮೊದಲ ದಿನ ಆಶಾದಾಯಕವಾಗಿತ್ತು' ಎಂದು ನಡಾಲ್ ಪಂದ್ಯದ ಬಳಿಕ ಹೇಳಿದರು.



ರಫೆಲ್ ನಡಾಲ್ –ಎಎಫ್‌ಪಿ ಚಿತ್ರ

ಬ್ಯಾಸ್ಕೆಟ್‌ಬಾಲ್: ಸೆಮಿಗೆ ಪಿಸಿಸಿ, ಎಚ್‌ಬಿಆರ್

ಬೆಂಗಳೂರು: ಪಿಸಿಸಿ ಮತ್ತು ಎಚ್‌ಬಿಆರ್ ತಂಡಗಳು ರಾಜ್ಯ ಜೂನಿಯರ್ (18 ವರ್ಷದೊಳಗಿನ) ಬ್ಯಾಸ್ಕೆಟ್ ಬಾಲ್ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಪಿಸಿಸಿ ತಂಡವು 83–45 ರಿಂದ ವಿಜಯನಗರ ಬಿಸಿ ಮೈಸೂರು ತಂಡವನ್ನು ಮಣಿಸಿತು. ಪಿಸಿಸಿ ತಂಡದ ವರುಣ್ ಮತ್ತು ಆಗ್ನೇಯ ಕ್ರಮವಾಗಿ 28 ಮತ್ತು 19 ಅಂಕಗಳೊಂದಿಗೆ ಮಿಂಚಿ ದರು. ಎಚ್‌ಬಿಆರ್ ಬಿ.ಸಿ ತಂಡವು 69–65 ರಿಂದ ಸದರ್ನ್ ಬ್ಲೂಸ್ ತಂಡವನ್ನು ಸೋಲಿಸಿತು.

ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಬೀಗಲ್ಸ್ ಬಿ.ಸಿ 68–55 ರಿಂದ ಬೆಂಗಳೂರು ವ್ಯಾನ್‌ಗಾರ್ಡ್ಸ್ ತಂಡವನ್ನು, ದಾವಣಗೆರೆ ಬಿ.ಸಿ 66–62ರಿಂದ ಅಪ್ಪಯ್ಯ ಬಿ.ಸಿ ತಂಡವನ್ನು ಸೋಲಿಸಿದವು. ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಡಿವೈಇಎಸ್ ಮೈಸೂರು 65–29ರಿಂದ ಸದರ್ನ್ ಬ್ಲೂಸ್ ತಂಡವನ್ನು, ಮೌಂಟ್ಸ್ ಕ್ಲಬ್ 67–43ರಿಂದ ಯಂಗ್ ಓರಿಯನ್ಸ್ ಎಸ್.ಸಿ ತಂಡವನ್ನು ಮಣಿಸಿತು. ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಬೆಂಗಳೂರು ವ್ಯಾನ್‌ಗಾರ್ಡ್ಸ್ 62–45ರಿಂದ ಡಿವೈಇ ಎಸ್ ವಿಜಯಪುರ ತಂಡವನ್ನು; ಜೆಎಸ್‌ಸಿ ತಂಡವು 52–15ರಿಂದ ವಿವೇಕ್ಸ್ ಎಸ್.ಸಿ ತಂಡವನ್ನು ಸೋಲಿಸಿದವು.

ರಾಜ್ಯ ತಂಡಕ್ಕೆ ವಿಶ್ರುತ್, ವಂದನಾ ಸಾರಥ್ಯ


ಬೆಂಗಳೂರು: ವಿಶ್ರುತ್ ಎಸ್. ಮತ್ತು ವಂದನಾ ಪಿ. ಗೌಡ ಅವರು ಇದೇ 5ರಿಂದ 7ರವರೆಗೆ ಹರಿಯಾಣದಲ್ಲಿ ನಡೆಯಲಿರುವ ಜೂನಿಯರ್ ಮತ್ತು ಸಬ್ ಜೂನಿಯರ್ ರಾಷ್ಟ್ರೀಯ ಡಾಡ್ಜ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಕರ್ನಾಟಕದ ಜೂನಿಯರ್ ಬಾಲಕ ಮತ್ತು ಬಾಲಕಿಯರ ತಂಡವನ್ನು ಮುನ್ನಡೆಸಲಿದ್ದಾರೆ.

ರಾಷ್ಟ್ರೀಯ ಟೂರ್ನಿಯಲ್ಲಿ ಪ್ರತಿನಿಧಿಸುವ ರಾಜ್ಯ ತಂಡವನ್ನು ಕರ್ನಾಟಕ ರಾಜ್ಯ ಡಾಡ್ಜ್‌ಬಾಲ್ ಸಂಸ್ಥೆ ಪ್ರಕಟಿಸಿದೆ.

ಜೂನಿಯರ್ ಬಾಲಕರು: ವಿಶ್ರುತ್ ಎಸ್. (ನಾಯಕ), ಸುನಿಲ್ ಕುಮಾರ್ ಕೆ. (ಉಪನಾಯಕ), ಕೆನೆತ್ ಕೆ. ಸಾಜಿ, ತರುಣ್ ಕೆ, ದ್ರುಪದ್ ದೇವ್ ಬಿ.ಪಿ, ಪೃಥ್ವಿಕ್ ಯು, ಪ್ರಥಮ್ ಎಸ್. ಗೌಡ, ಸುಪ್ರಿತ್ ಸಿ. ಭಾಲಿ, ಮನೀಶ್, ತನುರಾಮ್ ಆರ್, ಕುಶಾಲ್ ಪಿ.ವಿ, ಶುಭೋದಯ ಎಸ್. (ಕೋಚ್- ಸಂಪತ್ ಮತ್ತು ಟೀಂ ಮ್ಯಾನೇಜರ್- ವಿಜೇತ್ ಕುಮಾರ್)

ಜೂನಿಯರ್ ಬಾಲಕಿಯರು: ವಂದನಾ ಪಿ. ಗೌಡ (ನಾಯಕ), ಪೂರ್ವಿ ಅಶೋಕ್ ಅಂಗಡಿ (ಉಪನಾಯಕಿ), ವಿ. ಪ್ರಗತಿ, ನೇಹಾ ಕುಮಾರಿ, ಶ್ರೇಯಾ ಶೆಣೈ, ಎಸ್. ವಿನಿತಾ, ಯುಕ್ತ ಜಿ.ಎಂ, ಮೋನಿಶಾ ಎ, ತನುಷ್ಕಾ, ಖುಷ್ಬು (ತಂಡದ ವ್ಯವಸ್ಥಾಪಕಿ- ಭೂಮಿಕಾ). **ಸಬ್ ಜೂನಿಯರ್ ಬಾಲಕರು:** ಭರತ್ ವಿ.ಬಿ (ನಾಯಕ), ಜೆ.ನೂತನ್ ಗೌಡ (ಉಪನಾಯಕ), ಹರ್ಷ ಗೌಡ, ವಿಶ್ವ ಐ.ಎಂ, ದೀಕ್ಷಿತ್, ಪಿ.ಕಾರ್ತಿಕ್, ಕಂಪಲ್ಲಿ ಮೊಹ್ನೀಶ್, ವಿನಯ್ ಎಂ, ನಿಶಾಂತ್ ಎನ್.ಎಸ್, ಸಮರ್ಥ್ ಬಿ, ಧನುಷ್ ಆರ್, ತರುಣ್ ಎಂ. (ಕೋಚ್ – ರಾಘವೇಂದ್ರ).

ಸಬ್ ಜೂನಿಯರ್ ಬಾಲಕಿಯರು: ವರ್ಷಾ ರಾಜ್ (ನಾಯಕಿ), ನೇಹಾ ಕುಮಾರಿ (ಉಪನಾಯಕಿ), ವರ್ಷಿತಾ ಎನ್, ಈಶಾನ್ಯಾ ಆರ್, ಲೀಶಾ ಡಿ. ಚವಾಣ್, ಆದ್ಯಶ್ರೀ, ಕುಂದವಿ ಕೆ, ದೀಪಿಕಾ, ಶೈಲಶ್ರೀ ಆರ್.ಜಿ, ರಾಜೇಶ್ವರಿ ಕನಕರಡ್ಡಿ, ವರ್ಣಿತಾ ಎಂ.ಎ.



ವಿಶ್ರುತ್ ಎಸ್.



ವಂದನಾ ಗೌಡ



ಭರತ್ ವಿ.ಬಿ



ವರ್ಷಾ ರಾಜ್

ಏಕದಿನ ಕ್ರಿಕೆಟ್: ಲಿಚ್‌ಫಿಲ್ಡ್ ಶತಕ; ಆಸ್ಟ್ರೇಲಿಯಾಗೆ ಸರಣಿ

ಭಾರತದ ವನಿತೆಯರಿಗೆ ಭಾರಿ ನಿರಾಸೆ

ಮುಂಬೈ (ಪಿಟಿಐ): ಆಸ್ಟ್ರೇಲಿಯಾದ ಆರಂಭಿಕ ಬ್ಯಾಟರ್ ಫೋಯಿಬಿ ಲಿಚ್‌ಫೀಲ್ಡ್ ಶತಕದ ಅಬ್ಬರದ ಮುಂದೆ ಭಾರತ ತಂಡವು ಇಲ್ಲಿ ನಡೆದ ಮೂರನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರಿ ಅಂತರದಿಂದ ಸೋತಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ 190 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಸರಣಿಯನ್ನು 3–0ಯಿಂದ ಕ್ಲೀನ್‌ಸ್ವೀಪ್ ಮಾಡಿತು.

ಟಾಸ್ ಗೆದ್ದು ಬ್ಯಾಟಿಂಗ್ ಆರಂಭಿಸಿದ ಆಸ್ಟ್ರೇಲಿಯಾ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 338 ರನ್‌ಗಳ ಬೃಹತ್ ಮೊತ್ತ ಪೇರಿಸಲು ಲಿಚ್‌ಫೀಲ್ಡ್ (119; 125ಎ, 4X16, 6X1) ಮತ್ತು ನಾಯಕಿ ಅಲೀಸಾ ಹೀಲಿ (82; 85ಎ, 4X4, 6X3) ಕಾರಣರಾದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರೂ 189 ರನ್ ಸೇರಿಸಿದರು. ಗುರಿ ಬೆನ್ನಟ್ಟಿದ ಭಾರತ ತಂಡವು 32.4 ಓವರ್‌ಗಳಲ್ಲಿ 148 ರನ್‌ಗಳಿಗೆ ಆಲೌಟ್ ಆಯಿತು.

ಲಿಚ್‌ಫೀಲ್ಡ್ ಶತಕ: 19ನೇ ಓವರ್‌ನಲ್ಲಿ ತಮಗೆ ಸಿಕ್ಕ ಜೀವದಾನವನ್ನು ಸಮರ್ಥವಾಗಿ ಬಳಸಿಕೊಂಡ ಲಿಚ್‌ಫೀಲ್ಡ್ ಶತಕ ಗಳಿಸಿದರು. 29ನೇ ಓವರ್‌ನವರೆಗೂ ಆರಂಭಿಕ ಜೋಡಿಯು ಭಾರತದ ಬೌಲಿಂಗ್ ಪಡೆಯನ್ನು ಕಾಡಿತು. ಪೂಜಾ ವಸ್ತ್ರಾಕರ್ ಎಸೆತದಲ್ಲಿ ಹೀಲಿ ಕ್ಲೀನ್‌ಬೌಲ್ಡ್ ಆಗುವುದರೊಂದಿಗೆ ಜತೆಯಾಟ ಮುರಿಯಿತು.

ಶ್ರೇಯಾಂಕಾಗೆ ಮೂರು ವಿಕೆಟ್: ಬೆಂಗಳೂರಿನ ಆಟಗಾರ್ತಿ ಶ್ರೇಯಾಂಕಾ ಪಾಟೀಲ ತಾವು ಹಾಕಿದ 36ನೇ ಓವರ್‌ನಲ್ಲಿ ತೆಹಲಿಯಾ ಮೆಕ್‌ಗ್ರಾ ಮತ್ತು ಬೆತ್ ಮೂನಿ ವಿಕೆಟ್‌ಗಳನ್ನು ಗಳಿಸಿದರು. ಈ ಹಂತದಲ್ಲಿ ತಂಡವು 4ಕ್ಕೆ 216 ರನ್ ಗಳಿಸಿತ್ತು. ಆಗ ಆಸ್ಟ್ರೇಲಿಯಾ ತಂಡವನ್ನು ನಿಯಂತ್ರಿಸುವ ಅವಕಾಶ ಆತಿಥೇಯರಿಗೆ ಇತ್ತು.

ಆದರೆ ಆ್ಯಷ್ಲೆ ಗಾರ್ಡನರ್ (30; 27ಎ), ಅನಾಬೆಲ್ ಸದರ್ಲೆಂಡ್ (23 ರನ್) ಮತ್ತು ಅಲನಾ ಕಿಂಗ್ (ಔಟಾಗದೆ 26) ತಂಡವು ತ್ರಿಶತಕದ ಗಡಿ ದಾಟಲು ಕಾಣಿಕೆ ನೀಡಿದರು. ಶ್ರೇಯಾಂಕಾ ಅವರು ಇನಿಂಗ್ಸ್‌ನ 47ನೇ ಓವರ್‌ನಲ್ಲಿ ಗಾರ್ಡನರ್ ಅವರನ್ನು ಕ್ಲೀನ್‌ಬೌಲ್ಡ್ ಮಾಡುವಲ್ಲಿ ಯಶಸ್ವಿಯಾದರು.

ಗುರಿ ಬೆನ್ನಟ್ಟಿದ ಭಾರತದ ಬ್ಯಾಟಿಂಗ್‌ನಲ್ಲಿ ದಿಟ್ಟ ಹೋರಾಟ ಕಂಡುಬಂದಿದ್ದು ಕಡಿಮೆ. ಸ್ಮೃತಿ ಮಂದಾನ, ಜೆಮಿಮಾ ಮತ್ತು ದೀಪ್ತಿ ಅವರನ್ನು ಬಿಟ್ಟರೆ ಉಳಿದವರಿಂದ ನಿರೀಕ್ಷಿತ ಆಟ ಮೂಡಿಬರಲಿಲ್ಲ.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 338 (ಫೋಯಿಬಿ ಲಿಚ್‌ಫೀಲ್ಡ್ 119, ಅಲೀಸಾ ಹೀಲಿ 82, ಆ್ಯಷ್ಲೆ ಗಾರ್ಡನರ್ 30, ಅನಾಬೆಲ್ ಸದರ್ಲೆಂಡ್ 23, ಅಲನಾ ಕಿಂಗ್ ಔಟಾಗದೆ 26, ಶ್ರೇಯಾಂಕಾ ಪಾಟೀಲ 57ಕ್ಕೆ3, ಅಮನ್ಜೋತ್ ಕೌರ್ 70ಕ್ಕೆ2) ಭಾರತ: 32.4 ಓವರ್‌ಗಳಲ್ಲಿ 148 (ಸ್ಮೃತಿ ಮಂದಾನ 29, ಜೆಮಿಮಾ ರಾಡ್ರಿಗಸ್ 25, ದೀಪ್ತಿ ಶರ್ಮಾ ಔಟಾಗದೇ 25, ಪೂಜಾ ವಸ್ತ್ರಾಕರ್ 14, ಮೇಘನ್ ಶುಟ್ 23ಕ್ಕೆ2, ಜಾರ್ಜಿಯಾ ವೇರ್‌ಹ್ಯಾಮ್ 23ಕ್ಕೆ3, ಅಲನಾ ಕಿಂಗ್ 21ಕ್ಕೆ2, ಅನಾಬೆಲ್ ಸದರ್ಲೆಂಡ್ 9ಕ್ಕೆ2) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 190 ರನ್‌ಗಳ ಜಯ ಹಾಗೂ 3–0ಯಿಂದ ಸರಣಿ. ಪಂದ್ಯ ಹಾಗೂ ಸರಣಿ ಆಟಗಾರ್ತಿ ಫೋಯಿಬಿ ಲಿಚ್‌ಫೀಲ್ಡ್.



ಆಸ್ಟ್ರೇಲಿಯಾದ ಫೋಯಿಬಿ ಲಿಚ್‌ಫೀಲ್ಡ್ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ